೧೯೮೬ನೇ ಇಸವಿಯ ಕರ್ನಾಟಕ ವ್ಯವಸಾಯ ಉತ್ಪನ್ನ ಮಾರಾಟಗಳ ನಿಯಂತ್ರಣ) ತಿದ್ದುಪಡಿ ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಸಚಿವರು).—ಮಾನ್ಯ ಅಧ್ಯಕ್ಷರೇ, ೧೯೮೬ನೇ ಇಸವಿಯ ಕರ್ನಾಟಕ ವ್ಯವಸಾಯ ಉತ್ಪನ್ನ ಮಾರಾಟಗಳ (ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದ ರೈತರ ಹಿತರಕ್ಷಣೆ ಮಾಡುವ ಸಲುವಾಗಿ, ಕರ್ನಾಟಕದಲ್ಲಿ ೧೧೩ ಮಾರುಕಟ್ಟೆ ಸಮಿತಿಗಳನ್ನು ರಚಿಸಿ, ೧೧೩ ಮಾರುಕಟ್ಟೆಗಳನ್ನು ನಿರ್ಮಿಸಿದ್ದೇವೆ. ೨೦೦ ಸಬ್ ಮಾರ್ಕೆಟ್‌ಗಳನ್ನು ನಿರ್ಮಿಸಿದ್ದೇವೆ. ಅವರು ಬೆಳೆದ ಮಾಲನ್ನು ಬಹಳ ಕಷ್ಟಪಟ್ಟು ರೈತ, ತಾನು ತನ್ನ ಹೆಂಡತಿಮಕ್ಕಳು, ರಾತ್ರಿ ಹಗಲು ದುಡಿದು ಸಂಪಾದನೆ ಮಾಡುವ, ಬೆಳದ ವಸ್ತುಗಳನ್ನು, ಈ ಒಂದು ರೆಗ್ಯುಲೇಟೆಡ್ ಯಾರ್ಡಿಗೆ ತೆಗೆದು ಕೊಂಡು ಹೋದಾಗ, ಸರಿಯಾದ ಧಾರಣೆ ಅವನಿಗೆ ಸಿಗಬೇಕು, ಸರಿಯಾದ ತೂಕ ಸಿಗಬೇಕು, ಯಾವುದೇ ವಿಧವಾದ ತೊಂದರೆ ಆಗಬಾರದು ಎಂದು ಇಲ್ಲಿ ಈ ಕಾನೂನನ್ನು ರಚಿಸಿದ್ದೇವೆ. ಈ ಕಾನೂನನ್ನು ಜಾರಿಗೊಳಿಸಿದಾಗ, ಹಲವಾರು ನ್ಯೂನತೆಗಳು ನಮ್ಮ ಸರ್ಕಾರದ ಗಮನಕ್ಕೆ ಬಂದು ಯಾವ ಒಂದು ಯೋಚನೆಯನ್ನು ಇಟ್ಟುಕೊಂಡು ರಾಜ್ಯದಲ್ಲಿ ಈ ಮಾರುಕಟ್ಟೆ ಯಾರ್ಡ್‌ಗಳನ್ನು ನಿರ್ಮಾಣ ಮಾಡಿದ್ದೇವೆಯೋ, ಯಾವ ಯೋಜನೆ ಇಟ್ಟುಕೊಂಡು ಹಿಂದೆ, ಬ್ಯಾಂಕಿನಿಂದ ಸುಮಾರು ೧೨ ಕೋಟಿ ರೂಪಾಯಿಗಳನ್ನು ತಂದು ಮಾರುಕಟ್ಟೆ ಆವರಣವನ್ನು ಅಭಿವೃದ್ಧಿಗೊಳಿಸಿದೆವೋ ಯಾವ ಒಳ್ಳೆಯ ಉದ್ದೇಶವನ್ನು ಇಟ್ಟುಕೊಂಡು ಕಳೆದ ಮೂರು ವರ್ಷಗಳಿಂದ ೨೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, ರೈತರಿಗೆ ಮಾರುಕಟ್ಟೆ ಪ್ರದೇಶಗಳಲ್ಲಿ, ರಸ್ತೆಗಳನ್ನು ನಿರ್ಮಾಣ ಮಾಡಿ, ಅವರಿಗೆ, ಎಲ್ಲಾ ಸೌಲಭ್ಯಗಳನ್ನು ಕೊಡುವುದರ ಮೂಲಕ ಪ್ರಯತ್ನ ಪಟ್ಟೆವೋ, ಆ ಉದ್ದೇಶ ನೂರಕ್ಕೆ ನೂರರಷ್ಟು ಸಫಲವಾಗಲಿಲ್ಲ. ಅವರಿಗೆ ಎಲ್ಲಾ ಸೌಲಭ್ಯಗಳನ್ನು

೧೨-೩೦ ಪಿ. ಎಂ.

ಕೊಡುವುದಕ್ಕೆ ಪ್ರಯತ್ನ ಪಟ್ಟಿದ್ದೇವೆ. ಆದರೆ ಉದ್ದೇಶ ನೂರಕ್ಕೆ ನೂರರಷ್ಟು ಸಫಲವಾಗಿಲ್ಲ ರೈತರ ಶೋಷಣೆ ನಿಲ್ಲಲಿಲ್ಲ. ೧೦೦ಕ್ಕೆ ೨ ರೂಪಾಯಿ, ಮಾತ್ರ ದಳ್ಳಾಳಿಗಳು ಕಮಿಷನ್ ತೆಗೆದುಕೊಳ್ಳಬೇಕು ಎಂದು ಕಾನೂನು ಇದ್ದರೂ ಸಹ ದುರದೃಷ್ಟವಶಾತ್ ಕೆಲವು ಜನ ದಳ್ಳಾಳಿಗಳು ಏನೂ ಗೊತ್ತಿಲ್ಲದಂಥ ರೈತರ ಸುಲಿಗೆಯನ್ನು ಮಾಡುತ್ತಾ ಇದ್ದಾರೆ. ೬ ರೂಪಾಯಿಗಳು ೮ ರೂಪಾಯಿಗಳವರೆಗೆ ಕಮಿಷನ್ ತೆಗೆದುಕೊಳ್ಳುತ್ತಾ ಇದ್ದಾರೆ ಇದನ್ನು ನಿಲ್ಲಿಸಬೇಕು. ನಾವೂ ಕೂಡ ಸರ್ಕಾರದವರು ಕಳೆದ ೩ ವರ್ಷಗಳಿಂದ ಈ ಬಗ್ಗೆ ಸತತವಾಗಿ ಪ್ರಯತ್ನ ಪಡುತ್ತಾ ಇದ್ದೇವೆ. ಮೊದಲು ಮಾರ್ಕೆಟ್ ಫೀ ಜಾಸ್ತಿ ಇತ್ತು. ನಾವು ೧೯೮೩-೮೪ ರಲ್ಲಿ ೨ ರೂಪಾಯಿಗಳ ಮಾರ್ಕೆಟ್ ಫೀ ಹಾಕಿದಾಗ ಬಂದಿದ್ದು ೧೩ ಕೋಟಿಯಾದರೆ ಕಳೆದ ವರ್ಷ ೧೧ ಕೋಟಿ ೯೦ ಲಕ್ಷ ರೂಪಾಯಿಗಳು ವಸೂಲಾಗಿದೆ. ಆಗ ರಾಜ್ಯದಲ್ಲಿ ಕ್ಷಾಮಡಾಮರ ಇತ್ತು. ಮಾರ್ಕೆಟ್‌ಫೀ ಮುಖ್ಯವಲ್ಲ, ರೈತರ ಶೋಷಣೆ ತಪ್ಪಿಸುವುದು ಬಹಳ ಮುಖ್ಯ, ರೈತನಿಗೆ ಸರಿಯಾದ ತೂಕ ಒದಗಿಸುವುದು ಮುಖ್ಯ. ಅವನು ಮಾಲನ್ನು ತೆಗೆದುಕೊಂಡು ಬಂದು ಮಾರಾಟ ಮಾಡಿಕೊಂಡು ವಾಪಸ್ ಹೋಗುವಾಗ ಅವನು ಬೆಳೆದ ಮಾಲಿಗೆ ನ್ಯಾಯವಾದ ಧಾರಣೆ ಸಿಕ್ಕಿ ಅವನ ಮನಸ್ಸಿಗೆ ತೃಪ್ತಿಯು ದೊರೆತು ಸಂತೋಷದಿಂದ ಹೋಗುವುದು ಮುಖ್ಯ. ಒಂದು ಸಾರಿ ಅವನು ಬಂದು ಹೋಗಬೇಕಾದರೆ ನಿಟ್ಟುಸಿರು ಬಿಟ್ಟು ಹೋಗುತ್ತಾನೆ. ಇದನ್ನು ನಿಲ್ಲಿಸಬೇಕು ಎಂದು ಪ್ರಯತ್ನ ಪಟ್ಟೆವು. ಈರೀತಿಯಾದಾಗ ಹಲವಾರು ಕಡೆಗಳಲ್ಲಿ ಅಧಿಕಾರಿಗಳ ಮೇಲೆ ಉಗ್ರ ಕ್ರಮ ಕೈಗೊಂಡಿದ್ದೇವೆ. ಎಲ್ಲರೂ ದಳ್ಳಾಳಿಗಳು ಮೋಸಗಾರರಲ್ಲ. ದುರದೃಷ್ಟವಶಾತ್ ಬಹಳ ಜನ ಈ ರೀತಿ ಮಾಡುತ್ತಾ ಇದ್ದಾರೆ. ಉದಾಹರಣೆಗೆ ಹೇಳುವುದಾದರೆ, ನಾನು ಕೆಲವು ಮಾರ್ಕೆಟ್‌ಗಳಲ್ಲಿ ಅವರು ಪಡೆದ ಬಿಲ್‌ಗಳನ್ನು ತರಿಸಿದ್ದೇನೆ. ಕೆಲವು ಕಡೆ ಬಿಲ್‌ಗಳಲ್ಲಿ ಸೈನ್ ಇಲ್ಲ, ಯಾವ ಅಂಗಡಿ ಎಂದು ಇಲ್ಲ, ಯಾರು ಮಾಲು ಸಪ್ಲೈ ಮಾಡಿದ್ದು ಎಂದು ಇಲ್ಲ, ಇನ್ನು ಕೆಲವು ಕಡೆ ಬಿಲ್ಲಿನಲ್ಲಿ ಕಾನೂನು

ಪ್ರಕಾರವಾಗಿ ಎಷ್ಟು ತೆಗೆದುಕೊಳ್ಳಬೇಕೋ ಅಷ್ಟು ತೆಗೆದುಕೊಂಡಿದ್ದಾರೆ. ಆದರೆ ಒಂದುಗಡೆ ಹೆಚ್ಚಿಗೆ ಮುರಿದುಕೊಂಡಿದ್ದಾರೆ. ಇದು ಮೋಸವಾಗುತ್ತಿದೆ. ಇದನ್ನೆಲ್ಲಾ ನಿಲ್ಲಿಸಬೇಕಾದರೆ ಬಹಳ ಮುಖ್ಯವಾಗಿ ನಾವು ತಂದಿರುವ ಬದಲಾವಣೆ ಎಂದರೆ ರೈತ ತಾನು ಮಾರುವ ವಸ್ತುಗಳಿಗೆ ಕಮಿಷನ್ ಕೊಡಬೇಕಾದ್ದಿಲ್ಲ. ಕಮಿಷನ್‌ದಾರರು ಯಾರು ಕೊಂಡುಕೊಳ್ಳುತ್ತಾರೆ ಅವರಿಂದ ಕಮಿಷನ್ ತೆಗೆದುಕೊಳ್ಳಬೇಕು. ಈ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಇದು ಬಹಳ ಮುಖ್ಯವಾದುದು. ಇದರ ಜೊತೆಗೆ ಹಲವಾರು ತಿದ್ದುಪಡಿಗಳನ್ನು ಇದರಲ್ಲಿ ಸೂಚಿಸಿದ್ದೇವೆ. ರೆಗ್ಯುಲೇಟೆಡ್ ಮಾರ್ಕೆಟ್ ಸಮಿತಿಗಳ ಕಾರ್ಯ ಸುಗಮವಾಗಿ ನಡೆಯಲ್ಲಿ ಎಂದು ಇದನ್ನು ಮಾಡಿದ್ದೇವೆ. ಇದರ ಜೊತೆಗೆ ಇನ್ನು ೨-೩ ದಿವಸಗಳಲ್ಲಿ ಇನ್ನೊಂದು ತಿದ್ದುಪಡಿಯನ್ನು ತರುತ್ತಾ ಇದ್ದೇವೆ. ಅದರಲ್ಲಿ ಯಾರೊಬ್ಬ ಬೈಯರ್ ಮಾರ್ಕೆಟ್ ಬಿಟ್ಟು ಬೇರೆ ಕಡೆ ಕೊಂಡುಕೊಳ್ಳಬಾರದು ಎಂದು ತರುತ್ತಾ ಇದ್ದೇವೆ. ಆದು ಅದು ಬಂದಾಗ ಅದರ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ಏಕೆ ಇಷ್ಟೆಲ್ಲಾ ಕಟ್ಟುನಿಟ್ಟಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆಂದರೆ, ಅಮಾಯಕ, ಬಾಯಿ ಇಲ್ಲದೆ ಇರುವ ರೈತರನ್ನು ಕಾಪಾಡುವುದಕ್ಕೋಸ್ಕರ ಇದರ ಬಗ್ಗೆ ಕೆಲವು ಪತ್ರಿಕೆಗಳಲ್ಲಿ ಎಡಿಟೋರಿಯಲ್ಸ್ ಬರೆದಿದ್ದಾರೆ, ಇದಕ್ಕೆ ವಿರೋಧ ವ್ಯಕ್ತಪಟ್ಟಿದೆ. ಆದರೆ ಬಹಳ ಕಡೆ ಸ್ವಾಗತ ಮಾಡಿದ್ದಾರೆ. ಒಳ್ಳೆಯ ತಿದ್ದುಪಡಿ ಬೇಕೇ, ಬೇಕು ಎಂದು ಹೇಳಿದ್ದಾರೆ. ಆಮೇಲೆ ಸ್ಟ್ರೈಕ್ ಮಾಡಿರುವುದರ ಬಗ್ಗೆ ನಮಗೆ ಅನುಭವವಾಗಿದೆ. ೧೯೭೪ ರಲ್ಲಿ ಬೆಂಗಳೂರು ಮಾರ್ಕೆಟ್‌ನಲ್ಲಿ ಆಲೂಗಡ್ಡೆ ಯಥೇಚ್ಛವಾಗಿ ಬಂತು. ಒಬ್ಬ ವ್ಯವಸಾಯಗಾರ ಬಂದು ತೂಕದಲ್ಲಿ ಮೋಸಮಾಡಿದ್ದಾರೆ ಎಂದು ಕಂಪ್ಲೈಂಟ್ ಕೊಟ್ಟ. ತಕ್ಷಣ ಹೋಗಿ ಪರೀಕ್ಷೆ ಮಾಡಿದಾಗ ತೂಕದಲ್ಲಿ ಮೋಸ ಆಗಿತ್ತು. ಕ್ರಮ ಕೈಗೊಂಡಾಗ ಇಡೀ ಮಾರ್ಕೆಟ್‌ನೊಳಗೆ ಸ್ಟ್ರೈಕ್ ಮಾಡಿದರು. ನೂರಾರು ಲಾರಿಗಳ ಆಲೂಗಡ್ಡೆ ನಿಂತುಹೋಯಿತು. ಕೋಆಪರೇಟಿವ್ ಡಿಪಾರ್ಟ್‌ಮೆಂಟ್‌ನವರು ಎಲ್ಲಾ ಮುಂದೆಬಂದರು, ೨೫ ಲಾರಿ ಕಳಿಸಿದರು. ವರ್ತಕರು ಮಾರನೇ ದಿವಸ ಬೆಳಿಗ್ಗೆ ಯಾವುದೇ ಕಂಡೀಷನ್ ಇಲ್ಲದೆ ಸ್ಟ್ರೈಕ್ ವಾಪಸ್ ತೆಗೆದುಕೊಂಡರು. ನಂತರ ಬೆಂಗಳೂರು, ದಾವಣಗೆರೆ, ಅರಸೀಕೆರೆ ಮುಂತಾದ ಕಡೆಗಳಲ್ಲಿರುವ ಎಲ್ಲಾ ಹಮಾಲಿಗಳು ಹೇಳದೇ ಕೇಳದೆ ಸಂಪು ಹೂಡಿದರು. ನಮಗೆ ನೋಟೀಸ್ ಕೊಡದೆ ಹೂಡುವುದರಿಂದ ತೊಂದರೆಯಾಗುತ್ತದೆ. ದಾವಣಗೆರೆಯಲ್ಲಿ ಕಾಳಗಾಯಿ, ಉಳಗಾಯಿ ಹಮಾಲಿಗಳಿಗೆ ಬಿಡಬೇಕು ಎಂದು ಇತ್ತು. ಇದು ಒಂದೊಂದು ರಾಶಿಗೆ ೫೦-೧೦೦ ಕೆ. ಜಿ. ಆಗುತ್ತಿತ್ತು. ಇದನ್ನು ನಿಲ್ಲಿಸಿದಾಗ ಸ್ಟ್ರೈಕ್ ಆಯಿತು. ಯಾರು ಮಾಲು ಸರಬರಾಜು ಮಾಡುವ ರೈತರಿದ್ದಾರೆ ಅವರನ್ನು ಕೇಳಿಕೊಂಡು ಮಾರ್ಕೆಟ್‌ನಲ್ಲಿ ಈ ಮರ್ಷ ಬಂದು ನಾವೇ ತೂಕ ಮಾಡುತ್ತೇವೆ ಎಂದು ಹೇಳಿದಾಗ ಸ್ಟ್ರೈಕ್ ನಿಂತು ಹೋಯಿತು. ಆದರೆ ಮಾರ್ಕೆಟ್ ಫಂಕಸರಿ ನೋಟೀಸ್ ಕೊಟ್ಟು ಸ್ಟ್ರೈಕ್ ಮಾಡಬೇಕು ಎಂದು ಹೇಳಿದ್ದೇವೆ. ಮಾರ್ಕೆಟ್ ಆವರಣದಲ್ಲಿ ಕೆಲವು ಕಟ್ಟಡಗಳನ್ನು ಕಟ್ಟಿ ಕೆಲವರಿಗೆ ಬಾಡಿಗೆಗೆ ಕೊಟ್ಟಿದ್ದಾರೆ. ಇನ್ನು ಕೆಲವರನ್ನು ಅವರೇ ಕಟ್ಟಿಕೊಂಡಿದ್ದಾರೆ. ಇದನ್ನೆಲ್ಲಾ ನಿಯಂತ್ರಣಗೊಳಿಸುವುದಕ್ಕೆ ಇದರಲ್ಲಿ ಅಳವಡಿಸಿದ್ದೇವೆ. ಇದರಲ್ಲಿ ಸುಮಾರು ೧೬-೧೭ ತಿದ್ದುಪಡಿಗಳನ್ನು ತಂದಿದ್ದೇನೆ. ಈಗಾಗಲೇ ಈ ತಿದ್ದುಪಡಿ ಆರ್ಡಿನೆನ್ಸ್ ಮೂಲಕವಾಗಿ ಬಂದಿದೆ. ಇದಕ್ಕೆ ಮಾನ್ಯ ಸಭೆ ಅನುಮೋದನೆ ಕೊಡಬೇಕು ಎಂದು ನಾನು ಸಭೆಯನ್ನು ಪ್ರಾರ್ಥನೆ ಮಾಡುತ್ತೇನೆ.

† ಶ್ರೀ ಕೆ. ಹೆಚ್. ಪಾಟೀಲ್ (ಗದಗ್).—ಮಾನ್ಯ ಸಭಾಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಅಗ್ರಿಕಲ್ಚರಲ್ ಪ್ರೊಡ್ಯೂಸ್ ಮಾರ್ಕೆಟಿಂಗ್ ಆಕ್ಟ್ ೧೯೬೬ನೇ ಇಸವಿಯಿಂದ ಬಂದಿದೆ. ಇವತ್ತು ವ್ಯವಸಾಯಗಾರರು ಯಾವುದೇ ರೀತಿಯಿಂದ ಮೋಸಕ್ಕೆ ಒಳಗಾಗುತ್ತಾರೆ ಎನ್ನುವಂಥ ಮಾತನ್ನು ನಾನು ಹೇಳುವುದಲ್ಲ, ಇದು ಎಲ್ಲರಿಗೂ ಜನಜನಿತವಾಗಿದೆ. ಎಷ್ಟೇ ಪ್ರಾಮಾಣಿಕವಾಗಿ ವ್ಯವಹಾರ ಮಾಡುತ್ತಿದ್ದರೂ ಸಹ ವ್ಯಾಪಾರಸ್ಥರು ತಮ್ಮ ಲಾಭಕ್ಕಾಗಿ ರೈತರನ್ನು ಒಂದಲ್ಲ ಒಂದು ರೀತಿಯಲ್ಲಿ ಹೆರಾಸ್‌ಮೆಂಟ್ ಮಾಡುತ್ತಾರೆ. ಮಾನ್ಯ ಜಾಲಪ್ಪನವರು ರೈತರು ಪಡೆದ ಕೆಲವು ಬಿಲ್‌ಗಳನ್ನು ಸದನದ ಎದುರಿಗೆ ಓದಿ ತೋರಿಸಿದರು. ಅವರು ಇದು ಸರಿಯಲ್ಲ ಎಂದಷ್ಟೇ ಹೇಳಿದ್ದಾರೆ. ಆದರೆ ಇನ್ನೂ ಕೆಲವು ಬಿಲ್‌ಗಳ ಒಳಹೊಕ್ಕು ನೋಡಿದರೆ ಆ ಬಿಲ್‌ಗಳು ಅವರ ಅಂಗಡಿಗಳದ್ದಲ್ಲವೇ ಅಲ್ಲ. ಸಾಮಾನ್ಯವಾಗಿ ಒಂದು ಕೃಷ್ಣನ ಲೆಕ್ಕ, ಇನ್ನೊಂದು ರಾಮನ ಲೆಕ್ಕ ಇರುತ್ತದೆ. ಈ ಎರಡು ಲೆಕ್ಕಗಳ ವಿವರಣೆ ಪಡೆದರೆ ಸಿಗುತ್ತದೆ. ಅನೇಕ ಜನ ದಲ್ಲಾಳಿಗಳು ಸತ್ಯವಂತರಿದ್ದಾರೆ. ಆದರೆ ಬಹು ಸಂಖ್ಯಾತ ಜನರು ಹಾಗೆ ಇಲ್ಲ. ದಲ್ಲಾಳಿಗಳಿಗೆ ಏಕೆ ಈ ರೀತಿ ಆಕ್ಟ್ ಮಾಡುತ್ತೀರಿ, ರೈತರಿಗೆ ಏಕೆ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮಾಡುವುದಿಲ್ಲ, ರೈತರಲ್ಲಿ ಅಪ್ರಮಾಣಿಕರು ಇರುವುದಿಲ್ಲವೇ ಎಂದು ಕೇಳಬಹುದು. ೧೦೦ಕ್ಕೆ ೯೦ರಷ್ಟು ರೈತರು ಅಜ್ಞಾನಿಗಳು, ತಮ್ಮ ಹಿತವನ್ನು ರಕ್ಷಣೆ ಮಾಡಿಕೊಳ್ಳಲಿಕ್ಕೆ ಅಸಮರ್ಥರು. ರೆಗ್ಯುಲೇಟೆಡ್ ಮಾರ್ಕೆಟಿಂಗ್ ಕಮಿಟಿ ರೈತರ ಹಿತರಕ್ಷಣೆಗೆ ಹುಟ್ಟಿದ್ದುದು. ರೈತರ ಹಿತರಕ್ಷಣೆಗೆ ಇದು ಹುಟ್ಟಿದರೂ ಸಹ ಮೊದಲು ತೂಕ ಮಾಡುವುದಕ್ಕೆ ವಿರೋಧ ಮಾಡಿದರು. ತಮಗೆ ಗೊತ್ತಿದ್ದಂತೆ ಶೇಂಗಾ, ಹತ್ತಿ ಮುಂತಾದ್ದನ್ನು ರೆಗ್ಯುಲೇಟೆಡ್ ಮಾರ್ಕೆಟ್‌ನಲ್ಲಿ ಇಂಟರ್‌ಡ್ಯೂಸ್ ಮಾಡಿದಾಗ ಬಹಳ ಪ್ರಬಲವಾಗಿ ವಿರೋಧ ಮಾಡಿದರು. ಇವತ್ತಿಗೂ ಸಹಿತ ಹಳೇ ಮೈಸೂರು ಏರಿಯಾದಲ್ಲಿ ಸರಿಯಾಗಿ ರೆಗ್ಯುಲೇಟೆಡ್ ಮಾರ್ಕೆಟ್ ನಡೆದಿಲ್ಲ, ರೈತರಿಗೆ ಬೇಕಾದ ವಿವರಣೆ ಇನ್ನೂ ಇಲ್ಲ. ಬಾಂಬೆ ಏರಿಯಾದೊಳಗೆ ಸಹಕಾರಿ ಮಾರುಕಟ್ಟೆಗಳು ಏನಿವೆ ಅಲ್ಲಿ ಅಧಿಕೃತವಾಗಿ ನಡೆಯುತ್ತಿದೆ. ರೈತರಿಗೂ ವ್ಯಾಪಾರಸ್ಥರಿಗೂ ಹೊಂದಾಣಿಕೆ ಸ್ವಲ್ಪಸ್ವಲ್ಪ ಸಮೀಪಕ್ಕೆ ಬರಬೇಕಾಗುತ್ತದೆ. ಇಲ್ಲಿ ಆ ವ್ಯವಹಾರ ನಡೆದಿಲ್ಲ. ಆದರೆ ಇಲ್ಲಿ ಆ ವ್ಯವಹಾರ ಇನ್ನೂ ನಡೆಯದೇ ಬಹಳ ಅನ್ಯಾಯ ವಾಗುತ್ತಿದೆ. ನಮ್ಮ ಕಿಸಾನ್ ಫ್ಯಾಕ್ಟರಿಗೆ ಹೋಗಿ ನೋಡಿದರೆ, ಟೊಮೋಟೋ ಬೆಳೆಗಾರರಿಗೆ ಯಾವ ರೀತಿ ಬೆಲೆ ಸಿಗುತ್ತದೆ ಎಂದು ಗೊತ್ತಾಗುತ್ತದೆ. ಕೆಲವು ಸಾರಿ ಟೋಮೋಟೋ ಮಾರ್ಕೆಟ್ಟಿಗೆ ಹೆಚ್ಚು ಬಂದರೆ ಅವುಗಳನ್ನು ಕೇಳುವವರೇ ಇರುವುದಿಲ್ಲ. ರೈತನು ಕಷ್ಟಪಟ್ಟು ಟೊಮೋಟೋವನ್ನು ಬೆಳೆದು ಮಾರ್ಕೆಟ್ಟಿಗೆ ತಂದರೆ ಅವನಿಗೆ ಸರಿಯಾದ ಬೆಲೆಯೇ ಸಿಗುವುದಿಲ್ಲ. ಒಂದೊಂದು ಸಾರಿ ಒಂದು ಕೇಜಿ ಟೊಮೋಟೊ ೪ ಆಣೆ ೮ ಆಣೆ ಎಲ್ಲಾ ಆಗುತ್ತದೆ. ಇಷ್ಟು ಕಡಿಮೆ ಬೆಲೆ ಟೊಮೋಟೋ ಬೆಳೆಯುವ ರೈತನಿಗೆ ಸಿಕ್ಕರೆ ಅವನು ಯಾವ ರೀತಿ ಜೀವನ ಮಾಡಬೇಕೆಂದು ನಾವು ಯೋಚನೆ ಮಾಡಬೇಕಾಗುತ್ತದೆ. ಟೊಮೋಟೋ ಮಾರ್ಕೆಟ್‌ಗೆ ಹೆಚ್ಚು ಬಂದಾಗ ಸರ್ಕಾರವು ಅದನ್ನು ಸರಿಯಾದ ಬೆಲೆಗೆ ಮಾರಾಟ ಮಾಡುವ ವ್ಯವಸ್ಥೆ ಮಾಡಬೇಕು. ನಮ್ಮ ಧಾರವಾಡ ಜಿಲ್ಲೆಯಲ್ಲಿ ರೈತರುಗಳು ಕಾಯಿ ಪಲ್ಯೆಗಳನ್ನು ಬೆಳೆಯುತ್ತಾರೆ. ಅವರು ಪುಟ್ಟಿಗಳಲ್ಲಿ ಕಾಯಿಪಲ್ಯೆಗಳನ್ನು ತುಂಬಿಕೊಂಡು ಬಂದು ಮಾರ್ಕೆಟ್ಟುಗಳನ್ನು ಮಾರಾಟ ಮಾಡುತ್ತಾರೆ. ಒಂದೊಂದು ಸಾರಿ ಹೆಚ್ಚಿಗೆ ಕಾಯಿಪಲ್ಯೆಗಳು ಮಾರ್ಕೆಟ್ಟಿಗೆ ಬಂದರೆ ಅವುಗಳನ್ನು ಪುಟ್ಟಿಗೆ ೩ ರೂಪಾಯಿಗಳಂತೆ ಮಾರಾಟ ಮಾಡುತ್ತಾರೆ. ಈ ೩ ರೂಪಾಯಿಗಳಲ್ಲಿ ಒಂದು ರೂಪಾಯಿಯನ್ನು ದಳ್ಳಾಳಿಗೆ ಕೊಟ್ಟು ಉಳಿದ ೨ ರೂಪಾಯಿಗಳನ್ನು ಮಾತ್ರ ತೆಗೆದುಕೊಂಡು ಹೋಗುತ್ತಾರೆ. ನಮ್ಮ ಜಿಲ್ಲೆಯಲ್ಲಿ ಕಾಯಿಪಲ್ಯೆಗಳನ್ನು ಸರಿಯಾದ ಬೆಲೆಗೆ ಮಾರಾಟ ಮಾಡುವಂಥ ರೆಗ್ಯುಲೇಟೆಡ್ ಮಾರ್ಕೆಟ್ ಆಗಿಲ್ಲದೆ ಇರುವುದೇ ಇದಕ್ಕೆಲ್ಲಾ ಕಾರಣ. ರೆಗ್ಯುಲೇಟೆಡ್ ಮಾರ್ಕೆಟ್ ಇಲ್ಲದೇ ಇರುವ ಸ್ಥಳಗಳಲ್ಲಿ ರೈತರುಗಳು ಬಹಳ ಶೋಷಣೆಗೆ ಒಳಗಾಗುತ್ತಿದ್ದಾರೆ. ರೈತರುಗಳು ತಮ್ಮ ಮಾಲುಗಳನ್ನು ತಂದು ಮಾರುವುದಕ್ಕೆ ಸಹಕಾರ ಸಂಘಗಳು ಸಹಾಯ ಮಾಡಬೇಕು. ಸಹಕಾರ ಸಂಘಗಳನ್ನು ಸರ್ಕಾರದವರು ಮಾಡಿ ರೈತರ ಹಿತರಕ್ಷಣೆ ಮಾಡಬೇಕು. ಸಹಕಾರ ಸಂಘಗಳಲ್ಲಿ ಸದಸ್ಯರಾದವರಿಗೆ ಮಾತ್ರ ತಮ್ಮ ಮಾಲುಗಳನ್ನು ಮಾರಾಟ ಮಾಡುವ ಹಕ್ಕು ಇದೆ ಎಂಬುದನ್ನು ತೆಗೆದು ಹಾಕಿ ಯಾವ ರೈತರು ಬೇಕಾದರೂ ಬಂದು ಸಹಕಾರ ಸಂಘಗಳ ಮುಖಾಂತರ ತಮ್ಮ ಮಾಲನ್ನು ಬಿಕರಿ ಮಾಡಿಕೊಳ್ಳಬಹುದೆಂದು ಹೇಳಿ ರೈತರಿಗೆ ಅನುಕೂಲ ಮಾಡಿಕೊಡಬೇಕು. ಈಗ ನೀವು ತಂದಿರುವ ಈ ಕಾನೂನಿಗೆ ರೆಗ್ಯುಲೇಟೆಡ್ ಮಾರ್ಕೆಟ್ ವ್ಯಾಪಾರಸ್ಥರು ಪ್ರಬಲವಾಗಿ ವಿರೋಧ ಮಾಡಿದ್ದಾರೆ ಎಂಬುದು ನಮಗೂ ಗೊತ್ತಿದೆ. ವ್ಯಾಪಾರಸ್ಥರು ಮಾಲನ್ನು ಕೊಂಡುಕೊಂಡವರಿಂದ ಮಾತ್ರ ದಳ್ಳಾಳಿಯನ್ನು ವಸೂಲು ಮಾಡಬೇಕು ಎಂದು ಕಾನೂನನ್ನು ತಂದಿರುವುದು ಬಹಳ ಒಳ್ಳೆಯದು. ನೀವು ಬೆಳೆಗಾರರಿಂದಲೇ ೩ ರೂಪಾಯಿಯನ್ನು ವಸೂಲಿ ಮಾಡಿಕೊಳ್ಳಿ ಎಂದು ಕಾನೂನು ಮಾಡಿದ್ದಿದ್ದರೆ ವ್ಯಾಪಾರಸ್ಥರೆಲ್ಲರೂ ನಿಮಗೆ ಶಹಬಾಸ್‌ಗಿರಿಯನ್ನು ಕೊಡುತ್ತಿದ್ದರೆಂದು ಕಾಣುತ್ತದೆ. ನೀವು ಮಾಡಿದುದು ಬಹಳ ಉತ್ತಮವಾಗಿದೆ. ಮೊದಲು ರೈತನ ಮೇಲೆಯೇ ಎಲ್ಲಾ ಹೊರೆ ಬೀಳುತ್ತಿತ್ತು. ದಳ್ಳಾಳಿಗಳಿಗೆ ರೈತನೇ ಹಣ ಕೊಡಬೇಕಾಗಿತ್ತು, ಈ ರೀತಿ ರೈತನ ಮೇಲೆ ಹೊರೆ ಬೀಳುತ್ತಿದ್ದರೆ ಅವನು ಮುಂದುವರಿಯುವುದು ಹೇಗೆ? ರೈತನ ಹಣೆಬರಹವೇ ಕೆಟ್ಟದ್ದು. ಕೆಲವು ಸಾರಿ ಮಾರ್ಕೆಟ್‌ಗಳಲ್ಲಿ ರೈತರ ಮಾಲುಗಳಿಗೆ ಸರಿಯಾದ ತೂಕವನ್ನೇ ಮಾಡುವುದಿಲ್ಲ. ತೂಕ ವ್ಯತ್ಯಾಸ ಮಾಡಿದರೆ ರೈತನಿಗೆ ಬಹಳ ನಷ್ಟವಾಗುತ್ತದೆ. ಲೆಕ್ಕವನ್ನೂ ಸರಿಯಾಗಿ ಮಾಡುವುದಿಲ್ಲ. ನಮ್ಮ ರೈತರು ಅಕ್ಷರ-ಬಾರದವರು. ಇವರಿಗೆ ಲೆಕ್ಕ ಸರಿಯಾಗಿ ಮಾಡದೇ ಮೋಸ ಮಾಡುವುದು ಮಾರ್ಕೆಟ್‌ಗಳಲ್ಲಿ ನಡೆದೇ ಇದೆ. ಇವುಗಳನ್ನೆಲ್ಲಾ ಸರಿ ಮಾಡಬೇಕಾದರೆ ಸರ್ಕಾರ ಮಧ್ಯೆ ಪ್ರವೇಶಿಸಬೇಕಾಗುತ್ತದೆ. ಬಾಯಿ ಇಲ್ಲದ ರೈತನಿಗೆ ಸಹಾಯ ಮಾಡಬೇಕು. ಇಲ್ಲದಿದ್ದರೆ ಅವನು ಬದುಕುವುದು ಹೇಗೆ? ನಾವು ನಮ್ಮ ಜಿಲ್ಲೆಯಲ್ಲಿ ಬಹಳ ವರ್ಷಗಳ ಹಿಂದೆಯೇ ಗ್ರೌಂಡ್‌ನೆಟ್ ಎಂದರೆ ಶೇಂಗಾವನ್ನು ಮಾರಾಟ ಮಾಡುವುದಕ್ಕೆ, ರೈತರಿಗೆ ಅನುಕೂಲವಾಗಲೆಂದು ಒಂದು ರೆಗ್ಯುಲೇಟೆಡ್ ಮಾರ್ಕೆಟ್‌ನ್ನು ಮಾಡಿದೆವು. ಆಗ ಅನೇಕ ವ್ಯಾಪಾರಸ್ಥರಿಂದ ವಿರೋಧ ಬಂತು. ಆ ವಿರೋಧವನ್ನು ಲೆಕ್ಕಿಸದೇ ರೆಗ್ಯುಲೇಟೆಡ್ ಮಾರ್ಕೆಟ್‌ನು

ಪ್ರಾರಂಭ ಮಾಡಿದೆವು. ಆ ರೆಗ್ಯುಲೇಟೆಡ್ ಮಾರ್ಕೆಟಿಗೆ ನಾನೇ ಅಧ್ಯಕ್ಷನಾಗಿದ್ದೆ. ನಾನು ಮಂತ್ರಿ ಆಗುವವರೆಗೂ ಛೇರ್ಮನ್ ಆಗಿ ರೆಗ್ಯುಲೇಟೆಡ್ ಮಾರ್ಕೆಟ್‌ನಲ್ಲೇ ಇದ್ದೆ. ಈ ರೆಗ್ಯುಲೇಟೆಡ್ ಮಾರ್ಕೆಟ್ ಮಾಡಿದ್ದರಿಂದ ರೈತರುಗಳಿಗೆ ನ್ಯಾಯವಾದ ಬೆಲೆ ಸಿಗುವಂತಾಯಿತು. ಖರೀದಿದಾರರಿಂದಲೇ ದಳ್ಳಾಳಿಗಳು ೨ ಪರ್ಸೆಂಟ್ ದಳ್ಳಾಳಿಯನ್ನು ಪಡೆಯುವಂತೆ ಕಾನೂನು ಮಾಡಬೇಕೆಂದು ನಾನು ಮಂತ್ರಿಯಾಗಿದ್ದಾಗಲೇ ಯೋಚನೆ ಮಾಡಿಕೊಂಡಿದ್ದೆ. ಆದರೆ ದುರ್ದೈವದಿಂದ ಅದನ್ನು ಮಾಡಲು ನನ್ನ ಕೈಯಲ್ಲಿ ಆಗಲಿಲ್ಲ. ನನ್ನ ಕೈಯಲ್ಲಿ ಆಗದ ಕೆಲಸವನ್ನು ಶ್ರೀಮಾನ್ ಜಾಲಪ್ಪನವರು ಮೊಟ್ಟಮೊದಲು ತಂದಿದ್ದಾರೆ. ಇದಕ್ಕೆ ಅವರಿಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಈ ಆಕ್ಟ್ ಬಹಳ ದೊಡ್ಡದಾಗಿ ಕಾಣುತ್ತಿದೆ. ಈ ಕಾನೂನಿನಲ್ಲಿ ೨-೩ ಕಲಂಗಳು ಮಾತ್ರ ಸರಿ ಇಲ್ಲ. ಒಂದರಲ್ಲಿ ಚೀಫ್ ಮಾರ್ಕೆಟಿಂಗ್ ಆಫೀಸರ್ ಎಂಬುದು ಇದ್ದದ್ದನ್ನು ಡೈರಕ್ಟರ್ ಆಫ್ ಅಗ್ರಿಕಲ್ಚರಲ್ ಮಾರ್ಕೆಟಿಂಗ್ ಎಂದು ಕರೆದಿದ್ದಾರೆ. ಇದಕ್ಕೆ ನನ್ನ ವಿರೋಧ ಇಲ್ಲ. ಈಗಿನ ಕಾಲದಲ್ಲಿ ಅನೇಕ ಹುದ್ದೆಗಳ ಪದನಾಮಗಳು ಬದಲಾಗಿವೆ. ಅದಕ್ಕನುಸಾರವಾಗಿ ಇದನ್ನೂ ಬದಲಾವಣೆ ಮಾಡಿದ್ದಾರೆ. ಇದರಲ್ಲಿ ಯಾವ ದೋಷವೂ ಇಲ್ಲ. ಆಮೇಲೆ ಇನ್ನೊಂದು ಸೆಕ್ಷನ್‌ನಲ್ಲಿ ಯಾರು ಈ ಕಾನೂನನ್ನು ಮೀರಿ ನಡೆಯುತ್ತಾರೋ ಅವರಿಗೆ ಶಿಕ್ಷೆಯಾಗಬೇಕೆನ್ನುತ್ತಾರೆ. ಇದು ಸರಿ. ಈ ರೀತಿ ಮಾಡಿರುವ ಕಾನೂನನ್ನು ತೆಗೆಸುವುದಕ್ಕೆ ಕೆಲವು ವ್ಯಾಪಾರಸ್ಥರು ಪ್ರಯತ್ನ ಮಾಡುತ್ತಿದ್ದಾರೆಂದು ನನಗೆ ತಿಳಿದು ಬಂದಿದೆ. ಯಾರು ಕಾನೂನನ್ನು ಮೀರಿ ನಡೆಯುತ್ತಾರೋ ಅವರಿಗೆ ಶಿಕ್ಷೆ ಕಡಿಮೆಯಾಗಬಾರದು. ಮಾನ್ಯ ಜಾಲಪ್ಪನವರೇ, ಈ ವ್ಯಾಪಾರಸ್ಥರ ಮನವಿಗೆ ಮಾತ್ರ ನೀವು ಮಣಿಯದಿರಿ ಎಂದು ನಾನು ತಮಗೆ ಹೇಳುತ್ತಿದ್ದೇನೆ. ನನ್ನ ಮಟ್ಟಿಗೆ ಹೇಳುವುದಾದರೆ, ಯಾರು ಈ ಕಾನೂನನ್ನು ಮೀರುತ್ತಾರೋ ಅಂಥವರಿಗೆ ಉಗ್ರವಾದ ಶಿಕ್ಷೆಯನ್ನು ಕೊಡಬೇಕು. ದೇವರು ಇರುವಂತೆ ಇರುವ ರೈತನಿಗೆ ಯಾರು ಮೋಸ ಮಾಡುತ್ತಾರೋ ಯಾರು ಅವರಿಗೆ ದ್ರೋಹವೆಸಗುವಂಥ ಕೃತ್ಯವನ್ನು ಮಾಡುತ್ತಾರೋ ಅವರಿಗೆ ಉಗ್ರವಾದ ಶಿಕ್ಷೆಯನ್ನು ಮಾಡಬೇಕು. ಇದರಲ್ಲಿ ಹೇಳಿರುವ ೩ ವರ್ಷಗಳ ಕಾಲ ಶಿಕ್ಷೆಯನ್ನು ೧೦ ವರ್ಷಗಳವರೆಗೆ ಏರಿಸಿದರೆ ನಿಜಕ್ಕೂ ನಿಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಆಮೇಲೆ ಈ ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಯಲ್ಲಿ ಶೆಡ್ಯೂಲ್ ಕ್ಯಾಸ್ಟ್ ಮತ್ತು ಬ್ಯಾಕ್‌ವರ್ಡ್ ಕ್ಲಾಸ್ ಜನರಿಗೆ ಸದಸ್ಯರಾಗಲು ರಿಸರ್ವೇಷನ್ ಇಡಬೇಕು. ಆಮೇಲೆ ಮಾನ್ಯ ಜಾಲಪ್ಪನವರು, ಇನ್ನು ಮುಂದೆ ಡೀಲರ್‌ಗಳು ರೆಗ್ಯುಲೇಟೆಡ್ ಮಾರ್ಕೆಟ್ ಯಾರ್ಡ್‌ನಲ್ಲಿ ಬಿಟ್ಟು ಬೇರೆಕಡೆ ಮಾಲುಗಳನ್ನು ಖರೀದಿ ಮಾಡಬಾರದು ಎನ್ನುವ ಕಾನೂನನ್ನು ತರುವುದಕ್ಕೆ ಯೋಚನೆ ಮಾಡಲಾಗುತ್ತಿದೆಯೆಂದು ಹೇಳಿದರು. ಇದು ನಿಜಕ್ಕೂ ಶ್ಲಾಘನೀಯವಾದ ವಿಷಯ. ಯಾವ ರೈತ ಮಾಲನ್ನು ತರುತ್ತಾನೋ ಅವನು ರೆಗ್ಯುಲೇಟೆಡ್ ಮಾರ್ಕೆಟ್ ಯಾರ್ಡಿನಲ್ಲಿ ನ್ಯಾಯವಾದ ಬೆಲೆಗೆ ಮಾರಾಟ ಮಾಡಬೇಕು. ಮಾರಾಟವಾದ ತಕ್ಷಣ ಅವನಿಗೆ ಸ್ಥಳದಲ್ಲೇ ಹಣ ಪಾವತಿಯಾಗಿ ಅವನ ಜೇಬಿಗೆ ಹೋಗಬೇಕು. ನೀವು ಡೀಲರ್‌ಗಳು ಹೊರಗಡೆ ಮಾಲನ್ನು ಕೊಂಡುಕೊಳ್ಳಬಾರದೆಂದು ಕಾನೂನನ್ನು ತಂದರೆ ಈ ಸದನಕ್ಕೆ ಅಷ್ಟೇ ಅಲ್ಲ ಕರ್ನಾಟಕದ ಜನತೆಗೆ ಬಹಳ ಸಂತೋಷವಾಗುತ್ತದೆ. ಹಾಗೂ ಇದು ಸ್ವಾಗತಾರ್ಹವಾದ ವಿಷಯ. ಶ್ರೀಮಾನ್ ಜಾಲಪ್ಪನವರು ಅನೇಕ ಪ್ರಗತಿಪರವಾದ ಕೆಲಸಗಳನ್ನು ಮಾಡಿದ್ದಾರೆ. ಇನ್ನೊಂದು ವಿಷಯವನ್ನು ಮಾನ್ಯ ಜಾಲಪ್ಪನವರಿಗೆ ಹೇಳಬೇಕಾಗಿದೆ. ರೆಗ್ಯುಲೇಟೆಡ್ ಮಾರ್ಕೆಟ್ಟಿನಲ್ಲಿ ಬಹಳ ಹಣ ಇದೆ ಹಾಗೂ ವರ್ಲ್ಡ್ ಬ್ಯಾಂಕಿನಿಂದಲೂ ಸಹ ಸಹಾಯ ಸಿಗುತ್ತಿದೆ. ಇಷ್ಟೊಂದು ಹಣ ಇರುವುದರಿಂದ, ರೈತನು ತನ್ನ ಮಾಲನ್ನು ಮಾರ್ಕೆಟ್ಟಿಗೆ ತಂದಾಗ ತಕ್ಷಣ ಆತನ ಮಾಲು ವ್ಯಾಪಾರ ಆಗದೇ ಇದ್ದರೆ ತಕ್ಷಣ ಅವನಿಗೆ ಅಡ್ವಾನ್ಸ್ ರೂಪದಲ್ಲಿ ಬೇಕಾಗುವಷ್ಟು ಕೊಡುವ ಏರ್ಪಾಡು ಮಾಡಲು ಒಂದು ತಿದ್ದುಪಡಿಯನ್ನು ತಂದರೆ ಬಹಳ ಒಳ್ಳೆಯದು. ಆಮೇಲೆ ನಮ್ಮ ರಾಜ್ಯದಲ್ಲಿ ಸುಮಾರು ೧೭೫ ತಾಲ್ಲೂಕುಗಳು ಇವೆ. ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದೊಂದು ರೆಗ್ಯುಲೇಟೆಡ್ ಮಾರ್ಕೆಟ್‌ನ್ನು ಮಾಡಿದರೆ ಬಹಳ ಅನುಕೂಲವಾಗುತ್ತದೆ. ಯಾವ ಯಾವ ತಾಲ್ಲೂಕಿನಲ್ಲಿ ಯಾವ ಯಾವ ಬೆಳೆಗಳು ಬೆಳೆಯಲಾಗುತ್ತಿದೆ ಎಂದು ಅಧ್ಯಯನ ಮಾಡಲು ಒಂದು ಸದನದ ಸಮಿತಿ ಮಾಡಿದರೆ ಒಳ್ಳೆಯದು. ಈ ಸದನದ ಸಮಿತಿಯು ಪ್ರತಿಯೊಂದು ತಾಲ್ಲೂಕಿಗೂ ಹೋಗಿ ಯಾವ ಯಾವ ಮಾಲುಗಳನ್ನು ರೈತರುಗಳು ಬೆಳೆಯುತ್ತಿದ್ದಾರೆಂದು ಅವುಗಳ ಪರಿಷ್ಕರಣೆ ಮಾಡಬೇಕು. ಯಾವ ಯಾವ ತಾಲ್ಲೂಕುಗಳಲ್ಲಿ ಯಾವ ಯಾವ ಮಾಲುಗಳನ್ನು ಬೆಳೆಯುತ್ತಿದ್ದಾರೆ. ಅವುಗಳ ಪರಿಷ್ಕರಣೆಯಾಗಿ, ಯಾವ ಯಾವ ಉದ್ದಿಮೆಗಳನ್ನು ಪ್ರಾರಂಭ ಮಾಡಬೇಕು, ಅಂತಹ ಉದ್ದಿಮೆಗಳನ್ನು ಪ್ರಾರಂಭ ಮಾಡುವುದಕ್ಕೆ ಅದಕ್ಕೆ ಎಷ್ಟು ಹಣ ಬೇಕಾಗುತ್ತದೆ, ಅದಕ್ಕೆ ಒಂದು ಸಮಿತಿಯನ್ನು ಮಾಡಿ, ಒಂದು ಟೆಕ್ನಿಕಲ್ ಪ್ರಾಜೆಕ್ಟ್ ತಯಾರು ಮಾಡುವಂತಹ ಸಮಿತಿಯನ್ನು ತಯಾರು ಮಾಡಿ, ಆ ಸಮಿತಿಯವರು ಪ್ರಾಜೆಕ್ಟ್ ತಯಾರು ಮಾಡಿ, ಅದಕ್ಕೆ ಬೇಕಾಗುವ ಹಣ ಎಷ್ಟು ಎಂದು

ಮರಡಿಯನ್ನು ಈ ಸಮಿತಿಯ ಎದುರಿಗೆ ಇಟ್ಟರೆ ಆ ಹಣವನ್ನು ಅಲ್ಲಲ್ಲಿ ಕೊಡಲಿಕ್ಕೆ ಆಗುತ್ತದೆ. ಪ್ರತಿ ತಾಲ್ಲೂಕುಗಳಲ್ಲಿಯೂ ಸಹಿತ, ಅಂದರೆ ಉದಾಹರಣೆಗೆ ಹಾಸನದಲ್ಲಿ ಸಾಕಷ್ಟು ಆಲೂಗೆಡ್ಡೆಯನ್ನು ಬೆಳೆಯುತ್ತಾರೆ. ಅದನ್ನು ಸ್ಟೋರ್ ಮಾಡಲಿಕ್ಕೆ ನಮ್ಮ ಕಾಲದಲ್ಲಿ ಒಂದು ಕೋಲ್ಡ್ ಸ್ಟೋರೇಜ್ ನಿರ್ಮಾಣ ಮಾಡಿದ್ದೆವು. ಆದರೆ ಇವೊತ್ತಿನ ದಿವಸ ಅಲ್ಲಿನ ಆ ಕೋಲ್ಡ್ ಸ್ಟೋರೇಜ್ ಏನಾಗಿದೆ ಎಂದು ಅಲ್ಲಿಯ ಮಾನ್ಯ ಸದಸ್ಯರುಗಳು ಹೇಳಲಿ. ಅಲ್ಲಿ ಕೋಲ್ಡ್ ಸ್ಟೋರೇಜ್ ಇಲ್ಲ. ಅಂತಹ ಒಂದು ಜಿಲ್ಲೆಯೊಳಗೆ ಇವೊತ್ತು ಸೆಂಟ್ರಲ್ ಬ್ಯಾಂಕ್‌ನಲ್ಲಿ ಹಣ ಇಲ್ಲ ಎಂದು ಹೇಳುವಂತಹ ಒಂದು ಸ್ಥಿತಿ ಬಂದಿರುವುದು ನಮ್ಮ ದುರ್ದೈವ ಎಂದು ಹೇಳಬೇಕಾಗುತ್ತದೆ. ಇದು ಸಹಕಾರಿಗಳಿಗೆ ಒಂದು ಕುಂದುಂಡಿ ಇದು ಆಗಬಾರದು. ಅಂತಹ ಹೆಚ್ಚು ಬೆಲೆಯುಳ್ಳಂತಹ ಸಾಮಾನುಗಳನ್ನು ಬೆಳೆಯುತಕ್ಕಂತಹ ನಾ. ನಲ್ಲಿ ನಾವು ಇನ್ನೂ ತನಕ ಕೈಕಟ್ಟಿಕೊಂಡು ಕುಳಿತುಕೊಳ್ಳುತ್ತೇವೆ ಎಂದು ಹೇಳಿದರೆ, ನಿಜವಾಗಿಯೂ ಇದು ಒಂದು ತರಹದ ದುರ್ಲಕ್ಷ್ಯ ಎಂದು ಹೇಳಬೇಕಾಗುತ್ತದೆ. ಅಂತಹವು ಕೋಲಾರದಲ್ಲಿಯೂ ಇವೆ. ಕೋಲಾರದಲ್ಲಿಯೂ ಇವೊತ್ತಿನ ದಿವಸ ಆಲೂಗೆಡ್ಡೆ, ಟೊಮೋಟೋ, ಮುಂತಾಗಿ ಬೆಳೆಯುತ್ತಿದ್ದಾರೆ. ಅವುಗಳನ್ನು ಕ್ರೋಢೀಕರಿಸಿ ಆಯಾಯಾ ತಾಲ್ಲೂಕಿನಲ್ಲಿ ಏನೇನು ಬೆಳೆಯುತ್ತಿದ್ದಾರೆ, ಅದನ್ನು ಪ್ರೊಸೆಸ್ ಮಾಡುವಂತಹ ಪ್ರೊಸೆಸಿಂಗ್ ಸಂಘಗಳನ್ನು ಮಾಡಿ, ಆ ಸಂಘಗಳಿಗೆ ನಾವು ವ್ಯವಸಾಯಗಾರರನ್ನೆಲ್ಲಾ ಮೆಂಬರ್‌ಗಳನ್ನಾಗಿ ಮಾಡಿ, ಅವರಿಗೆ ಅದರ ಸಂಪೂರ್ಣ ಲಾಭ ಮುಟ್ಟುವಂತೆ ಮಾಡಬೇಕು. ಆದರೆ ಮಾನ್ಯ ಅಧ್ಯಕ್ಷರೇ ಇವೊತ್ತು, ನೂರಕ್ಕೆ ಅರವತ್ತರಷ್ಟು ನಮ್ಮ ರೈತರನ್ನು ಮುಟ್ಟಿದರೆ, ನಲವತ್ತರಷ್ಟು ಬೇರೆಯವರು ತೆಗೆದುಕೊಳ್ಳುತ್ತಾರೆ. ಇದು ಪ್ರಾಮಾಣಿಕವಾಗಿ ನಡೆದರೆ, ಇನ್ನು ಅಪ್ರಾಮಾಣಿಕವಾಗಿ ಆದರೆ, ಮೂವತ್ತರಷ್ಟು ಮಾತ್ರ ರೈತರಿಗೆ ತಲುಪಿ, ಎಪ್ಪತ್ತರಷ್ಟು ಹಣ ಮಧ್ಯವರ್ತಿಗಳು ತಿನ್ನುತ್ತಾ ಇದ್ದಾರೆ ಇದು ತಪ್ಪಬೇಕು. ಇನ್ನು ಮಾನ್ಯ ಜೆ.ಹೆಚ್. ಪಟೇಲ್‌ರವರು ಮಾಡಿದ ಒಂದು ಪ್ರಯತ್ನ ಸ್ವಾಗತಾರ್ಹವಾದುದು. ಇವೊತ್ತಿನ ದಿವಸ ಅವರ ತಾಲ್ಲೂಕಿನಲ್ಲಿ ಸಹಿತ ಒಂದು ಸಹಕಾರಿ ಸಂಘವನ್ನು ಟೆಕ್ಸ್‌ಟೈಲ್ ಮಿಲ್‌ನ್ನು ಮಾಡುವಂತಹ ದೃಢವಾದ ಪ್ರತಿಜ್ಞೆಯನ್ನು ಮಾಡಿ ಮುಂದೆ ಹೊರಟಿದ್ದಾರೆ. ಹೀಗೆ ಎಲ್ಲಾ ಕಡೆಗೂ ಆಗಲಿ ನಮ್ಮ ಕಡೆಗೂ ನೋಡದಿದ್ದರೂ ಅಡ್ಡಿ ಇಲ್ಲ. ನಿಮ್ಮ ನಿಮ್ಮ ತಾಲ್ಲೂಕುಗಳಲ್ಲಾದರೂ ನೀವುಗಳು ಮಾಡಿಕೊಂಡು ಹೋದರೆ, ಅದರಿಂದ ಕಲ್ಯಾಣ ಸಾಧನೆಯಾದೀತು. ಏಕೆಂದರೆ ಅಧಿಕಾರ ಇವೊತ್ತು ಇರಬಹುದು, ನಾಳೆ ಹೋಗಬಹುದು ನಿನ್ನೆಯ ದಿವಸದ ಮಂತ್ರಿ ಇವೊತ್ತಿನ ಕಂತ್ರಿ ಇವೊತ್ತಿನ ಕಂತ್ರಿ ನಾಳೆಯ ಮಂತ್ರಿಯಾಗಿ ಬರುತ್ತಾನೆ. ಮಂತ್ರಿ ಪದವಿ ಬರುತ್ತದೆ ಹೋಗುತ್ತದೆ. ಆದರೆ ನಿಜವಾಗಿಯೂ ಶಾಶ್ವತವಾಗಿ ಉಳಿದುಕೊಳ್ಳುವುದು ಯಾವುದು ಎಂದರೆ ಅವರು ಮಾಡಿದ ಕೆಲಸ.

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೇ ಮಾನ್ಯ ಸದಸ್ಯರು ಕಂತ್ರಿ ಎನ್ನುವ ಶಬ್ದವನ್ನು ಹೇಳಿದ್ದಾರೆ, ಅದರ ಅರ್ಥ......

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರೇ, ನಿಮಗೆ ಅವಕಾಶ ಕೊಡುತ್ತೇನೆ. ಆಗ ತಾವುಗಳು ಮಾತನಾಡಬಹುದು.

ಶ್ರೀ ಕೆ.ಎಚ್. ಪಾಟೀಲ್.—ಮಂತ್ರಿ ಅಂದರೆ ಶುಭ, ಕಂತ್ರಿ ಆದರೆ ಅಶುಭ. ಎಲ್ಲದಕ್ಕೂ ನೀವು ಡಿಕ್ಷನರಿ ಮೀನಿಂಗ್‌ನ್ನು ನೋಡಬಾರದು.

ಶ್ರೀ ಆರ್. ವೆಂಕಟರಾಮಯ್ಯ.—ಕಂತ್ರಿ ಅಂದರೆ ಲುಚ್ಚ ಎಂಬ ಅರ್ಥ ಬರುತ್ತದೆ ಎಂದು ನಾನು ಹೇಳಿದೆ.

ಶ್ರೀ ಕೆ.ಹೆಚ್. ಪಾಟೀಲ್.—ನಾನು ಯಾವ ಕಡೆಯವರನ್ನು ಉದ್ದೇಶಿಸಿ ಹೇಳಿಲ್ಲ. ಯಾರೂ ಲುಚ್ಚ ಅಲ್ಲ. ಹಾಗೆಯೇ ಲುಚ್ಚ ಎಂದು ನಾನು ಅನ್ನುವುದಿಲ್ಲ. ನಮ್ಮ ಭಾಷೆಯಲ್ಲಿ ಶುಭ-ಅಶುಭ ಎಂದು ಹೇಳುತ್ತಾರೆ ಹಾಗೆಯೇ ಇದು.

ಶ್ರೀ ಲಕ್ಷ್ಮೀಸಾಗರ್.—ತಂತ್ರಿ ಕೆಟ್ಟ ಶಬ್ದ ಅಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಆದರೆ ಕಂತ್ರಿ ಅಂದರೆ ಲುಚ್ಚ ಎಂದಾಗುತ್ತದೆ.

ಶ್ರೀ ಕೆ.ಹೆಚ್. ಪಾಟೀಲ್.—ತಂತ್ರಿಗೆ ಕಂತ್ರಿ ಎಂದು ಏನಾದರೂ ಹೇಳಿದರೆ ಅದು ಮಹಾ ದೊಡ್ಡ ತಪ್ಪಲ್ಲ. ನಮ್ಮ ಕ್ಷೇತ್ರದಲ್ಲಿ ಯಾರೂ ಆ ಕೆಲಸ ಮಾಡಿಲ್ಲ ಎಂದರೆ ನಮಗೆ ಕಂತ್ರಿ ಅನ್ನದೆ ಮತ್ತೆ ಏನನ್ನು ಹೇಳಬೇಕು ಜನ ? ನಮಗೆ ಓಟು ಕೊಡುವಾಗ ನಮ್ಮ ಚೆಂದವನ್ನು ನೋಡಿ ಕೊಟ್ಟಿದ್ದಾರೆಯೇ ? ಅದಕ್ಕಾಗಿ ಯಾರು ಯಾರು ತಮ್ಮ ಕ್ಷೇತ್ರದಲ್ಲಿ ಪ್ರಗತಿಪರ ಕೆಲಸಗಳನ್ನು ಮಾಡಿದ್ದಾರೆ,

ಯಾರು ಯಾರು ತಮ್ಮ ತಮ್ಮ ಕ್ಷೇತ್ರಕ್ಕಾಗಿ ಹಗಲಿರುಳು ದುಡಿದಿದ್ದಾರೆ, ಅಂತಹವರನ್ನು ಶ್ಲಾಘನೆ ಮಾಡುವುದು ನಮ್ಮ ಕರ್ತವ್ಯ. ಆ ದೃಷ್ಟಿಯಿಂದ ನಾನು ಹೇಳುತ್ತಾ ಇದ್ದೇನೆ. ಇವೊತ್ತಿನ ದಿವಸ ೧೭೯ ಅಗ್ರೋಬೇಸ್ಡ್ ಇಂಡಸ್ಟ್ರೀಸ್ ಪ್ರಾರಂಭ ಮಾಡಿಕೊಳ್ಳಲಿಕ್ಕೆ ನಿಮ್ಮ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಇದೆ, ನೀವು ಅದನ್ನು ಉಪಯೋಗ ಮಾಡಿಕೊಳ್ಳಿ ಅಥವಾ ನಿಮ್ಮ ತಾಂತ್ರಿಕ ಸಲಹಾ ಮಂಡಳಿಯನ್ನಾದರೂ ಉಪಯೋಗಿಸಿಕೊಳ್ಳಿ ಅಥವಾ ಈ ಸದನದ ಒಂದು ಸಮಿತಿಯನ್ನು ನೇಮಿಸಿ ಅದರ ಮೂಲಕವಾದರೂ ಕಾರ್ಯಸಾಧನೆ ಮಾಡಿರಿ. ಒಟ್ಟಾರೆ ಎಲ್ಲಾ ರೈತರ ಮಾಲು ಸಂಪೂರ್ಣವಾಗಿ ಪ್ರೊಸೆಸ್ ಆಗಿ ಅವರಿಗೆ ಸಂಪೂರ್ಣ ಲಾಭ ಬರುವಂತೆ ಆಗಬೇಕು. ಇದಕ್ಕೆ ರೆಗ್ಯುಲೇಟ್ ಮಾರ್ಕೆಟ್ ಕಮಿಟಿ ಬಿಲ್ಲಿನೊಳಗೆ ಮಾನ್ಯ ಕೆ.ಹೆಚ್. ಪಾಟೀಲರು ಮಾತನಾಡುತ್ತಿದ್ದಾರೆ. ಏತಕ್ಕಾಗಿ ಎಂದು ಮಾನ್ಯ ಜಾಲಪ್ಪನವರು ಕೇಳಬಹುದು. ಹೀಗೆ ಏತಕ್ಕಾಗಿ ಎಂದರೆ ಮಾನ್ಯ ಜಾಲಪ್ಪನವರೇ, ಇವೊತ್ತಿನ ದಿವಸ ಎನ್.ಸಿ.ಡಿ.ಸಿ. ಮೊದಲಾದಂತಹ ಸಂಸ್ಥೆಗಳು ಹಣವನ್ನು ಸರಕಾರಕ್ಕೆ ಸಾಲದ ರೂಪದಲ್ಲಿ ಕೊಡುತ್ತಾ ಇದ್ದರೂ ಅವರು ಏನು ಮಾಡುತ್ತಿದ್ದಾರೆ ಎಂದರೆ ನೀವು ೧೦% ಹಣವನ್ನು ರೈತರಿಂದ ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾ ಇದ್ದಾರೆ. ಎಸ್.ಸಿ./ಎಸ್.ಟಿ. ಯವರು ಹತ್ತು ಪರ್ಸೆಂಟ್ ಕೂಡ ಕೊಡಬೇಕಾಗಿಲ್ಲ, ಒಂದು ಪರ್ಸೆಂಟ್ ಕೊಟ್ಟರೆ ಸಾಕು ಎಂದು ಹೇಳುತ್ತಾ ಇದ್ದಾರೆ ಆದರೆ ಆ ಒಂದು ಪರ್ಸೆಂಟ್‌ನ್ನು ಕೂಡ ಕೊಡಲಿಕ್ಕೆ ಆ ಜನರಿಂದ ಆಗುತ್ತಾ ಇಲ್ಲ. ಇದು ನಿಜವಾಗಿಯೂ ವಾಸ್ತವಿಕವಾದ ಒಂದು ಚಿತ್ರ. ಆ ವಾಸ್ತವಾಂಶದ ಚಿತ್ರವನ್ನು ಒಂದು ರೂಪಕ್ಕೆ ತರಬೇಕೆಂದರೆ ಏನು ಮಾಡಬೇಕು ಅಂದರೆ, ಎ.ಪಿ.ಎಂ.ಸಿ ಏನಿದೆ, ಇದರಲ್ಲಿ ಇರತಕ್ಕಂತಹ ಹಣವನ್ನು ಹೇರಳವಾಗಿರತಕ್ಕಂತಹ ಹಣವನ್ನು ಸಾಲದ ರೂಪದಲ್ಲಾಗಲೀ ಅಥವಾ ಸಹಾಯಧನದ ರೂಪದಲ್ಲಾಗಲೀ, ಆ ತಾಲ್ಲೂಕಿನಲ್ಲಿ ಆ ಏರಿಯಾದಲ್ಲಿ ಬರತಕ್ಕಂತಹ ಸಂಘ ಸಂಸ್ಥೆಗಳು ಕೊಟ್ಟಲ್ಲಿ ಅದನ್ನು ಉಪಯೋಗ ಮಾಡುವಂತಹ ಒಂದು ಬಿಲ್ಲನ್ನು ಇದರಲ್ಲಿ ಅಳವಡಿಸಿಕೊಂಡಿದ್ದರೆ, ಇದಕ್ಕಿಂತಹ ಒಳ್ಳೆಯದಾಗುತ್ತಿತ್ತು ಎಂದು ನಾನು ಸಲಹೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಅಧ್ಯಕ್ಷರೇ, ನಾನು ಇನ್ನೂ ಇದರ ಬಗ್ಗೆ ವಿವರವಾಗಿ ಹೇಳುವಂತಹ ಅವಶ್ಯಕತೆ ಇಲ್ಲ. ಇದರಲ್ಲಿ ಪ್ರತಿಯೊಂದು ಬಿಲ್ಲನ್ನು ಕೂಲಂಕಷವಾಗಿ ಅಭ್ಯಾಸ ಮಾಡಿದ್ದೇನೆ. ಈ ಬಿಲ್‌ನಲ್ಲಿ ಕೇವಲ ಸ್ಟೆಟ್ಯುಟರಿ ಚೇಂಜಸ್ ಮಾಡಿದ್ದಾರೆಯೇ ಹೊರತು, ಉಳಿದ ೨–೩ ಸೆಕ್ಷನ್ ಬಿಟ್ಟರೆ ಉಳಿದುದು ಸ್ವಾಭಾವಿಕವಾದಂತಹ ತಿದ್ದುಪಡಿ ಇದೆ. ಈ ೨–೩ರರೊಳಗೆ, ಮೊದಲನೆಯದಾಗಿ ಈ ರೈತರಿಂದ ಬರತಕ್ಕಂತಹ ದಲ್ಲಾಳಿಯನ್ನು ತಪ್ಪಿಸಿ ಖರೀದಿದಾರರಿಂದ ಕೊಡುವ ಹಾಗೆ ಮಾಡಿದ್ದಾರೆ. ಇದು ವ್ಯವಹಾರಸ್ಥರಿಗೂ ಲಾಭ ಅನುಕೂಲವಾಗಿದೆ. ಆದರೆ ಅವರು ಏಕೆ ಇದನ್ನು ವಿರೋಧ ಮಾಡುತ್ತಿದ್ದಾರೋ ನನಗೆ ಗೊತ್ತಿಲ್ಲ. ನನ್ನ ಹತ್ತಿರ ಕೆಲವರು ಬಂದಿದ್ದರು. ಗದಗಿನವರಾದ ನೀವೂ ಇದನ್ನು ಸ್ವಾಗತ ಮಾಡುತ್ತೀರಿ ಎಂದು ಕೇಳಿದ್ದೇವೆ, ಹಾಗೆ ಮಾಡಬೇಡಿ, ಮಾಡಿದರೆ ನಿಮಗೆ ಎಚ್ಚರಿಕೆ ಎನ್ನುವ ರೀತಿಯಲ್ಲಿ ಹೇಳಲು ಬಂದಿದ್ದರು. ಅದಕ್ಕೆ ನಾನು ಹೇಳಿದೆ, ನನಗೆ ನಿಮ್ಮ ಎಚ್ಚರಿಕೆ ಬೇಕಾಗಿಲ್ಲ, ನಾನು ಇವೊತ್ತೇ ಮನೆ ಬಿಟ್ಟು ಬಾ ಎಂದು ಬರುತ್ತೇನೆ. ಆದರೆ ರೈತರಿಗೆ, ಅವರ ಹಿತ ರಕ್ಷಣೆಗೆ ವಿರುದ್ಧವಾಗಿ ನಾನು ಕೆಲಸ ಮಾಡಲಿಕ್ಕೆ ತಯಾರಾಗಿಲ್ಲ ಎಂದು ಹೇಳಿದೆ. ನಿಮಗೆ ಯಾರು ಕೊಟ್ಟರೆ ಏನು ? ಖರೀದಿದಾರ ರೈತರಿಗೆ ಕೊಡುತ್ತಾನೆ. ನಿಮ್ಮ ಹಣ ನಿಮಗೆಸಿಗುತ್ತದೆ ಹಾಗೆಂದರೆ ಇವನ ಕಡೆಯಿಂದ ತೆಗೆದುಕೊಳ್ಳಬಾರದು, ಅವನ ಕಡೆಯಿಂದ ತೆಗೆದುಕೊಳ್ಳಬೇಕು ಎನ್ನುವಂತಹ ಹಠ ಏಕೆ ? ಆ ದೃಷ್ಟಿಯಿಂದ ಎರಡೂ ಇಟ್ಟಿದ್ದಾರೆ, ಒಂದೇ ಮಾಡಿದ್ದಾರೆ ಅಂದರೆ ಬಡಿದಾಡೋಣ. ಅದನ್ನು ಮಾಡಿಲ್ಲ, ಎರಡು ಇದ್ದುದನ್ನು ಎರಡಾಗೇ ಇಟ್ಟಿದ್ದಾರೆ ಎಂದು ನಾನು ಉದ್ದೇಶವನ್ನು ಅವರ ಎದುರು ಹೇಳಿದ್ದೇನೆ. ಮಾನ್ಯ ಅಧ್ಯಕ್ಷರೇ, ಜಾಲಪ್ಪನವರ ವಿಚಾರದಲ್ಲಿ ಇವೊತ್ತು ಪತ್ರಿಕೆಯಲ್ಲಿ ಸುದ್ದಿ ಬಂದಿದೆ. ಇದು ನಮ್ಮ ಕಡೆಯಿಂದಲೋ, ನಿಮ್ಮ ಕಡೆಯಿಂದಲೋ ಬಂದಿದೆ. ಅವರು ವ್ಯವಹಾರ ಮಾಡುವವರು ಏನು ತಿಳಿದುಕೊಂಡಿದ್ದಾರೋ ಏನೋ ಗೊತ್ತಿಲ್ಲ ನೀವು ಅವರಿಗೆ ತಿಳಿಸಿ ಹೇಳಿ. ದಲ್ಲಾಳಿಗಳಿಗೆ ತಿಳಿಸಿ ಹೇಳಿ ನಿಮಗೆ ಹಿಂದೆ ಬರುತ್ತಿರುವ ದಲ್ಲಾಳಿ ೨,೦೦೦೦೦ ಇದ್ದರೆ, ಅದು ಈಗ ೨,೧೦,೦೦೦ ಆಗುತ್ತದೆ. ಏಕೆಂದರೆ ಯಾರು ಯಾರೋ ತಪ್ಪಿಸಿಕೊಳ್ಳುತ್ತಿದ್ದರು, ಅವರು ಈಗ ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ಹಾಗೆಯೇ ಕಳ್ಳತನದಿಂದ ಏನು ಹೊಡೆಯುತ್ತಿದ್ದರು, ಅದು ಕೂಡ ತಪ್ಪುತ್ತದೆ ಎಂದು ತಿಳಿಸಿ ಹೇಳಿ. ಹಾಗೆಯೇ ಯಾರು ನಿಮ್ಮ ಹತ್ತಿರ ಬರುತ್ತಾರೋ ಅಂತಹವರ ಬಗ್ಗೆ ನಿಮಗೆ ಸ್ವಲ್ಪ ಎಚ್ಚರಿಕೆ ಇರಲಿ ಎಂದು ಹೇಳಿ, ಇನ್ನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ, ಏಕೆಂದರೆ ಮುಂದೆ ನಾನ್ ಅಫೀಷಿಯಲ್ ಬಿಸಿನಸ್ ಇದೆ. ಮತ್ತಿತರರು ಮಾತನಾಡಲಿ. ಅನೇಕ ವಿಚಾರಗಳಲ್ಲಿ ಮಾತನಾಡತಕ್ಕಂಥ ವಿಚಾರ ಇದ್ದಾಗ್ಯೂ ಇವರು ಮಾತನಾಡುವುದಿಲ್ಲ. ಈ ಬಿಲ್‌ನ್ನು ಹೃತ್ಪೂರ್ವಕವಾಗಿ ಸ್ವಾಗತ ಮಾಡಿ, ಮಾನ್ಯ ಜಾಲಪ್ಪನವರಿಗೆ ಎಷ್ಟೇ ತೊಂದರೆಗಳು ಬಂದರೂ ಕೂತ ಪಟ್ಟಭದ್ರ ಹಿತಾಸಕ್ತಿಗಳಿಂದ ಏನೇ ತೊಂದರೆಗಳು ಬಂದರೂ ಸಹಿತ, ನಿಮ್ಮ ನಿಲುವನ್ನು ಬದಲಾಯಿಸಬೇಡಿ. ಪುಣ್ಯ

ವನ್ನೆಲ್ಲಾ ಮಾಡಿ, ಸ್ವಲ್ಪ ಪಾಪ ಬರುವ ಹಾಗೆ ಮಾಡಬೇಡಿ. ಇದ್ದುದನ್ನು ಡೈಲ್ಯೂಟ್ ಮಾಡದೇ ಇದ್ದ ಹಾಗೇ ತನ್ನಿ. ಇದರಿಂದ ಒಂದು ಕೀರ್ತಿ ಬರುತ್ತದೆ. ಒಂದು ವೇಳೆ ನಿಮ್ಮ ಮಂತ್ರಿ ಪದವಿ ಹೋದರೂ ಸಹಿತ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಮಂತ್ರಿ ಪದವಿ ಬರುತ್ತದೆ ಹೋಗುತ್ತದೆ. ಒಳ್ಳೆಯ ಕೆಲಸವನ್ನು ಮಾಡಿದರೆ ಅದೊಂದು ಶಾಶ್ವತವಾದ ಕೆಲಸವಾಗುತ್ತದೆ. ನಿಮ್ಮ ನಿಮ್ಮ ಹೆಸರು ಉಳಿಯುತ್ತದೆ. ಆ ದೃಷ್ಟಿಯಿಂದ ನಾನು ಹೇಳುತ್ತಾ ಇದ್ದೇನೆ. ನೀವು ಆ ವಿಚಾರದಲ್ಲಿ ಹೆದರಬೇಡಿ, ಅಂಜಬೇಡಿ ಅಳುಕಬೇಡಿ. ಎದೆಗಾರಿಕೆಯಿಂದ ರೈತರ ಹಿತದೃಷ್ಟಿಯಿಂದ, ಅವರನ್ನು ಕಾಪಾಡುವ ದೃಷ್ಟಿಯಿಂದ, ನೀವು ಈ ಬಿಲ್‌ನ್ನು ಇದ್ದಕ್ಕಿದ್ದ ಹಾಗೆ ಪಾಸ್ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಂಡು, ಈ ಬಿಲ್‌ಗೆ ನನ್ನ ಸಂಪೂರ್ಣ ಬೆಂಬಲವನ್ನು ಕೊಡುತ್ತೇನೆ. ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ಧನ್ಯವಾದಗಳನ್ನರ್ಪಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ವೆಂಕಟರಾಮಯ್ಯನವರು, ತಾವು ಸ್ವಲ್ಪ ಸಂಕ್ಷಿಪ್ತವಾಗಿ ಮಾತನಾಡಿ.

† ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೇ, ರೈತರ ಹಿತದೃಷ್ಟಿಯಿಂದ ಎ.ಪಿ.ಎಂ.ಸಿ. ಬಹಳ ಮುಖ್ಯವಾದಂತಹ ಒಂದು ಅಸ್ತ್ರ, ರೈತರು ಬೆಳೆದ ಬೆಳೆಗೆ ಒಂದು ನ್ಯಾಯವಾದ ಬೆಲೆಯನ್ನು ಕೊಡಬೇಕೆಂದು ಈ ಒಂದು ಮಾರ್ಕೆಟ್‌ಯಾರ್ಡ್‌ನ್ನು ಸ್ಥಾಪಿಸಿದ್ದಾರೆ. ಆದರೂ ಕೂಡ ರೈತರ ಬೆಳೆಗಳನ್ನು ಮಾರಾಟ ಮಾಡುವುದರಲ್ಲಿ ೫ ಪರ್ಸೆಂಟ್ ಕೂಡ ಈ ಒಂದು ಆವರಣದೊಳಗೆ ಬರುವುದಿಲ್ಲ. ಇದರಿಂದ ರೈತರಿಗೆ ಏನೂ ಉಪಯೋಗ ಆಗುತ್ತಾ ಇಲ್ಲ. ಕೆಲವು ಕಡೆಗಳಲ್ಲಿ, ಉದಾಹರಣೆಗೆ ಧಾರವಾಡ ಬೆಳಗಾಂವಿ ಜಿಲ್ಲೆಯ ಭಾಗಗಳಲ್ಲಿ ಮಾತ್ರ ಈ ಮಾರ್ಕೆಟ್ ಯಾರ್ಡ್‌ಗಳು ಸ್ವಲ್ಪ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಾ ಇವೆ ಎಂದು ಎಂದು ಕೇಳಿದ್ದೇನೆ. ಅದು ಎಲ್ಲರಿಗೂ ಗೊತ್ತು. ನಮ್ಮ ಕಡೆ ಇವು ಪೂರ್ತಿಯಾಗಿ ವಿಫಲವಾಗಿವೆ ಎಂದು ಮಾನ್ಯ ಜಾಲಪ್ಪನವರಿಗೂ ಗೊತ್ತು. ಬೆಳೆದುದರಲ್ಲಿ ೫ ಪರ್ಸೆಂಟ್ ಕೂಡ ಯಾರ್ಡಿಗೆ ಟಚ್ ಆಗಿದ್ದರೆ ಅದು ಸೆಕ್ಸೆಸಿವ್ ಎಂದು ಹೇಳಬಹುದು. ನಿಜವಾಗಿಯೂ ಒಂದು ಒಂದೂವರೆ ಪರ್ಸೆಂಟ್‌ನಷ್ಟು ಕೂಡ ಹೋಗುತ್ತಾ ಇಲ್ಲ. ಇದಕ್ಕೆ ಕಾರಣ ಏನು ಎಂದರೆ ನ್ಯಾಯವಾಗಿ ಈ ಮಾರ್ಕೆಟ್ ಯಾರ್ಡ್ ಬಗ್ಗೆ ಒಂದು ಸೂಕ್ತ ರೀತಿಯಲ್ಲಿ ಪ್ರಚಾರವೇ ಆಗಿಲ್ಲ. ಇದನ್ನು ಹೇಗೆ ಉಪಯೋಗ ಮಾಡಿಕೊಳ್ಳಬೇಕೆಂಬ ಬಗ್ಗೆ ರೈತರಿಗೆ ತಿಳಿ ಹೇಳುವ, ಮನದಟ್ಟು ಮಾಡಿಕೊಡುವ ಒಂದು ಪ್ರಯತ್ನ ಪ್ರಚಾರ ನಡೆದಿಲ್ಲ ಮತ್ತು ಆ ಕಡೆಗೆ ರೈತರನ್ನು ಆಕರ್ಷಿಸುವ ಪ್ರಯತ್ನವನ್ನೂ ಕೂಡ ಮಾಡಿಲ್ಲ. ಏನೋ ಚುನಾವಣೆ ಸಮಯದಲ್ಲಿ ಯಾರ್ಡ್‌ಗೆ ಒಂದು ಚುನಾವಣೆ ಆಗುತ್ತದೆ. ಅದರಲ್ಲಿ ಡೈರೆಕ್ಟರ್ ಆಗಬೇಕೆಂದು ಕೆಲವರಿಗೆ ಉತ್ಸಾಹ ಇರುತ್ತದೆ ಅಂತಹವರು ಸ್ವಲ್ಪ ಓಡಾಡಿ ಮತಗಳಿಕೆಯಲ್ಲಿ ತೊಡಗಿ ಸ್ವಲ್ಪ ಕೆಲಸ ಮಾಡುತ್ತಾರೆ. ಚುನಾವಣೆಗಾಗಿ ಈ ಮಾರ್ಕೆಟ್ ಯಾರ್ಡ್‌ಗಳು ಇವೆಯೋ ಏನೋ ಎಂದು ಕಾಣುತ್ತದೆ. ಬಂಗಾರುಪೇಟೆಯಲ್ಲಿ ಬೆಲ್ಲದ ಮಾರ್ಕೆಟ್ ಇದೆ, ಚಿಂತಾಮಣಿಯಲ್ಲಿ ಕಡ್ಲೆಕಾಯಿ ಮಾರ್ಕೆಟ್ ಇದೆ, ಮುಳಬಾಗಿಲಿನಲ್ಲಿಯೂ ಬೆಲ್ಲದ ಮಾರ್ಕೆಟ್ ಇದೆ ಕೋಲಾರ ಜಿಲ್ಲೆಯಲ್ಲಿ ಏನೂ ಇಲ್ಲವೇ ಇಲ್ಲ. ಮಾನ್ಯ ಜಾಲಪ್ಪನವರಿಗೆ ಇದು ಚೆನ್ನಾಗಿ ಗೊತ್ತಿದೆ.

೧೦.೦೦ ಪಿ. ಎಂ.

(ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಎ. ಲಕ್ಷ್ಮೀಸಾಗರ್.—ಹುಣಸೇಹಣ್ಣು, ಮಾವಿನ ಹಣ್ಣು, ಮೆಣಸಿನ ಕಾಯಿ ಇವೆಲ್ಲಾ ಬರುವುದಿಲ್ಲವೇ ?

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಜಾಲಪ್ಪನವರಿಗೆ ಚೆನ್ನಾಗಿ ಗೊತ್ತಿದೆ. ಅಲ್ಲಿಗೆ ಮಾವಿನ ಹಣ್ಣು ಬರುವುದೇ ಇಲ್ಲ, ಮೆಣಸಿನ ಕಾಯಿ ಸ್ವಲ್ಪ ಬರುತ್ತದೆ. ಮಾವಿನಹಣ್ಣು ಬರುವ ಹಾಗೆ ತಾವು ಸ್ವಲ್ಪ ಯೋಚನೆ ಮಾಡಿದರೆ ಒಳ್ಳೆಯದು ಎಂದು ಹೇಳುತ್ತೇನೆ. ಇನ್ನೊಂದು ಅನ್ಯಾಯ ರೈತರಿಗೆ ಆಗುವುದು ಏನೆಂದರೆ ಅಲ್ಲಿಯ ರೈತರಿಗೆ ಅಂದರೆ ರೆಗ್ಯುಲೇಟೆಡ್ ಮಾರ್ಕೆಟ್‌ನಲ್ಲಿ ಏನು ಫೆಸಿಲಿಟೀಸ್ ವಿಷಯ ಇದೆ ಎನ್ನುವುದು ಗೊತ್ತೇ ಇಲ್ಲ. ಅದರಲ್ಲಿ ಸ್ಟೋರೇಜ್ ಫೆಸಿಲಿಟೀಸ್ ಇದೆ ಎನ್ನುವುದು ಆ ರೈತನಿಗೆ ಗೊತ್ತೆ ಇಲ್ಲ. ಈ ಫೆಸಿಲಿಟೀಸ್ ಅನ್ನು ಅಲ್ಲಿಯ ಕಮಿಷನ್ ತೆಗೆದುಕೊಳ್ಳು

---

† ಈ ಚಿಹ್ನೆಯು ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ವವರು, ಎಂದರೆ ದಳ್ಳಾಳಿಗಳು ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ನ್ಯಾಯವಾಗಿ ಹೇಳ ಬೇಕಾದರೆ ಇದರ ಫೆಸಿಲಿಟೀಸ್ ಅನ್ನು ರೈತರು ಉಪಯೋಗಿಸುತ್ತಾ ಇಲ್ಲ. ಮಾನ್ಯ ಜಾಲಪ್ಪನವರಿಗೆ ಗೊತ್ತು. ರೈತರ ಹೆಸರಿನಲ್ಲಿ ಈ ದಳ್ಳಾಳಿಗಳು ಕೊಂಡುಕೊಂಡು ಆ ವಸ್ತುವನ್ನು ಅದರಲ್ಲಿ ಇಟ್ಟು ಕೊಳ್ಳುತ್ತಾರೆ. ಏತಕ್ಕೆಂದರೆ ಅಲ್ಲಿ ಸ್ಟೋರೇಜ್‌ನಲ್ಲಿ ರೈತರ ಹೆಸರಿನಲ್ಲಿ ಇಟ್ಟರೆ ಆ ರೈತರು ಅದಕ್ಕೆ ೫೦ ಪೈಸೇ ಮಾತ್ರ ಕೊಡಬೇಕಾಗುತ್ತದೆ ಅದೇ ದಳ್ಳಾಳಿಗಳು ಹತ್ತಿರ ಇಟ್ಟರೆ ಅವರು ೨ ರೂಪಾಯಿ ಗಳನ್ನು ಕೊಡಬೇಕಾಗುತ್ತದೆ. ಆದುದರಿಂದ ಅದರ ಉಪಯೋಗವನ್ನು ರೈತರ ಹೆಸರಿನಲ್ಲಿ ದಳ್ಳಾಳಿಗಳು ಉಪಯೋಗಿಸಿಕೊಳ್ಳುತ್ತಾರೆ. ಇದರಲ್ಲೂ ಕೂಡ ರೈತರಿಗೆ ಮೋಸವಾಗುತ್ತಾ ಇದೆ. ರೈತರು ಏನಾದರೂ ಕೆಲವು ಸಾಮಾನುಗಳನ್ನು ತೆಗೆದುಕೊಂಡು ಕಡ್ಲೆಕಾಯಿ ಮಾರ್ಕೆಟ್‌ಗೆ ಬಂದರೆ ಅವರು ಅಲ್ಲಿಗೆ ತರುವ ಮೊದಲೇ ಎ. ಪಿ. ಎಂ. ಸಿ. ಅವರು ಅವರ ಹತ್ತಿರ ಸ್ವಲ್ಪ ಕಂದಾಯ ತೆಗೆದುಕೊಂಡು ಹೋಗುತ್ತಾರೆ. ಇದರಿಂದಲೂ ಸಹ ರೈತರಿಗೆ ಸರಿಯಾಗಿ ಉಪಯೋಗವಾಗುತ್ತಾ ಇಲ್ಲ. ಇಂಥ ಒಂದು ಶೋಷಣೆ ರೈತರ ಬಗ್ಗೆ ನಡೆಯುತ್ತಾ ಇದೆ. ಇಂತಹ ಪರಿಸ್ಥಿತಿ ಏತಕ್ಕೆ ಬಂದಿತೋ ಗೊತ್ತಿಲ್ಲ. ಶ್ರೀಮಾನ್ ಕೆ. ಹೆಚ್. ಪಾಟೀಲರು ಮಾತನಾಡುವಾಗ ಹೇಳಿದರು. ಅವರು ಹೇಳಿದ ಹಾಗೆ ಸ್ಟೋರೇಜ್ ಫೆಸಿಲಿಟೀಸ್ ಎಲ್ಲಾ ರೈತನ ಹೆಸರಿನಲ್ಲಿ ಈ ಮಿಡಲ್‌ಮ್ಯಾನ್ ಎಂದರೆ ದಳ್ಳಾಳಿಗಳು ಉಪಯೋಗಿಸಿಕೊಳ್ಳುತ್ತಿದ್ದಾರೆ. ಹೋದ ವರ್ಷ ಕಡ್ಲೆಕಾಯಿ ಒಂದು ಕ್ವಿಂಟಾಲ್‌ಗೆ ೩೦೦ ರೂಪಾಯಿ ಗಳು ಇತ್ತು. ಅದನ್ನು ಅವರು ತೆಗೆದುಕೊಂಡು ಸ್ಟೋರೇಜ್‌ನಲ್ಲಿ ೬ ತಿಂಗಳು ಇಟ್ಟರು. ಆ ಆರು ತಿಂಗಳಿನಲ್ಲಿ ಅದು ಕ್ವಿಂಟಾಲ್‌ಗೆ ೬೦೦ ರೂಪಾಯಿಗಳ ಬೆಲೆ ಆಯಿತು. ಹಾಗೆಯೇ ಬೆಲ್ಲ ರೈತನ ಕೈಯ್ಯಲ್ಲಿ ಇದ್ದಾಗ ೨೦೦ ರೂಪಾಯಿಗಳು ಇತ್ತು. ಅನಂತರ ಅದು ೩೦೦ ರೂಪಾಯಿ ಆಯಿತು. ಈ ರೀತಿಯಾಗಿ ಮಿಡಲ್‌ಮ್ಯಾನ್‌ಗಳು ರೈತನ ಹೆಸರಿನಲ್ಲಿ ಸ್ಟೋರೇಜ್ ಫೆಸಿಲಿಟೀಸ್ ಅನ್ನು ಉಪಯೋ ಗಿಸಿಕೊಂಡು ಲಾಭ ಪಡೆದುಕೊಳ್ಳುತ್ತಿದ್ದಾರೆ. ಈ ಸ್ಟೋರೇಜ್ ಫೆಸಿಲಿಟೀಸ್‌ನಿಂದ ಆಗತಕ್ಕಂಥ ಅಪಚಾರವನ್ನು ನಾನು ಎಲ್ಲೂ ನೋಡಿಲ್ಲ.

ಇನ್ನೊಂದು ವಿಷಯ ಏನೆಂಧರೆ ಈ ಎ. ಪಿ. ಎಂ. ಸಿ. ನಲ್ಲಿ ಎಕ್ಸೆಸ್ ದುಡ್ಡು ಇದೆ, ಅದನ್ನು ತೆಗೆದುಕೊಂಡು ಟ್ರಾನ್ಸ್‌ಪೋರ್ಟ್ ಫೆಸಿಲಿಟೀಸ್‌ಗೆ ಬೇಕಾದ ರೋಡ್ಸ್ ಅನ್ನು ಮಾಡಿಸುತ್ತೇವೆಂದು ಶ್ರೀ ಆರ್. ಎಲ್. ಜಾಲಪ್ಪನವರು ಹೇಳಿದರು. ಇದುವರೆಗೆ ಕರ್ನಾಟಕದಲ್ಲಿ ಎಲ್ಲೂ ಆ ರೀತಿ ಆಗಿಲ್ಲ. ಈಗ ಎ. ಪಿ. ಎಂ. ಸಿ. ಅವರ ಕಂಟ್ರೋಲಲ್ಲೇ ಇದೆ. ಎಲ್ಲಾ ಕಡೆಯೂ ಇನ್ನೂ ರೋಡ್ ಮುಟ್ಟಿಲ್ಲ. ರೈತರು ಎ. ಪಿ. ಎಂ. ಸಿ. ಗೆ ಆಲೂಗೆಡ್ಡೆಯನ್ನಾಗಲಿ ಇನ್ನು ಇತರ ಸಾಮಾನಗಳನ್ನಾಗಲಿ ತರ ಬೇಕಾದರೆ ಟ್ರಾನ್ಸ್‌ಪೋರ್ಟ್ ಫೆಸಿಲಿಟೀಸ್ ಬೇಕು, ಮುಖ್ಯವಾಗಿ ರಸ್ತೆಯು ಬೇಕು ಈ ರಸ್ತೆಯ ಕೆಲಸ ವನ್ನು ತಾವು ಮಾಡಿಸಿಕೊಡಬೇಕು. ಎ.ಪಿ.ಎಂ.ಸಿ. ನಲ್ಲಿ ಯಾರು ಯಾರು ಇರುತ್ತಾರೆಂದರೆ ಒಬ್ಬ ಅಧ್ಯ ಕ್ಷರು ಮತ್ತು ಒಬ್ಬ ಸೆಕ್ರೆಟರಿಯವರು ಇರುತ್ತಾರೆ. ಅವರುಗಳಿಂದ ಅಲ್ಲಿ ಉಪಯೋಗವಾಗುವಂಥ ಕೆಲಸ ಗಳು ಆಗುತ್ತಾ ಇಲ್ಲ. ಅವರು ಇದರ ಬಗ್ಗೆ ಸರಿಯಾಗಿ ಕಾಳಜಿ ವಹಿಸುತ್ತಾ ಇಲ್ಲ. ನಮ್ಮ ಜಿಲ್ಲೆಯಲ್ಲೇ ಆಗಲಿ ಬೆಂಗಳೂರು ಸುತ್ತಮುತ್ತ ಆಗಲಿ ತರಕಾರಿಯನ್ನು ಜಾಸ್ತಿ ಬೆಳೆಯುತ್ತಾರೆ. ಆಲೂಗೆಡ್ಡೆ ಬೆಳೆಯುತ್ತಾರೆ. ಹೆಚ್ಚಾಗಿ ಆಲೂಗೆಡ್ಡೆಯನ್ನು ಹಾಸನದಲ್ಲಿ ಬೆಳೆಯುತ್ತಾರೆ. ಅದನ್ನು ಬೆಳೆದಾಗ ಬೆಳೆದವರು ಮಾರುವುದಕ್ಕೆ ಮದ್ರಾಸ್‌ಗೆ, ಬೆಜವಾಡದ ಮಾರ್ಕೆಟ್‌ಗೆ ತೆಗೆದುಕೊಂಡು ಹೋಗಿ ಅದನ್ನು ೬೦ ರೂಪಾಯಿಗಳಿಗೆ ಮಾರಿದರು. ಅವರು ಮಾರಿದ ಎರಡು ತಿಂಗಳಲ್ಲೇ ಅದು ೧೨೦ ರೂಪಾಯಿಗಳ ಬೆಲೆ ಆಯಿತು. ಇದರಿಂದ ಬೆಳೆದವನಿಗೆ ಏನೂ ಉಪಯೋಗವಾಗಲಿಲ್ಲ. ಇದೇ ಸಂದರ್ಭದಲ್ಲಿ ತಮ್ಮ ಗಮನಕ್ಕೆ ಒಂದು ವಿಷಯವನ್ನು ತರುತ್ತೇನೆ. ಏನೆಂದರೆ ಕೋಲಾರದಲ್ಲಿ ಮತ್ತು ಚಿಕ್ಕಬಳ್ಳಾಪುರದಲ್ಲಿ ಒಂದೊಂದು ಕೋಲ್ಡ್ ಸ್ಟೋರೇಜ್ ಅನ್ನು ಒಂದೊಂದಕ್ಕೆ ೨೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ೨೦ ವರ್ಷದಿಂದಲೂ ಕಟ್ಟುತ್ತಾ ಇದ್ದಾರೆ. ಇದುವರೆಗೂ ಆ ಸ್ಟೋರೇಜ್‌ನಲ್ಲಿ ಒಂದು ಕ್ವಿಂಟಾಲನ್ನೂ ಇಡುವುದಕ್ಕೆ ಆಗಿಲ್ಲ. ಹಾಗೆಯೇ ಬೆಂಗಳೂರಿನಲ್ಲಿ ಹೇಳುವುದಾದರೆ ಕೆಂಪೇಗೌಡ ರಸ್ತೆಯಲ್ಲಿ ಏನು ಒಂದು ಕೋಲ್ಡ್ ಸ್ಟೋರೇಜ್ ಇದೆ, ಅದು ಅಷ್ಟಾಗಿ ಚೆನ್ನಾಗಿ ಉಪಯೋಗವಾಗುತ್ತಾ ಇಲ್ಲ. ಅದೇ ಜಯನಗರದಲ್ಲಿ ಒಂದು ಕೋಲ್ಡ್ ಸ್ಟೋರೇಜ್ ಇದೆ, ಅದು ಪ್ರೈವೇಟ್‌ದ್ದು. ಅದು ಚೆನ್ನಾಗಿ ನಡೆಯುತ್ತಾ ಇದೆ. ಬೆಂಗಳೂರಿನಲ್ಲಿರುವ ಕೋಲ್ಡ್ ಸ್ಟೋರೇಜ್ ಅನ್ನು ಹುಷಾರಾಗಿ ನೋಡಿ ಅದನ್ನು ಸರಿಪಡಿಸಬೇಕು ಎಂದು ಸಾರಿ ಹೇಳಿದ್ದೇನೆ. ಇನ್ನೂವರೆಗೂ ಅದನ್ನು ಸರಿಪಡಿಸಿಲ್ಲ. ಈಗ ಲಾದರೂ ಅದನ್ನು ಸರಿಪಡಿಸಿ ನಮ್ಮ ರೈತರಿಗೆ ಅನುಕೂಲ ಮಾಡಿಕೊಡಿ ಎಂದು ಕೇಳುತ್ತೇನೆ.

ಉಪಾಧ್ಯಕ್ಷರು.—ಕೋಲ್ಡ್ ಸ್ಟೋರೇಜ್‌ಗೂ ಈ ಸಭೆಯ ಮುಂದಿರತಕ್ಕಂಥಾದ್ದಕ್ಕೂ ಏನೂ ಸಂಬಂಧವಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಸ್ವಾಮಿ, ಚಿಕ್ಕಬಳ್ಳಾಪುರ, ಶಿಡ್ಲಘಟ್ಟ ಮತ್ತು ಚಿಂತಾಮಣಿ ಇಲ್ಲಿ ಕೋಲ್ಡ್ ಸ್ಟೋರೇಜ್ ಕಟ್ಟುವುದಕ್ಕೆ ೭೫ ಲಕ್ಷ ರೂಪಾಯಿಗಳನ್ನು ಏನು ಖರ್ಚು ಮಾಡಿದ್ದಾರೆ ಇದರ ಬಗ್ಗೆ ನಾನು ಪ್ರಶ್ನೆಗಳನ್ನು ೩೩೪ ರ ನಿಯಮದ ಮೇರೆಗೂ ಹಾಗೂ ಕಾಲಿಂಗ್ ಅಟೆನ್‌ಷನ್ ಮೇರೆಗೂ ಕಳುಹಿಸಿದ್ದೆ. ಅಲ್ಲಿ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡಿಲ್ಲ. ನಾನು ಬರೆದದ್ದರ ಮೇಲೆ ಯಾವ ಅಧಿಕಾರಿಯ ಮೇಲೆ ಏನು ಆಕ್ಷನ್ ತೆಗೆದು ಕೊಂಡಿದ್ದೀರಿ ಹೇಳಿ. ಏನಾದರೂ ಅವರ ಮೇಲೆ ಆಕ್ಷನ್ ತೆಗೆದುಕೊಂಡಿದ್ದರೆ ನಾವು ಸಂತೋಷ ಪಡಬಹುದಾಗಿತ್ತು.

ಉಪಾಧ್ಯಕ್ಷರು.—ಇಲ್ಲಿ ಇರುವ ಅಮೆಂಡ್‌ಮೆಂಟ್‌ಗೂ, ಕೋಲ್ಡ್ ಸ್ಟೋರೇಜ್‌ಗೂ ಏನು ಸಂಬಂಧ ?

ಶ್ರೀ ಆರ್. ವೆಂಕಟರಾಮಯ್ಯ.—ಏನೂ ಸಂಬಂಧವಿಲ್ಲದಿದ್ದರೂ ಕೂಡ ಈ ಕೋಲ್ಡ್ ಸ್ಟೋರೆಜ್ ಎಂದು ಏನು ಮಾಡಿದ್ದೀರಿ ಅದನ್ನು ಇಂಪ್ರೂವ್‌ಮಾಡಲಿ ಎನ್ನುವ ದೃಷ್ಟಿಯಿಂದ ಹೇಳಿದ್ದೇನೆ. ಒಂದು ಪ್ರಾಬ್ಲಮ್ ಹೇಳುವಾಗ ಅದರ ಅಡಿಯಲ್ಲಿ ಇನ್ನೂ ಒಂದು ಪ್ರಾಬ್ಲಮ್ ಬರುವುದು ವಾಡಿಕೆ ಯಾಗಿದೆ.

ಉಪಾಧ್ಯಕ್ಷರು.—ತಾವು ಜಾಸ್ತಿ ಟೈಂ ತೆಗೆದುಕೊಂಡಿದ್ದೀರಿ, ಬೇಗನೆ ಮುಗಿಸಿ.

ಶ್ರೀ ಆರ್. ವೆಂಕಟರಾಮಯ್ಯ.—ಆಗಲಿ. ಇನ್ನು ಈ ಅಮೆಂಡ್‌ಮೆಂಟ್ ಬಗ್ಗೆ ಹೇಳುತ್ತೇನೆ. ತಾವು ಈ ಫ್ಯಾಮಿನ್ ಎಫೆಕ್ಟ್ ಏರಿಯಾದ ಭಾಗದಲ್ಲಿ ಆ ಟೈಂನಲ್ಲಿ ರೈತರ ಸಹಾಯಕ್ಕೆ ಬರಬೇಕು. ಶ್ರೀಮಾನ್ ಎ. ಲಕ್ಷ್ಮೀಸಾಗರ್‌ರವರಿಗೆ ಫ್ಯಾಮಿನ್ ಎನ್ನುವುದಕ್ಕೆ ಡೆಫೆನೇಷನ್ ಏನು ಎನ್ನುವುದು ಗೊತ್ತಿರಬೇಕು. ಯಾವ ಯಾವ ಭಾಗದಲ್ಲಿ ಫ್ಯಾಮಿನ್ ಎಫೆಕ್ಟ್ ಆಗಿದೆ ಎಂದು ತಾವು ಡಿಕ್ಲೇರ್ ಮಾಡಿದಿರಿ ಆಗ ಡ್ರಾಟ್ ರಿಲೀಫ್ ಫಂಡ್‌ನಲ್ಲಿ ಇದ್ದ ದುಡ್ಡನ್ನು, ಉಪಯೋಗ ಮಾಡುವುದಕ್ಕಾಗ ಲಿಲ್ಲ. ಆಗ ಅದನ್ನು ಉಪಯೋಗ ಮಾಡಿದ್ದರೆ ಡ್ರಾಟ್ ಎಫೆಕ್ಟೆಡ್ ಏರಿಯಾದ ಜನಗಳಿಗೆ ಸಹಾಯ ವಾಗುತಿತ್ತು. ಕರ್ನಾಟಕದಲ್ಲಿ ಇಂತಹ ಒಂದು ಪರಿಸ್ಥಿತಿ ಬಂದಾಗ ಯಾವ ಯಾವುದರಿಂದ ಏನೇನು ಉಪಯೋಗ ಪಡೆದುಕೊಳ್ಳ ಬೇಕು ಆರೀತಿ ಪಡೆದುಕೊಳ್ಳಬೇಕು. ಈವಾಗ ನೀವು ಈ ಎ.ಪಿ.ಎಂ.ಸಿ. ಫಂಡ್‌ನ ಉಪಯೋಗ ಮಾಡಿಕೊಳ್ಳಬೇಕು ಎನ್ನುವ ಒಂದು ಅಮೆಂಡ್‌ಮೆಂಟನ್ನು ತಂದಿದ್ದೀರಿ. ಅದರ ಬಗ್ಗೆ ಸ್ವಾಗತ ಮಾಡುತ್ತೇನೆ. ಶ್ರೀಮಾನ್ ಕೆ. ಹೆಚ್. ಪಾಟೀಲರೂ ಕೂಡ ರೈತರ ಹಿತದೃಷ್ಟಿಯಿಂದ ಅದನ್ನು ವೆಲ್‌ಕಂ ಮಾಡಿದರು. ರೈತರ ಹಿತದೃಷ್ಟಿಯಿಂದ ಅದನ್ನು ವೆಲ್‌ಕಂ ಮಾಡಬೇಕಾಗುತ್ತದೆ. ಇದರಿಂದ ರೈತರಿಗೆ ಫೆಸಿಲಿಟೀಸ್ ಏನು ಬರುತ್ತದೆ ಅದನ್ನು ರೈತರು ಉಪಯೋಗಿಸಿಕೊಳ್ಳಬೇಕೇ ವಿನಹ ಇದರ ಲಾಭವನ್ನು ದಳ್ಳಾಳಿಗಳಿಗೆ ಕೊಡಬಾರದು. ಇದರಬಗ್ಗೆ ಒಂದು ಆರ್ಡಿನೆನ್ಸ್ ಸಹ ತಂದಿದ್ದರೂ ಕೂಡ ಈಗಲೂ ದಳ್ಳಾಳಿಗಳು ರೈತರ ಹೆಸರಿನಲ್ಲಿಯೇ ಕೆಲಸ ಮಾಡಿಕೊಂಡು ಲಾಭವನ್ನು ಮಾಡಿಕೊಳ್ಳುತ್ತಿದ್ದಾರೆ. ರೈತನಿಂದ ಈ ಬಗ್ಗೆ ಏನು ಹಣ ವಸೂಲ್ಮಾಡಬೇಕೋ ಅಷ್ಟೇ ಹಣವನ್ನು ದಳ್ಳಾಳಿಗಳು ವಸೂಲ್ಮಾಡಿಕೊಂಡು ಹೆಚ್ಚು ಸಂಪಾದನೆ ಮಾಡಿಕೊಳ್ಳುತ್ತಿದ್ದಾರೆ. ಈದಳ್ಳಾಳಿಗಳನ್ನು ಯಾರೂ ಕಂಟ್ರೋಲ್ ಮಾಡುವುದಕ್ಕಾಗುವುದಿಲ್ಲ. ಇವರನ್ನು ಕಂಟ್ರೋಲ್ ಮಾಡಿದರೆ ಆಗರೈತರಿಗೆ ಇದರಿಂದ ತಕ್ಕ ಫೆಸಿಲಿಟೀಸ್ ಸಿಕ್ಕಿದ ಹಾಗಾಗುತ್ತದೆ. ಈಗ ಇವರ ಬಗ್ಗೆ ಏನು ಆರ್ಡಿನೆನ್ಸ್ ತಂದಿದ್ದೀರೋ ಅದರ ಪ್ರಕಾರ ರೈತರಿಂದ ಕಮಿಷನ್ ಅಷ್ಟು ವಸೂಲ್ಮಾಡುವುದಿಲ್ಲ. ಎರಡೂ ಕಡೆ ಯಿಂದಲೂ ವಸೂಲ್ಮಾಡುತ್ತಾರೆ. ರೈತನಿಂದ ಎರಡು ಪರ್ಸೆಂಟ್ ಮತ್ತು ಮಾರುವವರಿಂದ ಎರಡು ಪರ್ಸೆಂಟ್ ೪ ಪರ್ಸೆಂಟ್ ವಸೂಲ್ಮಾಡುತ್ತಾರೆ. ಇದನ್ನು ಕಡಿಮೆ ಮಾಡುವುದಕ್ಕೆ ತಾವು ಯೋಚನೆ ಮಾಡಬೇಕು. ಯಾರಿಂದಲಾದರೂ ಒಬ್ಬರಿಂದ ಇದನ್ನು ವಸೂಲ್ಮಾಡಬೇಕು. ಯಾರೋ ಹೇಳಿದರು ಅವರು ಕುಳಿತಿದ್ದ ಜಾಗದಲ್ಲೇ ಒಂದು ಲಕ್ಷ ಎರಡು ಲಕ್ಷ ಮೂರು ಲಕ್ಷ ಸಂಪಾದನೆ ಮಾಡು ತ್ತಾರೆಂದು. ಟರ್ನ್ ಓವರ್‌ನ್ನು ಅವರು ತೋರಿಸಿರುವುದನ್ನು ನೋಡಿದರೆ ಮಧ್ಯದವರೇ ಮಿಡಲ್ ಮ್ಯಾನ್‌ನವರೇ ಹೆಚ್ಚು ಸಂಪಾದನೆ ಮಾಡಿಕೊಳ್ಳುತ್ತಾರೆ. ಆದುದರಿಂದ ನಾನು ಹೇಳುವುದೇನೆಂದರೆ ಈಗ ತಾವು ೨-೨ ಪರ್ಸೆಂಟ್ ತೆಗೆದುಕೊಳ್ಳುವುದನ್ನು ಎರಡೂ ಕಡೆಯಿಂದ ಏನು ಇಟ್ಟಿದ್ದೀರಿ ಅದನ್ನು ಒಂದೊಂದು ಪರ್ಸೆಂಟ್ ಮಾಡಬೇಕು ಎಂದು. ಎರಡು ಪರ್ಸೆಂಟ್ ಇಟ್ಟಿರುವುದನ್ನು ಒಪ್ಪಿ ಕೊಳ್ಳುವುದು ಸರಿಯಲ್ಲ.

ಉಪಾಧ್ಯಕ್ಷರು.—ಎರಡು ಪರ್ಸೆಂಟ್‌ನಂತೆ ತೆಗೆದುಕೊಳ್ಳುವುದು ಒಂದೇ ಕಡೆ ಮಾತ್ರ. ರೈತರಿಂದ ತೆಗೆದುಕೊಳ್ಳಬಾರದು ಎಂದು ಇದೆ.

ಶ್ರೀ ಆರ್. ವೆಂಕಟರಾಮಯ್ಯ.—ರೈತನಿಂದ ತೆಗೆದುಕೊಳ್ಳಬಾರದು ಎಂದು ಇದ್ದರೆ ಯಾವ ಕಾರಣದಿಂದ ತೆಗೆದುಕೊಳ್ಳಬಾರದು ? ಅವರ ಬಗ್ಗೆ ಇಟ್ಟಿರತಕ್ಕಂಥ ಪರ್ಸೆಂಟೇಜ್‌ನ್ನು ಕಡಿಮೆ ಮಾಡಬೇಕು ಎಂದು ನಾನು ಹೇಳಿ ನಾನು ಇದನ್ನು ಸ್ವಾಗತ ಬಯಸುತ್ತೇನೆ.

ಕೊನೆಯದಾಗಿ ಎಂಪ್ಲಾಯೀಸ್ ಸ್ಟ್ರೈಕ್ ಮಾಡಬಾರದು ಎಂದು ಮಾಡಿದ್ದೀರಿ. ಇದಕ್ಕೆ ಕಡಿವಾಣ ಹಾಕಿದ್ದೀರಿ. ಒಂದು ವೇಳೆ ಸ್ಟ್ರೈಕ್ ಮಾಡಬೇಕಾದರೆ ಒಂದು ತಿಂಗಳು ಮುಂಚಿತವಾಗಿ ನೋಟೀಸ್ ಕೊಡಬೇಕು ಎಂದು ಮಾಡಿರುವುದು ಸರಿಯಲ್ಲ. ಅವರು ಸ್ಟ್ರೈಕ್ ಮಾಡುವುದಕ್ಕೆ ಒಂದು ಫಂಡಮೆಂಟಲ್ ರೈಟ್ಸ್ ಏನು ಇದೆ ಅದನ್ನು ಕಸಿದುಕೊಳ್ಳುತ್ತಿದ್ದೀರಿ. ಅದು ಏತಕ್ಕೋ ಏನೋ ಎನ್ನುವುದು ಗೊತ್ತಿಲ್ಲ. ಇದರ ಬಗ್ಗೆ ತಾವು ಸರಿಯಾಗಿ ಯೋಚನೆ ಮಾಡಿ. ಇದರಲ್ಲಿ ತಾವು ಈರೀತಿ ಕೊಟ್ಟಿದ್ದೀರಿ No marketing functionary should participate in a strike without giving any notice ಎಂದು ಯಾರನ್ನೋ ಡಿಸ್ಮಿಸ್ ಮಾಡಿದಾಗ ಇಲ್ಲೀಗಲ್ ಸ್ಟ್ರೈಕಾದರೆ ಸರ್ಕಾರ ಆಕ್ಷನ್ ತೆಗೆದುಕೊಳ್ಳಲಿ. ಅದನ್ನು ಬಿಟ್ಟು ಸ್ಟ್ರೈಕ್‌ಮಾಡಬಾರದು ಎನ್ನುವುದು ತುಂಬ ಅನ್ಯಾಯ. ೭ ಡೇಸ್ ನೋಟೀಸ್ ಕೊಡಬೇಕು ಎಂದು ಹೇಳಿದ್ದೀರಿ.

ಶ್ರೀ ಆರ್. ಎಲ್. ಜಾಲಪ್ಪ.—ಬರೀ ಎಂಪ್ಲಾಯಿಸ್ ಮಾತ್ರವಲ್ಲ, ಮಾರ್ಕೆಟ್ ಫಂಕ್ಷನರೀಸ್, ದಲ್ಲಾಳಿಗಳು, ಟ್ರೇಡರ್ಸ್, ವೇಮನ್ ಎಲ್ಲರಿಗೂ ಇದು ಸೇರಿದ್ದುದು.

ಶ್ರೀ ಆರ್. ವೆಂಕಟರಾಮಯ್ಯ.—ರೈತರಿಗೆ ಅನುಕೂಲ ಆಗಬೇಕು. ಇದನ್ನು ನಾನು ವೆಲ್‌ಕಂ ಮಾಡುತ್ತಾ ಒಂದು ಮಾತನ್ನು ಹೇಳುತ್ತೇನೆ. ಇದು ನಿಜವಾಗಿ ಉಪಯುಕ್ತವಾದ ಸಂಸ್ಥೆಯಾಗ ಬೇಕು. ಈ ಬಗ್ಗೆ ಬಹಳ ಕಾಲದಿಂದ ಹೋರಾಟ ಮಾಡಿಕೊಂಡು ಬಂದಿದ್ದೇನೆ. ರೈತರಿಗೆ ಬೆಳೆಗೆ ನ್ಯಾಯವಾದ ಬೆಲೆ ಸಿಗಬೇಕು ಎಂದು ಹೇಳುತ್ತಿದ್ದರೂ ಸ್ವಾತಂತ್ರ್ಯಬಂದು ೨೫–೩೦ ವರ್ಷಗಳಾದರೂ ಇನ್ನೂ ಆಗಿಲ್ಲ. ಎ. ಪಿ. ಎಂ. ಸಿ. ಗಳಿಂದ ರೈತನಿಗೆ ಉಪಯೋಗವಾಗಬೇಕು. ಇದರಲ್ಲಿರುವ ಫಂಡ್ಸ್ ರೈತರ ಡೆವಲಪ್‌ಮೆಂಟ್‌ಗೆ ಉಪಯೋಗವಾಗಬೇಕು ಎಂದು ಹೇಳಿ, ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೇನೆ.

†ಶ್ರೀ ಎಂ.ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಅಧ್ಯಕ್ಷರೆ ಮಾನ್ಯ ಜಾಲಪ್ಪನವರು ತಂದಿರುವಂಥ ಈ ಶಾಸನ ನಿಜವಾಗಲೂ ಸ್ವಾಗತಾರ್ಹವಾದುದು. ಈ ಎ.ಪಿ.ಎಂ.ಸಿ. ಬಗ್ಗೆ ಮಾನ್ಯ ಕೆ.ಹೆಚ್. ಪಾಟೀಲರಷ್ಟು ಅನುಭವ ನನಗೆ ಇಲ್ಲ. ನಮ್ಮ ರಾಜಾಜಿನಗರ ಕ್ಷೇತ್ರದಲ್ಲಿ ಭಾರಿ ದೊಡ್ಡ ಎಪಿಎಂಸಿ ಇದೆ, ಕಮಿಟಿಯೂ ಇದೆ, ಯಾರ್ಡೂ ಇದೆ. ಈಗ ಮುಖ್ಯವಾಗಿರುವುದೇನೆಂದರೆ, ಅವರು ಸ್ಟ್ರೈಕ್ ಮಾಡಿದಾಗ ಮಾನ್ಯ ಜಾಲಪ್ಪನವರು ಏನಾದರೂ ಬಗ್ಗಿ ಬಿಡುತ್ತಾರೇನೋ ಎನ್ನುವ ಅನುಮಾನವಿತ್ತು. ನಾನು ಪ್ರತಿ ದಿವಸ ಪತ್ರಿಕೆಗಳಲ್ಲಿ ಸ್ಟೇಟ್‌ಮೆಂಟ್‌ಗಳನ್ನು ಓದುತ್ತಿದ್ದೆ. ೨ ಪರ್ಸೆಂಟ್ ಕಮಿಷನ್ ಯಾರು ಕೊಡಬೇಕು ಎಂದರೆ ಯಾರು ಕೊಂಡು ಕೊಳ್ಳುತ್ತಾರೋ ಅವರು ಕೊಡಬೇಕು ಎಂದು......

ಶ್ರೀ ಎ. ಲಕ್ಷ್ಮೀಸಾಗರ್.—ಕುಳ್ಳಗಿರುವವರನ್ನು ಬಗ್ಗಿಸುವುದು ಕಷ್ಟ.

ಶ್ರೀ ಎಂ.ಎಸ್. ಕೃಷ್ಣನ್.—ನಮ್ಮಲ್ಲಿ ಒಂದು ಗಾದೆ ಇದೆ. ಕಳ್ಳನನ್ನು ನಂಬಿದರೂ ಕುಳ್ಳರನ್ನು ನಂಬಬಾರದು ಎಂದು. ಆದರೆ ನಾನು ಆ ರೀತಿ ಹೇಳುವುದಕ್ಕೆ ಹೋಗುವುದಿಲ್ಲ. ಪ್ರಶ್ನೆ ಏನೆಂದರೆ, ಜಾಲಪ್ಪನವರು ಗಟ್ಟಿಗಿರುವ ಜನ.

ಉಪಾಧ್ಯಕ್ಷರು.—ಕೃಷ್ಣಪ್ಪನವರು ಏನೋ ಹೇಳುತ್ತಾರೆ.

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಉದ್ದಗಿರುವವರಿಗೆ ಬುದ್ಧಿ ಕಡಿಮೆ ಎಂದು ಹೇಳುತ್ತಾರೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಕೃಷ್ಣಪ್ಪನವರ ಹಾಗೆ ದಪ್ಪಗಿರುವವರಿಗೆ ಏನು ?

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಕೃಷ್ಣಪ್ಪನವರ ಬಗ್ಗೆ ಮಾತನಾಡುವ ಹಾಗಿಲ್ಲ. ಮೊದಲನೆಯದು ಸ್ವಾಗತಾರ್ಹವಾಗಿರುವುದೇನೆಂದರೆ, ಇವೊತ್ತಿನ ದಿವಸ ಬೈಯರ್ ಏನಿದ್ದಾನೆ ಅವನಿಂದ ೨ ಪರ್ಸೆಂಟ್ ವಸೂಲು ಮಾಡಬೇಕು ಎಂದು ಇದೆ. ಇದರಿಂದ ನಮ್ಮ ರಾಜ್ಯದ ರೈತರಿಗೆ

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಅನುಕೂಲವಾಗುತ್ತದೆ. ಮಾನ್ಯ ಸಚಿವರು ಹೇಳಿದಹಾಗೆ ಮೊದಲು ದಲ್ಲಾಳಿಗಳು ರೈತರಿಂದ ವಸೂಲು ಮಾಡುತ್ತಿದ್ದರು. ರೈತನಿಗೆ ಬೆಲೆ ಗೊತ್ತಿರುವುದಿಲ್ಲ, ೨ ಪರ್ಸೆಂಟ್ ಇರಬಹುದು, ೧೦ ಪರ್ಸೆಂಟ್ ಇರಬಹುದು, ಅವನಿಗೆ ಗೊತ್ತಾಗುತ್ತಾ ಇರಲಿಲ್ಲ. ರೈತರು ತೀರ ಶೋಷಣೆಗೆ ಒಳ ಪಡುತ್ತಿದ್ದರು. ಇದರಿಂದ ಆ ಶೋಷಣೆ ಪೂರ್ತಿ ತೊಲಗಿ ಹೋಗುತ್ತದೆ. ನಮ್ಮ ದೇಶದಲ್ಲಿ ರೈತರಿಗೆ ಎಷ್ಟು ಅನುಕೂಲವಾಗಬೇಕೋ ಅಷ್ಟು ಅನುಕೂಲವಾಗಿಲ್ಲ. ಇರುವ ಚೌಕಟ್ಟಿನಲ್ಲಿ ಸ್ವಲ್ಪ ಹೆಜ್ಜೆ ಮುಂದೆ ಇಟ್ಟು, ಆ ದಿಕ್ಕಿನಲ್ಲಿ ಯೋಚನೆ ಮಾಡಿ ಇದನ್ನು ತೆಗೆದುಕೊಂಡು ಬಂದಿದ್ದೀರಿ. ಆಮೇಲೆ ಸ್ಟ್ರೈಕ್ ಬಗ್ಗೆ ಹೇಳಿರುವುದನ್ನು ನೋಡಿದೆ. ಇದೇ ರೀತಿ ಚಿಲಿಯಲ್ಲಿ ಸ್ಟ್ರೈಕ್ ಆಯಿತು. ಆಗ ಸಲ್ವಡೋರ್ ಅಲೆಂಡೋರ್ ಸರ್ಕಾರ (ಸೋಷಲಿಸ್ಟ್) ನಡೆಯುತ್ತಿತ್ತು. ಅವರು ರೈತರಿಗೆ ಅನುಕೂಲ ಮಾಡಿಕೊಡಬೇಕು ಎಂದು ಕಾನೂನು ತಂದರು. ಚಿಲಿಯಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ಮಿಲಿಟರಿ ಸರ್ವಾಧಿಕಾರಿಗಳು ಎಲ್ಲರೂ ಸೇರಿ ಭಾರಿ ದೊಡ್ಡ ಮುಷ್ಕರ ನಡೆಸಿಬಿಟ್ಟು ಕೊನೆಗೆ ಆ ಸರ್ಕಾರವನ್ನು ಕೆಳಗೆ ಇಳಿಸಿಬಿಟ್ಟು ಅವನನ್ನು ಕೊಂದು ಹಾಕಿದರು, ಪ್ಯಾಲೆಸ್‌ಗೆ ಬಾಂಬ್ ಹಾಕಿದರು. ಆ ಮಟ್ಟಕ್ಕೆ ಹೋಗುತ್ತದೋ ಎನ್ನುವುದು ಬೇರೆ ಸಮಾಚಾರ.

ಶ್ರೀ ಸಾಲೇರ್ ಎಸ್. ಸಿದ್ದಪ್ಪ.—ನಮ್ಮ ದೇಶದಲ್ಲಿ ಆ ರೀತಿ ಆಗುವುದಿಲ್ಲ.

ಶ್ರೀ ಎಂ.ಎಸ್. ಕೃಷ್ಣನ್.—ಪ್ರತಿಗಾಮಿಗಳು ಎಲ್ಲರೂ ಸೇರಿ ಪ್ರಗತಿಗಾಮಿಗಳನ್ನು ಹತ್ತಿಕ್ಕು ವುದಕ್ಕೆ ಪ್ರಯತ್ನ ನಡೆಸುತ್ತಾರೆ. ಆ ರೀತಿ ಶಸ್ತ್ರಾಸ್ತ್ರಗಳು ಇಲ್ಲಿ ಬಂದಿಲ್ಲ. ಆದರೆ ಹೆಚ್ಚು ಹೆಚ್ಚು ಪುರೋಗಾಮಿ ಶಾಸನಗಳು ಬಂದರೆ ಪಟ್ಟಭದ್ರ ಹಿತಾಸಕ್ತಿಗಳು ಸುಮ್ಮನೆ ಕುಳಿತುಕೊಳ್ಳುತ್ತವೆ ಎಂದು ತಿಳಿದುಕೊಳ್ಳಬೇಡಿ. ಪಟ್ಟಭದ್ರ ಹಿತಾಸಕ್ತಿಗಳು ಪ್ರೆಷರ್ ತರುತ್ತಾರೆ, ಅದು ಆಗದೇಹೋದರೆ ಹೊಡೆಯುವುದಕ್ಕೆ ಪ್ರಯತ್ನ ಮಾಡುತ್ತಾರೆ. ತಾವು ಈ ರೀತಿ ಶಾಸನವನ್ನು ತಂದಿದಕ್ಕೆ ವಂದಿಸು ತ್ತೇನೆ. ಈ ಸ್ಟ್ರೈಕಿನ ವಿಷಯ ಬಹಳ ಮುಖ್ಯವಾದ ವಿಷಯ. ಇದರಲ್ಲಿ ಸ್ಟ್ರೈಕ್‌ಗೆ ಅಥವಾ ಡೆಮಾನ್‌ಸ್ಟ್ರೇಷನ್‌ಗೆ ೩೦ ದಿವಸಗಳ ನೋಟೀಸ್ ಕೊಡಬೇಕು ಎಂದು ಇದೆ. "No market functionery shall without giving a notice of not less than thirty days to the market committee, participate in any demonstration on strike." ಎಂದು ಇದೆ. ಇದರಲ್ಲಿ ಮಾರ್ಕೆಟ್ ಫಂಕ್ಷನರಿ ಅಂದರೆ ಯಾರು ಎಂದು ತಿಳಿದು ಕೊಳ್ಳಬೇಕು.

ಶ್ರೀ ಕೆ.ಹೆಚ್. ಪಾಟೀಲ್.—ದಲ್ಲಾಳಿಗಳು, ಖರೀದಿದಾರರು ಬರುತ್ತಾರೆ, ಲೈಸನ್ಸ್‌ಡ್ ವೇಯ್‌ಮನ್ ಬರುತ್ತಾನೆ,

ಶ್ರೀ ಎಂ.ಎಸ್. ಕೃಷ್ಣನ್.—ಇವರಲ್ಲಿ ಇರುವವರಲ್ಲದೆ ಇನ್ನೊಬ್ಬರು ಬರುತ್ತಾರೆ, ಹಮಾಲರು ಬರುತ್ತಾರೆ, ಲೈಸೆನ್ಸ್ ಹೋಲ್ಡರ್ಸ್ ಇದ್ದರೂ ಕೂಡ ಹಮಾಲಿ ಕೆಲಸ ಮಾಡುತ್ತಾರೆ. ಪ್ರತಿದಿನ ಬೆಳಿಗ್ಗೆಯಿಂದ ರಾತ್ರಿವರೆಗೆ ಇವರು ಕೆಲಸ ಮಾಡುತ್ತಾರೆ. ಅಂತಹವರಿಗೆ ತಮಗೆ ಅನುಕಂಪ ಇರಬೇಕೇ ವಿನಹ ಅವರ ಹಕ್ಕುಗಳನ್ನು ಕಸಿದುಕೊಳ್ಳುವಂಥ ಕೆಲಸ ಮಾಡಬಾರದು ಎಂದು ಹೇಳು ತ್ತೇನೆ. ಈ ರೀತಿ ಕೆಲಸ ಮಾಡುವವರು ನಮ್ಮ ರಾಜ್ಯದಲ್ಲಿ ಮಾತ್ರವಲ್ಲ ತಮಿಳುನಾಡಿನಲ್ಲಿದ್ದಾರೆ, ಕೇರಳದಲ್ಲಿದ್ದಾರೆ. ಕೇರಳ ಮತ್ತು ತಮಿಳುನಾಡಿನಲ್ಲಿ ಅವರ ಸಂಘಟನೆ ಬಹಳ ಬಲವಾಗಿದೆ, ಹೆಚ್ಚು ಕೂಲಿ ಕೊಡಬೇಕು ಎಂದು ಹೇಳುತ್ತಾರೆ. ವ್ಯಾಪಾರಸ್ಥರಿಗೂ ಅವರಿಗೂ ಸಂಬಂಧವಿದೆ. ಇವರು ಹೆಚ್ಚು ಅನುಕೂಲ ಪಡೆಯುವುದಕ್ಕೆ ಪ್ರಯತ್ನ ಪಡುತ್ತಾರೆ, ಇಂತಹವರ ಹಕ್ಕುಗಳನ್ನು ಮೊಟಕು ಗೊಳಿಸುವುದು ಸರಿಯಾದುದಲ್ಲ. ಕೆಳವರ್ಗದವರಿಗೆ ಎಕ್ಸೆಪ್ಷನ್ ಕೊಟ್ಟು ತೀರ್ಮಾನ ಮಾಡಿರು ವುದು ಸರಿ, ೩೦ ದಿವಸಗಳ ನೋಟೀಸ್ ಕೊಡಬೇಕು ಎಂದು ಬಿಲ್‌ನಲ್ಲಿದೆ, ೭ ದಿವಸಗಳ ನೋಟೀಸ್ ಕೊಡಬೇಕು ಎಂದು ಹೇಳಿದ್ದೀರಿ. ಆದರೆ ಡೆಮಾನ್‌ಸ್ಟ್ರೇಷನ್ ಎನ್ನುವುದನ್ನು ತೆಗೆದುಹಾಕಬೇಕು. ಏಕೆಂದರೆ ೧೦ ಜನ ನಿಂತುಕೊಂಡರೆ ಡೆಮಾನ್‌ಸ್ಟ್ರೇಷನ್ ಆಗುತ್ತದೆ. ತಕ್ಷಣ ಪೋಲೀಸರು ಬಂದು ಹೊಡೆದರೆ ಲಾ ಅಂಡ್ ಆರ್ಡರ್ ಸಿಚುಯೇಷನ್ ಕ್ರಿಯೇಟಾಗುತ್ತದೆ. ಇದನ್ನು ಯಾರು ಸೇರಿಸಿ ದ್ದಾರೋ ಏನೋ. ಡ್ರಾಫ್ಟ್ ಮಾಡುವಂಥ ಜನರಿಗೆ ಸ್ಟ್ರೈಕ್, ಡೆಮಾನ್‌ಸ್ಟ್ರೇಷನ್ ಅಂದರೆ ಭೀತಿ ಹೆದರಿಕೆ ಇದೆ. ಆದ್ದರಿಂದ ಅವರು ಡೆಮಾನ್‌ಸ್ಟ್ರೇಷನ್ ಎಂದು ಸೇರಿಸಿದ್ದಾರೆ. ಇದನ್ನು ಸೇರಿಸು ವುದು ಸೂಕ್ತವಾದುದಲ್ಲ, ಇದರ ಬಗ್ಗೆ ಪುನರ್ವಿಮರ್ಶೆ ಮಾಡಬೇಕು ಎಂದು ಕೇಳಿಕೊಂಡು, ಈ ವಿಧೇಯಕವನ್ನು ತಂದಿರುವುದಕ್ಕಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸಿ, ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಿ.ಬಿ. ಹಿರೇರೆಡ್ಡಿ (ರಾಮದುರ್ಗ).—ಸನ್ಮಾನ್ಯ ಉಪಾಧ್ಯಕ್ಷರೆ, ಇವತ್ತಿನ ದಿವಸ ಈ ಸದನದಲ್ಲಿ ಮಾನ್ಯ ಜಾಲಪ್ಪನವರು ರೆಗ್ಯುಲೇಟೆಡ್ ಮಾರ್ಕೆಟಿಂಗ್ ಬಿಲ್ಲನ್ನು ತಂದದ್ದು ಅತ್ಯಂತ ಸೂಚ್ಯವಾಗಿದೆ. ಮತ್ತು ಅವರು ರೈತರಿಗೆ ಆಗತಕ್ಕ ಶೋಷಣೆಯನ್ನು ತಪ್ಪಿಸುವ ಸಲುವಾಗಿ, ರೈತರ ಹಿತವನ್ನು ಕಾಪಾಡುವ ಸಲುವಾಗಿ ಈ ಬಿಲ್ಲನ್ನು ಸದನದಲ್ಲಿ ಮಂಡಿಸಿದ್ದು ಯೋಗ್ಯವಿದೆ. ಇದನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ ಎರಡು ಮಾತನ್ನು ಹೇಳುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಜನತಾ ಸರ್ಕಾರ ಬಂದಮೇಲೆ ರೈತರಿಗೆ ಅನುಕೂಲ ಮಾಡಿದೆ. ರೈತರ ಸಾಲ ಅಸಲಿಗಿಂತ ಮೂರು, ನಾಲ್ಕು ಪಟ್ಟು ಬೆಳೆದಾಗ ಮಾನ್ಯ ಜಾಲಪ್ಪನವರು ಕಾನೂನು ತಂದು ಬಡ್ಡಿ ಸೋಡಿಬಿಟ್ಟು ಅಸಲನ್ನು ತೆಗೆದುಕೊಳ್ಳುವ ರೀತಿ ಮಾಡಿದ್ದಾರೆ. ಇದು ಸ್ತುತ್ಯವಾದ ಕಾರ್ಯ. ಅದೇ ಪ್ರಕಾರ ಇವತ್ತಿನ ದಿವಸ ರೆಗ್ಯುಲೇಟೆಡ್ ಮಾರ್ಕೆಟ್‌ನಲ್ಲಿ ರೈತರ ಶೋಷಣೆ ನಡೆಯುತ್ತಿದ್ದು ಅದನ್ನು ತಪ್ಪಿಸುವ ಸಲುವಾಗಿ ಕಮಿಷನ್ ಏಜೆಂಟರು ರೈತರಿಂದ ಎರಡು ರೂಪಾಯಿಗಳನ್ನು ವಸೂಲಿ ಮಾಡುತ್ತಿದ್ದು ಅದನ್ನು ಖರೀದಿ ಮಾಡತಕ್ಕಂತಹ ವ್ಯಾಪಾರಸ್ಥರು ಕೊಡತಕ್ಕಂತಹ ಕಾನೂನನ್ನು ಮಾನ್ಯ ಜಾಲಪ್ಪನವರು ತಂದು ಈ ಮೂಲಕ ರೈತರಿಗೆ ಸಾಕಷ್ಟು ಅನುಕೂಲವನ್ನು ಮಾಡಿಕೊಟ್ಟಿದ್ದಾರೆ. ಈ ಬಿಲ್ಲು ಯಶಸ್ವಿಯಾಗಬೇಕಾದರೆ ಎಲ್ಲಾ ರೀತಿಯಿಂದಲೂ ರೈತರಿಗೆ ಅನುಕೂಲವಾಗಬೇಕು. ಲೈಸೆನ್ಸ್ ಇಲ್ಲದೆ ಹಮಾಲರು ಮಾರ್ಕೆಟ್ ಯಾರ್ಡ್‌ನಲ್ಲಿ ಒಳಗಡೆ ಬರಲು ಆಗುವುದಿಲ್ಲ. ವ್ಯಾಪಾರಸ್ಥರು ಸ್ಟ್ರೈಕ್ ಹೂಡಿದ್ದರಿಂದ ರೈತನು ಬಹಳ ಹಾನಿಗೆ ಒಳಗಾಗಿದ್ದಾನೆ. ವ್ಯಾಪಾರಿಗಳಾಗಲೀ, ಕಮಿಷನ್ ಏಜೆಂಟರಾಗಲೀ ಸ್ಟ್ರೈಕ್ ಹೂಡುವುದನ್ನು ತಪ್ಪಿಸಬೇಕು. ಇದರಿಂದಾಗಿ ಸಹಕಾರಿ ಸಂಘಗಳಲ್ಲಿ ರೈತರಿಗೆ ಆಗುತ್ತಿರುವ ಅನ್ಯಾಯವನ್ನು ತಪ್ಪಿಸಬಹುದೆಂದು ಮಾನ್ಯ ಉಪಾಧ್ಯಕ್ಷರ ಮೂಲಕ ಈ ಸದನದ ಮೂಲಕ ಮಾನ್ಯ ಜಾಲಪ್ಪನವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಸಹಕಾರಿ ಸಂಘಗಳನ್ನು ಸ್ಥಾಪಿಸಬೇಕು ರೈತರು ಬೆಳೆದಂತಹ ಮಾಲನ್ನು ಅವರಿಂದಲೇ ಖರೀದಿ ಮಾಡಿದರೆ ರೈತರಿಗೆ ಅನುಕೂಲವಾಗುತ್ತದೆ. ಏಳು ದಿವಸದ ಮೊದಲು ನೋಟೀಸ್ ಕೊಡುವ ವ್ಯವಸ್ಥೆ ಒಳ್ಳೆಯದು. ಇಲ್ಲದಿದ್ದರೆ ಅವರು ಸಡನ್ ಆಗಿ ಸ್ಟ್ರೈಕ್ ಹೂಡಿದರೆ ತೊಂದರೆಯಾಗುತ್ತದೆ. ಅವರು ಮಾಲನ್ನು ತರಬೇಕೋ, ತರಬಾರದೋ ಎಂಬುದನ್ನು ಮಾಲೀಕ ತಿಳಿಯುವುದಕ್ಕೆ ಸಮಯ ಸಿಗುತ್ತದೆ. ಏಳು ದಿವಸದ ನೋಟೀಸ್ ಕೊಡಬಾರದೆಂದು ಮಾನ್ಯ ಕೃಷ್ಣನ್‌ರವರು ಹೇಳಿದರು. ಸ್ಪಿನ್ನಿಂಗ್ ಮಿಲ್ಸ್‌ಗಳಲ್ಲಿ ವರ್ಷಕ್ಕೆ ಕೋಟ್ಯಾಂತರ ರೂಪಾಯಿಗಳ ನಷ್ಟವಾಗುತ್ತಿದೆ. ಎಷ್ಟೋ ಯೂನಿಟ್‌ಗಳಲ್ಲಿ ನೇರವಾಗಿ ವ್ಯಾಪಾರಸ್ಥರಿಂದ ಟೆಂಡರ್ ಪದ್ಧತಿ ಮೇಲೆ ತೆಗೆದುಕೊಳ್ಳುತ್ತಾರೆ. ಮಾರ್ಕೆಟ್ ಯಾರ್ಡ್‌ನಲ್ಲಿ ಗ್ರೌಂಡ್‌ನೆಟ್ ಆಗಲೀ, ಕಾಟನ್ ಆಗಲೀ ನೇರವಾಗಿ ರೈತರಿಂದ ಮಾಲನ್ನು ಕೊಂಡು ಕೊಂಡರೆ ಹೆಚ್ಚು ಬೆಲೆ ರೈತರಿಗೆ ಸಿಗುತ್ತದೆ. ಕೆ.ಹೆಚ್. ಪಾಟೀಲರ ಕಾಲದಲ್ಲಿ ಸಹಕಾರಿ ಸಂಘಗಳಲ್ಲಿ ಫಾಯಿದೆ ಇತ್ತು. ಈಗ ಎಷ್ಟೋ ಸ್ಪಿನ್ನಿಂಗ್ ಮಿಲ್‌ಗಳಲ್ಲಿ ವರ್ಷಕ್ಕೆ ಕೋಟ್ಯಾಂತರ ರೂಪಾಯಿಗಳ ಹಾನಿ ಸಂಭವಿಸುತ್ತಿದೆ. ರೈತರು ಬೆಳೆಯತಕ್ಕಂತಹ ಹತ್ತಿಯನ್ನು ನೇರವಾಗಿ ರೈತರಿಂದ ಖರೀದಿ ಮಾಡಿದರೆ ರೈತರಿಗೆ ಆಗುತ್ತಿರುವ ಶೋಷಣೆಯನ್ನು ತಪ್ಪಿಸಬಹುದು. ಟೆಂಡರ್ ಪದ್ಧತಿಯ ಮೇಲೆ ಯಾವುದೇ ಪ್ರೊಸೆಸಿಂಗ್ ಯೂನಿಟ್ ಅನ್ನು ತೆಗೆದುಕೊಳ್ಳಬಾರದು. ಗ್ರೌಂಡ್ ನೆಟ್ ಆಗಲೀ, ಕಾಟನ್ ಆಗಲೀ ನೇರವಾಗಿ ರೈತರ ಮುಖಾಂತರವಾಗಿ ಖರೀದಿ ಮಾಡಲಿಕ್ಕೆ ಸರಕಾರ ಆದೇಶ ಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ರೈತರಿಂದ ವಸೂಲು ಮಾಡತಕ್ಕಂತಹ ಕಮಿಷನ್ ಅನ್ನು ತಪ್ಪಿಸಿ ವ್ಯಾಪಾರಸ್ಥರು ಅದನ್ನು ಕೊಡಬೇಕೆನ್ನು ಕಾನೂನನ್ನು ತಂದು ರೈತರಿಗೆ ಒಳ್ಳೆಯ ಅಣಿವು ಮಾಡಿಕೊಟ್ಟಿದ್ದಕ್ಕಾಗಿ ಮಾನ್ಯ ಸಚಿವರಿಗೆ ವಂದಿಸಿ, ನನಗೆ ಮಾತನಾಡಲು ಅಸ್ಪದ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಟಕಲ್).—ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಜಾಲಪ್ಪನವರು ಮಂಡಿಸಿರಂತಹ ಕರ್ನಾಟಕ ಅಗ್ರಿಕಲ್ಚರ್ ಪ್ರೊಡ್ಯೂಸ್ ಮಾರ್ಕೆಟ್ ರೆಸಲ್ಯೂಷನ್ ಅಮೆಂಡ್‌ಮೆಂಟ್ ಬಿಲ್ ಏನಿದೆ, ಅದನ್ನು ಸ್ವಾಗತ ಮಾಡುತ್ತೇನೆ. ಕಾರಣ ಇಷ್ಟೇ ಕೋ-ಅಪರೇಟಿವ್ ಡಿಪಾರ್ಟ್‌ಮೆಂಟ್‌ನಲ್ಲಿ ಅನೇಕ ತಿದ್ದುಪಡಿಗಳನ್ನು ರೈತರಿಗೆ ಅನುಕೂಲ ಮಾಡಲು ತಂದರೂ ಅದರಲ್ಲಿ ಎಲ್ಲದಕ್ಕಿಂತ ಇದು ಮುಖ್ಯವಾಗಿದೆ ಎಂದು ನಾನು ಭಾವಿಸಿದ್ದೇನೆ. ಕಾರಣ ಇಷ್ಟೇ, ಇದು ಒಂದು ಕ್ರಾಂತಿಕಾರಿ ತಿದ್ದುಪಡಿಯೆಂದು ಹೇಳಬಹುದು ಮತ್ತು ಇದರ ಜೊತೆಯಲ್ಲಿ ಇನ್ನೂ ಕೆಲವು ತಿದ್ದುಪಡಿಗಳನ್ನು ಅವರು ಮಾಡಬಹುದಾಗಿತ್ತು. ಈಗಾಗಲೇ ಇಷ್ಟು ತಿದ್ದುಪಡಿಯನ್ನು ಏನು ತಂದಿದ್ದಾರೆ, ಅದಕ್ಕೆ ನಮ್ಮ ಪಕ್ಷದಲ್ಲಿ ವಿರೋಧವಿದೆ.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಶ್ರೀ ಕೆ.ಹೆಚ್. ಪಾಟೀಲ್.—ನಾವು ಇರಬೇಕೆಂದು ಏನೂ ಬಯಸುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದು ಒಂದೇ ಪಕ್ಷಕ್ಕೆ ಸೀಮಿತವಾಗಿರತಕ್ಕಂಥಾದ್ದಲ್ಲ. ನಾವು ಒಂದು ಪ್ರಗತಿಪರವಾದಂತಹ ಕಾನೂನನ್ನು ತರುವಾಗ ನಮ್ಮ ಕಡೆ ಕೂಡ ಕೆಲವರು ವಿರೋಧ ಮಾಡುತ್ತಾರೆ. ಆ ಕಡೆಯವರೂ ಮಾಡುತ್ತಾರೆ. ಉದಾಹರಣೆಗೆ ಹೇಳುವುದಾದರೆ, ಲ್ಯಾಂಡ್ ರಿಫಾರಂಸ್ ಆ್ಯಕ್ಟ್ ಅಮೆಂಡ್‌ಮೆಂಟ್ ಬಿಲ್ ಬಂದಾಗ ೧೯೭೨–೭೩ರಲ್ಲಿ ಅನೇಕ ಜನ ಅದಕ್ಕೆ ಕೆಲವರು ನಮ್ಮ ಪಕ್ಷದಲ್ಲೂ ವಿರೋಧ ಪಕ್ಷದಲ್ಲೂ ಕೂಡ ವಿರೋಧ ಮಾಡಿದರು. ಅಂತಹ ತಿದ್ದುಪಡಿ ತಂದಾಗ ಪಕ್ಷದಲ್ಲಿ ವಿರೋಧ ಮಾಡತಕ್ಕಂತಹ ಜನ ಇರುತ್ತಾರೆ. ಬೇರೆಯವರೂ ಕೂಡ ಮಾಡುತ್ತಾರೆ, ಆದರೂ ಕೂಡ ಏನೋ ತಾವು ಸ್ವಲ್ಪ ಮಣಿಯದೆ ನಿಮ್ಮ ಪಕ್ಷದ ಸದಸ್ಯರ ಮನ ಒಲಿಸಿ ತಂದಿದ್ದೀರಿ. ಎಷ್ಟರ ಮಟ್ಟಿಗೆ ಮನ ಒಲಿಸಿದ್ದೀರೋ ಗೊತ್ತಿಲ್ಲ. ''ಬೂದಿಯಲ್ಲಿ ಕೆಂಡ ಇದ್ದ ಹಾಗೆ'' ಅದು ಇದೆ. ಆದರೂ ಕೂಡ ಈ ತಿದ್ದುಪಡಿಯನ್ನು ಏನು ತಂದಿದ್ದೀರಿ ಅದನ್ನು ನಾವು ಸ್ವಾಗತ ಮಾಡುತ್ತೇವೆ. ಮಾರ್ಕೆಟ್ ಯಾರ್ಡ್‌ನಿಂದ ಹೊರಗಡೆ ಯಾವ ಧವಸಧಾನ್ಯಗಳನ್ನು ಮಾರಬಾರದೆಂದು ತಾವು ಸ್ಪಷ್ಟವಾಗಿ ಇದರಲ್ಲಿ ಹೇಳಿದ್ದೀರಿ, ಆದರ ಜೊತೆಯಲ್ಲಿ ವ್ಯವಸ್ಥೆಯನ್ನು ಕೂಡ ಮಾಡಬೇಕಾಗುತ್ತದೆ. ಉದಾಹರಣೆಗೆ ಹೇಳುವುದಾದರೆ ನಮ್ಮ ಯಾದಗಿರಿ ತಾಲ್ಲೂಕಿನಲ್ಲಿ ಮಾರ್ಕೆಟ್ ಯಾರ್ಡ್ ಇದೆ, ಗುರುಮಿಟಕಲ್‌ನಲ್ಲಿ ಸಬ್ ಮಾರ್ಕೆಟ್ ಯಾರ್ಡ್ ಅನ್ನು ತಾವು ಕಟ್ಟಿಸುತ್ತಿದ್ದೀರಿ, ಸುಮಾರು ನಾಲ್ಕು ವರ್ಷದಿಂದ ಆ ಕೆಲಸ ಹಾಗೆಯೇ ನಡೆಯುತ್ತಿದೆ. ಒಂದು ಕಡೆ ರೆಗ್ಯುಲೇಷನ್ಸ್ ತರುತ್ತೇವೆ, ಇನ್ನೊಂದು ಕಡೆ ಅದಕ್ಕೆ ಬಲವಾದಂತಹ ಸಾಧನಗಳನ್ನು ತಯಾರು ಮಾಡದೆ, ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಹೋದರೆ ಆಗ ಜನ ರೊಚ್ಚಿಗೇಳುತ್ತಾರೆ. ಅಂತಹ ಕಡೆ ಏನು ವ್ಯವಸ್ಥೆ ಮಾಡುತ್ತೀರಿ, ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ ಎನ್ನತಕ್ಕಂಥದ್ದರ ಬಗ್ಗೆ ಹತ್ತಾರು ಸಲ ಪ್ರಶ್ನೆಯನ್ನು ಕೇಳಿದ್ದೇನೆ. ಮಳಿಗೆಗಳನ್ನು ಕಟ್ಟಿಸುತ್ತೀರಿ, ಆದರೂ ತಾವು ಉಪಯೋಗ ಮಾಡದೆ

(ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಬೇರೆಯವರಿಗೆ ರೆಂಟ್‌ಗೆ ಕೊಟ್ಟು ಮಾಲೀಕರಾಗಿ ಕುಳಿತಿದ್ದಾರೆ. ಏನೋ ಚೀಪ್ ರೇಟಿನಲ್ಲಿ ೭ ಪರ್ಸೆಂಟ್ ೮ ಪರ್ಸೆಂಟ್ ಇಂಟ್ರೆಸ್ಟ್‌ನಲ್ಲಿ ಹಣ ಸಿಗುತ್ತದೆ, ಬಿಲ್ಡಿಂಗ್ ಕಟ್ಟಿಸಿಕೊಂಡು ಆಸ್ತಿ ಮಾಡಿಕೊಂಡು ಯಾರಿಗೋ ಸಬ್ ಲೀಸ್ ಕೊಡುವುದು. ಇಂತಹ ಒಂದಲ್ಲಾ ಹತ್ತಾರು ಪ್ರಕರಣಗಳು ನಡೆದಿವೆ.

೧–೩೦ ಪಿ. ಎಂ.

ನಮ್ಮ ಗುಲ್ಬರ್ಗದಲ್ಲಿ ಕಾಟನ್ ಮಾರ್ಕೆಟ್ ಕನ್‌ಸ್ಟ್ರಕ್ಟ್ ಮಾಡುತ್ತೇವೆಂದು ಪ್ರಾರಂಭ ಮಾಡಿ ೧೦ ವರ್ಷಗಳಾದರೂ ಅದು ಅಲ್ಲೇ ಬಿದ್ದಿದೆ. ನಾಳೆ ಎಲ್ಲಾ ಸಾಮಾನುಗಳನ್ನು ರೆಗ್ಯುಲೇಟೆಡ್ ಮಾರ್ಕೆಟ್‌ನಲ್ಲೇ ಕಡ್ಡಾಯವಾಗಿ ಮಾರಬೇಕೆಂದು ಕಾನೂನು ತಂದ ಮೇಲೆ ರೈತರಿಗೆ ಸರಿಯಾದಂಥ ವ್ಯವಸ್ಥೆ ಇಲ್ಲದೇ ಹೋದರೆ ರೈತರು ಎಲ್ಲಿಗೆ ಹೋಗಿ ಮಾರಾಟ ಮಾಡಬೇಕು ? ಯಾವ ಕಡೆಯೂ ಸರಿಯಾಗಿ ಅನುಕೂಲ ಮಾಡದೆ ಸ್ಟ್ರಿಕ್ಟ್ ಆಗಿ ಇಂಪ್ಲಿಮೆಂಟ್ ಮಾಡಿದರೆ ದೊಡ್ಡ ಅನಾಹುತವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ಇನ್ನು ಎರಡನೆಯದಾಗಿ ಹೇಳಬೇಕೆಂದರೆ, ಅನೇಕ ಕಡೆಗಳಲ್ಲಿ ಮಾರ್ಕೆಟ್ ಕಮಿಟಿಗಳು ಇವೆ. ಆದರಲ್ಲಿ ರೆಕ್ರೂಟ್‌ಮೆಂಟ್ ಮಾಡುವಾಗ, ರಿಸರ್ವೇಷನ್ ಫಾಲೋ ಮಾಡುವುದಿಲ್ಲ. ಎಲೆಕ್ಷನ್‌ನಲ್ಲಿ ಎಲೆಕ್ಟ್ ಆದ ಮೇಲೆ ಅವರಿಗೆ ಯಾರು ಖುಷಿ ಬರುತ್ತದೆ ಅವರಿಗೆ ಅಪಾಯಿಂಟ್ ಮಾಡಿಕೊಂಡು, ಅನಂತರ ಕ್ಯಾಂಡಿಡೇಟ್ ಅವೇಲಬಿಲಿಟಿ ಇಲ್ಲ, ಎಂದು ಚೀಫ್ ಮಾರ್ಕೆಟಿಂಗ್ ಆಫೀಸರ್‌ಗೆ ಬರೆದು ನೇಮಕಾತಿ ಮಾಡಿಕೊಂಡುಬಿಡುತ್ತಾರೆ. ಏಕೆಂದರೆ, ಅಲ್ಲಿರತಕ್ಕವರೆಲ್ಲಾ ರಾಜಕೀಯ ವ್ಯಕ್ತಿಗಳೇ ಇರುವುದರಿಂದ, ತಮ್ಮ ಇನ್‌ಫ್ಲೂಯೆನ್ಸ್ ಉಪಯೋಗ ಮಾಡಿಕೊಂಡು ಮಾಡಿಕೊಳ್ಳುತ್ತಾರೆ. ಈಗ ನಮಗೆ ತೋರಿಸುವುದು ಒಂದು ಮಾಡಿಕೊಳ್ಳುವುದು ಒಂದು, ಇದರಿಂದ ಪ್ರಯೋಜನ ಏನಾಗುತ್ತದೆ ? ತಾವು ಒಂದು ಸೆಂಟ್ರಲ್ ಕಮಿಟಿ ಮಾಡಿ, ಸ್ಟೇಟ್ ಲೆವೆಲ್ ರೆಕ್ರೂಟ್‌ಮೆಂಟ್ ಕಮಿಟಿ ಮಾಡಿ. ಯಾವುದೇ ಎ.ಪಿ.ಎಂ.ಸಿ ಯವರು ಯಾವುದೇ ಹುದ್ದೆಗಳು ಬೇಕೆಂದು ಕೇಳಿದರೂ ತಾವೇ ನೇರವಾಗಿ ರೆಕ್ರೂಟ್‌ಮೆಂಟ್ ಮಾಡಿ ರೋಸ್ಟರ್ ಪ್ರಕಾರ ಲಿಸ್ಟ್ ಕಳುಹಿಸಿಕೊಡಿ. ಅರ್ಜೆಂಟ್ ಬೇಕಾದರೆ ಟೆಂಪರರಿ ಸಲುವಾಗಿ ಅಪಾಯಿಂಟ್ ಮಾಡಿಕೊಳ್ಳಲಿಕ್ಕೆ ಅವಕಾಶ ಮಾಡಿದ್ದೀರಿ. ಕಾಂಟ್ರಾಕ್ಟ್ ಬೇಸಿಸ್ ಮೇಲೆ ಇರತಕ್ಕವರಿಗೆ ಒಂದು ದಿವಸದ ಸಂಬಳ ಹಿಡಿದುಕೊಂಡು ಫುಲ್ ಪೇ ಕೊಡುತ್ತೀರಿ. ಇಲ್ಲ ಅಂದರೆ ಅವರ ಪೇ ನಲ್ಲಿ ೧೦ ರೂಪಾಯಿಗಳನ್ನು ಹಿಡಿದು ಕೊಂಡು ಕೊಡುತ್ತೀರಿ. ತಿಂಗಳಿಗೆ ೩೦೦ ರೂಪಾಯಿಗಳನ್ನು ಕೊಡುವಂಥಾದ್ದು ಮಾಡಿದ್ದೀರಿ ನೀವು ಅವನಿಗೆ ೩೦೦ ರೂಪಾಯಿಗಳನ್ನು ಕೊಟ್ಟರೆ ಅವನು ಸರಿಯಾಗಿ ಮನಸ್ಸು ಇಟ್ಟು ಕೆಲಸ

ಮಾಡುವುದಿಲ್ಲ. ಮಾರ್ಕೆಟ್ ಯಾರ್ಡ್‌ನಲ್ಲಿ ಕೆಲಸ ಸಮರ್ಪಕವಾಗಿ ಆಗುವುದಿಲ್ಲ. ಆದ್ದರಿಂದ, ಅದರ ಬಗ್ಗೆ ಪುನಃ ಯೋಚನೆ ಮಾಡಬೇಕೆಂದು ಹೇಳುತ್ತೇನೆ. ರೆಕ್ರೂಟ್‌ಮೆಂಟ್ ಕಮಿಟಿಗೋಸ್ಕರ ಸೆಂಟ್ರಲ್ ಕಮಿಟಿ ಆಗಬೇಕೆಂದು ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇನ್ನೊಂದು ವಿಷಯ ೬೫(ಎ)ನಲ್ಲಿ ಏನು ಹೇಳಿದ್ದೀರಿ.

> "65A. Power of market committee to impose penalty.- Where a person fails to pay the market fee payable by him under clause (i), Clause (ia), Clause (ii) or clause (iii) of sub-section (2A) of section 65, to the market committee on or before the due date, the market committee may in addition to the fee as payable, by order, impose a penalty on such person as such rates not exceeding thirty percent of fee due but not less than twelve percent of the fee due as may be specifed in the bye-laws".

ಈ ವಿಷಯದಲ್ಲಿ ನಾನು ಹೇಳುವುದು ಏನೆಂದರೆ, ನೋಟೀಸ್ ಕೊಟ್ಟು ಒಂದು ವಾರ ಸಮಯ ಕೊಡತಕ್ಕ ವ್ಯವಸ್ಥೆ ಮಾಡಿದರೆ ಅವನು ಅಲರ್ಟ್ ಆಗುತ್ತಾನೆ. ಆದ್ದರಿಂದ ಸ್ಪೆಸಿಫಿಕ್ ಆಗಿ ಒಂದು ನೋಟೀಸ್ ಕೊಡುವಂಥಾದ್ದು ಇದ್ದರೆ ತಪ್ಪಾಗುವುದಿಲ್ಲ. ಹೊಸದಾಗಿ ಇದನ್ನು ಮಾಡಿ ತೊಂದರೆ ಕೊಡತಕ್ಕ ವ್ಯವಸ್ಥೆ ಆಗಬಾರದೆಂದು ಹೇಳುತ್ತೇನೆ. ಇನ್ನು ಮಾನ್ಯ ಕೃಷ್ಣನ್‌ನವರು ಸ್ಟ್ರೈಕ್ ಬಗ್ಗೆ ಹೇಳಿದರು. ಈಗ ೮೨ ಎ ನಲ್ಲಿ ಏನಿದೆ ಎಂದರೆ.

> "82A. No market functiouary to participate in strike. etc.,- No market functionary shall without giving a notice of not less than thirty days to the market committee, participate in any demonstration or strike."

ಇಲ್ಲಿ ನೋಟೀಸ್ ಕೊಡಬೇಕೆಂದು ಹೇಳಿದ್ದೀರಿ. ಒಂದು ಡೆಮಾನ್‌ಸ್ಟ್ರೇಷನ್ ಎಂದರೆ ಒಂದು ಬ್ಲ್ಯಾಕ್ ಫ್ಲ್ಯಾಗ್ ಹಾಕಿಕೊಂಡು ಮಾಡುತ್ತಾರೆ. ಕೆಲವರು ಹತ್ತಾರು ಜನ ಸೇರಿ ರೆಪ್ರಸೆಂಟ್ ಮಾಡಿ ಕೇಳೋಣ ಎನ್ನುವ ದೃಷ್ಟಿಯಿಂದ ಡೆಮಾನ್‌ಸ್ಟ್ರೇಷನ್ ಮಾಡುತ್ತಾರೆ. ಬೋರ್ಡ್ ಮೇಲೆ ಬರೆದು ಡೆಮಾನ್‌ಸ್ಟ್ರೇಷನ್ ಮಾಡತಕ್ಕವರು ಇರುತ್ತಾರೆ. ಸ್ಟ್ರೈಕ್‌ಗಳು ಬೇರೆ ಬೇರೆ ರೀತಿಯಿಂದ ಆಗುತ್ತವೆ. ಅವರಿಗೂ ಸಹ ಮೂವತ್ತು ದಿವಸ ನೋಟೀಸ್ ಕೇಳಿದರೆ ತಪ್ಪಾಗುತ್ತದೆ. ಇದು ಒಂದೇ ನೆಪ ಎಂದು ಡೆಮಾನ್‌ಸ್ಟ್ರೇಷನ್ ವರ್ಡ್ ಹಿಡಿದುಕೊಂಡು ನಿಮ್ಮ ಅಧಿಕಾರಿಗಳು, ಎಂಪ್ಲಾಯೀಸ್‌ಗೆ ಅಮಾಲೀಸ್‌ಗೆ ತೊಂದರೆ ಮಾಡತಕ್ಕದ್ದು ಆಗುತ್ತದೆ. ಇದರ ದುರುಪಯೋಗ ಮಾಡಿಕೊಳ್ಳುತ್ತಾರೆ. ಆದ್ದರಿಂದ, ಡೆಮಾನ್‌ಸ್ಟ್ರೇಷನ್ ಎನ್ನುವ ಪದವನ್ನು ತೆಗೆದು, ಸ್ಟ್ರೈಕ್ ಎಂದು ಇಡಿ. ೭ ದಿವಸ ಇಡಿ, ಬೇರೆ ಬೇರೆ ರೀತಿ ಡೆಮಾನ್‌ಸ್ಟ್ರೇಷನ್ ಮಾಡಿದರೂ, ಅದೇ ಮಾಡಿದರು ಎಂದು ಶಿಕ್ಷೆ ಕೊಡತಕ್ಕದ್ದು ಆಗುತ್ತದೆ. ಆದುದರಿಂದ, ಇದರ ಬಗ್ಗೆ ಪುನರ್‌ಪರಿಶೀಲಿಸಿ ಡೆಮಾನ್‌ಸ್ಟ್ರೇಷನ್ ಎನ್ನುವ ಪದವನ್ನು ಡೆಲಿಟ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಎರಡು ರೂಪಾಯಿಗಳ ಕಮಿಷನ್ ಫೀ ಯನ್ನು ರೈತರಿಂದ ತಪ್ಪಿಸಿ, ಯಾರು ಪರ್ಚೇಸ್ ಮಾಡುತ್ತಾರೆ ಅವರಿಂದಲೇ ತೆಗೆದುಕೊಳ್ಳಬೇಕೆಂದು ತಂದಿದ್ದೀರಿ, ಇದು ನಿಜವಾಗಿಯೂ ಸಹ ಸ್ವಾಗತಾರ್ಹವಾದುದು. ಒಂದು ದೃಷ್ಟಿಯಿಂದ ಇದು ಸ್ವಾಗತಾರ್ಹವಾದರೂ ಇನ್ನೊಂದು ದೃಷ್ಟಿಯಿಂದ ಯೋಚನೆ ಮಾಡಬೇಕಾಗುತ್ತದೆ. ಈ ದೇಶದಲ್ಲಿ ಫಾರಮರ್ಸ್ ಎಷ್ಟು ಜನ ಇದ್ದಾರೋ ಅದರ ಎರಡು ಪಟ್ಟು ಮೂರು ಪಟ್ಟು ಕೂಲಿಕಾರರು ಇದ್ದಾರೆ. ಅವರು ಕೂಡ ಅರ್ಧ ಕ್ವಿಂಟೋಲ್, ಒಂದು ಕ್ವಿಂಟೋಲ್ ಪರ್ಚೇಸ್ ಮಾಡತಕ್ಕದ್ದು ಇರುತ್ತದೆ. ಇವೊತ್ತು ಫಾರ್ಮರ್ಸ್ ಹಿತರಕ್ಷಣೆ ಮಾಡುವಾಗ ಕೂಲಿಗಾರರ ಬಗ್ಗೆಯೂ ಸಹ ಯಾವುದಾದರೂ ಒಂದು ರೀತಿಯಲ್ಲಿ ಯೋಚನೆ ಮಾಡಬೇಕಾಗುತ್ತದೆ. ಅದರ ಜೊತೆಗೆ ಇನ್ನೊಂದು ವಿಚಾರ ಏನೆಂದರೆ, ಇವರಿಗೆ ಫೇರ್ ಪ್ರೈಸ್ ಷಾಪ್ ಮುಖಾಂತರ ಅನುಕೂಲ ಮಾಡಿಕೊಟ್ಟರೆ ಅವರು ಇಲ್ಲಿ ಬಂದು ಪರ್ಚೇಸ್ ಮಾಡುವ ಅವಶ್ಯಕತೆ

ಇರುವುದಿಲ್ಲ. ದೊಡ್ಡ ದೊಡ್ಡ ಕಮಿಷನ್‌ನವರು ಪರ್ಚೇಸ್ ಮಾಡಿದರೆ ಅದು ಒಂದು ತರಹ, ಸಣ್ಣಪುಟ್ಟವರು ಅರ್ಧ ಕ್ವಿಂಟೋಲ್, ಒಂದು ಕಿಂಟೋಲ್, ಪರ್ಚೇಸ್ ಮಾಡಬೇಕೆಂದರೆ ಕಷ್ಟವಾಗುತ್ತದೆ.

ಶ್ರೀ ಆರ್. ಎಲ್. ಜಾಲಪ್ಪ.—ಅಂಥವರಿಗೆ ಇದು ಅನ್ವಯವಾಗುವುದಿಲ್ಲ. ಸಣ್ಣ ಪುಟ್ಟವರಿಗೆ ಅಲ್ಲಿ ಆ ವ್ಯವಸ್ಥೆ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹಾಗಾದರೆ ಪರವಾಯಿಲ್ಲ. ಮಾರ್ಕೆಟ್ ಫ್ರೀ ರೆಮಿಟ್ ಮಾಡಲಿಲ್ಲ ಎಂದು ಮುಂದೆ ರೈತರಿಗೆ ತೊಂದರೆ ಕೊಡತಕ್ಕ ಪ್ರಯತ್ನ ನಡೆಯುತ್ತದೆ. ಮೊದಲು ಏನಾಗುತ್ತಿತ್ತು ಎಂದರೆ ಕಮಿಷನ್ ಏಜೆಂಟ್ ಹತ್ತಿರ ಹೋಗಿ ಯಾವುದೋ ಒಂದು ಪದಾರ್ಥದ ಮೇಲೆ ಅದನ್ನು ಕೊಡದೆ ಅಡ್ವಾನ್ಸ್ ಒಂದು ಸಾವಿರ ಎರಡು ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಅನಂತರ ಆ ಪದಾರ್ಥ ಕೊಟ್ಟಮೇಲೆ ಆ ಹಣ ಹಿಡಿದುಕೊಳ್ಳಲಿಕ್ಕೆ ಹೇಳುತ್ತಿದ್ದರು. ಈಗ ಏನಾಗುತ್ತದೆ ಎಂದರೆ ಸರ್ಕಾರದ ಕಡೆ ಬೆಟ್ಟುಮಾಡಿ ತೋರಿಸುತ್ತಾರೆ. ಅವರಿಗೆ ಕಮಿಷನ್ ಸಿಕ್ಕದೇ ಇರುವುದರಿಂದ ದುಡ್ಡು ಕೊಡುವುದಿಲ್ಲ. ಅವರ ಇಂಟರೆಸ್ಟ್ ಪ್ರೊಟೆಕ್ಟ್ ಮಾಡುವುದಿಲ್ಲ. ಆದ್ದರಿಂದ, ಅಂಥ ಕಡೆ ಡಿ.ಸಿ.ಸಿ. ಬ್ಯಾಂಕ್, ಬ್ರಾಂಚ್‌ಗಳನ್ನು ಹಾಕಿ ಅವರು ತರತಕ್ಕ ಮಾಲಿನ ಮೇಲೆ ಲೋನ್ ಕೊಡತಕ್ಕ ವ್ಯವಸ್ಥೆ ಮಾಡಬೇಕು.

ಶ್ರೀ ಆರ್. ಎಲ್. ಜಾಲಪ್ಪ.—ಸೆಕ್ಷನ್ ೬೩, ಸಬ್‌ಸೆಕ್ಷನ್ (೧೦) ಇದರಲ್ಲಿ ಪ್ರೊವೈಡ್ ಮಾಡಿದ್ದೇವೆ. ಮಾರ್ಕೆಟ್ ಕಮಿಟಿಯವರು ರೈತರಿಗೆ ಅಡ್ವಾನ್ಸ್ ಪ್ರೊವೈಡ್ ಮಾಡಲಿಕ್ಕೆ ಮಾಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದು ಇದ್ದರೆ, ಸರಿ, ಇಲ್ಲದೇ ಇದ್ದರೆ ಎಕ್ಸಪ್ಲಾಯ್‌ಟೇಷನ್, ಪ್ರಾರಂಭವಾಗುತ್ತದೆ. ಘರ್ಷಣೆ ಪ್ರಾರಂಭವಾಗುತ್ತದೆ. ಕಮಿಷನ್ ಏಜೆಂಟ್‌ಗಳು ಎಲ್ಲಾ ಕಡೆಯಿಂದ ಲಾಭ ಮಾಡುತ್ತಾ ಇದ್ದವರೂ, ಇವರು ಸರ್ಕಾರದ ಕಡೆ ಮತ್ತು ಶಾಸಕರ ಕಡೆ ಬಂದು ಅವರಿಗೆ ಅನುಕೂಲವಾಗುವ ಹಾಗೆ ಮಾಡಿಕೊಳ್ಳುತ್ತಿದ್ದರು. ಇವೊತ್ತು ಇನ್ನು ಎಲ್ಲೆಲ್ಲಿ ನ್ಯೂನತೆಗಳು ಇವೆ, ಅವುಗಳನ್ನು ಸರಿಪಡಿಸಿ, ಇನ್ನೂ ಚೆನ್ನಾಗಿ ಉತ್ತಮ ರೀತಿಯಲ್ಲಿ ಈ ವ್ಯವಸ್ಥೆಯನ್ನು ಮಾಡುತ್ತೀರೆಂದು ನಾನು ನಂಬಿ, ಇನ್ನು ರೆಕ್ರೂಟ್‌ಮೆಂಟ್ ಕಮಿಟಿ ಸೆಂಟ್ರಲ್ ಲೆವಲ್‌ನಲ್ಲಿ ಕಮಿಟಿ ಮಾಡಿ ಲಿಸ್ಟ್ ಕಳುಹಿಸುವಾಗ ರೋಸ್ಟರ್ ಸಿಸ್ಟಮ್ ಫಾಲೋ ಮಾಡಬೇಕೆಂದು ಕೇಳಿಕೊಂಡು ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತ್ರುಗಳನ್ನು ಮುಗಿಸುತ್ತೇನೆ.

† ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ಜಾಲಪ್ಪನವರು ತಂದಿರತಕ್ಕ ಮಸೂದೆಯನ್ನು ಸ್ವಾಗತ ಮಾಡುತ್ತಾ, ಜನತಾ ಪಕ್ಷ ಅಧಿಕಾರಕ್ಕೆ ಬಂದಮೇಲೆ ಒಳ್ಳೆಯ ಕೆಲಸ ಮಾಡಿದ್ದರೆ ಇದೊಂದು ಮಾತ್ರ ಮಾಡಿದ್ದಾರೆಂದು ಹೇಳುತ್ತೇನೆ. ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳಿಗೆ ಹಣ ಕೇಳಿದರೂ ದುಡ್ಡಿಲ್ಲವೆಂದು ಹೇಳುತ್ತಾರೆ. ಡಿ. ಡಿ. ಸಿ. ಮೀಟಿಂಗ್‌ನಲ್ಲಿ ಅಧಿಕಾರಿಗಳನ್ನು ಕೇಳಿದರೆ ಜಾರಿಕೆ ಉತ್ತರ ಕೊಡುತ್ತಾರೆ. ಮಾರ್ಕೆಟಿಂಗ್ ಇಲಾಖೆಯಲ್ಲಿ ಅಧಿಕಾರಿಗಳು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿಲ್ಲ. ಕೆಂಪು ಚೀಟಿ, ಬಿಳಿ ಚೀಟಿ ಲೆಕ್ಕ ಇಟ್ಟುಕೊಳ್ಳುತ್ತಾರೆ. ಅದನ್ನು ಕೂಡ ಸರಿಯಾಗಿ ಕೊಡುವುದಿಲ್ಲ. ನನಗೆ ತಿಳಿದಂತೆ ಹೋದವರ್ಷ ಒಂದು ಅಂಗಡಿಗೆ ೮೦ ಮೂಟೆ ಅಡಿಕೆ ಬಂತು. ಮಾರ್ಕೆಟಿಂಗ್ ಕಾರ್ಯದರ್ಶಿಯವರು ೮ ಮೂಟೆ ಎಂದು ಬರೆದುಕೊಂಡು ಬಂದಿದ್ದಾರೆ. ೨೦ ಪಾಯಿಂಟ್ಸ್ ಮೀಟಿಂಗ್‌ನಲ್ಲಿ ಕೂಡ ಈ ವಿಷಯವನ್ನು ನಾನು ಪ್ರಸ್ತಾಪ ಮಾಡಿದ್ದೇನೆ. ಅಧಿಕಾರಿಗಳು ಷಾಮೀಲಾಗಿ ಮಾಡುವುದರಿಂದ ಸರ್ಕಾರಕ್ಕೆ ಬರತಕ್ಕ ಮಾರಾಟ ತೆರಿಗೆ, ವರಮಾನ ತೆರಿಗೆ ಕೋಟ್ಯಾಂತರ ರೂಪಾಯಿಗಳು ಸರ್ಕಾರದ ಬೊಕ್ಕಸಕ್ಕೆ ಬರುವುದು ತಪ್ಪುತ್ತಿದೆ. ಮಾನ್ಯ ಜಾಲಪ್ಪನವರು ಸ್ವಲ್ಪ ಧೈರ್ಯ ಮಾಡಿ ಈ ಕಾನೂನು ತಂದು ರೈತರ ಶೋಷಣೆಯನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಈ ರಾಷ್ಟ್ರದ ಹಣೇಬರಹವೇ ಹೀಗೆ.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮೊನಾಪಲೀಸ್ ಯಾರಿದ್ದಾರೆ ಅವರದ್ದೇ ಈಗಲೂ ನಡೆಯುತ್ತದೆ. ಶುಗರ್ ಲಾಬಿ, ಕಾಟನ್ ಲಾಬಿ, ಮರ್ಚೆಂಟ್ಸ್ ಲಾಬಿ ಮಾಡಿಕೊಂಡು ಹಳ್ಳಿಗಳಲ್ಲಿ ರೈತರ ಮನೆ ಬಾಗಿಲಿಗೇ ಹೋಗಿ, ಲಾರಿಗಳನ್ನು ತೆಗೆದುಕೊಂಡು ಬಂದು ದವಸ ಧಾನ್ಯಗಳನ್ನು ಕೊಂಡುಕೊಳ್ಳುತ್ತಿದ್ದಾರೆ. ಇದನ್ನು ತಪ್ಪಿಸುವುದಕ್ಕೆ ತಾವು ಮೊದಲು ಪ್ರಯತ್ನ ಮಾಡಬೇಕು. ಇಂಥ ವ್ಯವಹಾರವನ್ನು ಕಂಡುಹಿಡಿದು ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸುವ ವ್ಯವಸ್ಥೆ ಮಾಡಬೇಕು. ನಮ್ಮ ಭಾಗದಲ್ಲಿ ಆಲೂಗೆಡ್ಡೆ, ಟೊಮ್ಯಾಟೋಗಳನ್ನು ಬಹಳ ಜನ ಬೆಳೆಯುತ್ತಾರೆ. ಒಂದು ಕುಕ್ಕೆ, ಮಂಕ್ರಿ ಟೊಮ್ಯಾಟೋವನ್ನು ೫ ರೂಪಾಯಿಗಳಿಗೆ ಮಾರಾಟ ಮಾಡುತ್ತಾರೆ. ಬೆಂಗಳೂರಿನಿಂದ ಬಂದು ಕೊಂಡು ಕೊಂಡು ಹೋಗುತ್ತಾರೆ. ಇಲ್ಲಿ ಅದೇ ಒಂದು ಕುಕ್ಕೆ, ಮಂಕ್ರಿ ಟೊಮ್ಯಾಟೋವನ್ನು ೨೫ ರೂಪಾಯಿಗಳಲ್ಲಿ ಮಾರಾಟ ಮಾಡುತ್ತಾರೆ. ರೈತರು ಬೆಳೆದಂಥ ಬೆಳೆಗಳಿಗೆ ಸರಿಯಾದಂಥ ಬೆಲೆ ಸಿಗುವಂತಹ ವ್ಯವಸ್ಥೆ ಮಾಡುತ್ತೀರಿ ಎನ್ನುವ ನಂಬಿಕೆ ನನಗಿದೆ. ತುಮಕೂರು ಮತ್ತು ಗುಬ್ಬಿಯಲ್ಲಿ ಕೋಲ್ಡ್ ಸ್ಟೋರೇಜ್ ಮಾಡಬೇಕು. ಎಲ್ಲೆಲ್ಲಿ ಅವಶ್ಯಕತೆ ಇದೆ ಅಲ್ಲೆಲ್ಲಾ ಈ ಸ್ಟೋರೇಜ್ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ಯಾರು ಕಷ್ಟಪಟ್ಟು ತನ್ನ ಬೆವರು ಸುರಿಸಿ ಬೆಳೆ ಬೆಳೆಯುತ್ತಾರೆ, ಅವರಿಗೆ ಲಾಭ ಸಿಗುವುದಿಲ್ಲ. ಮಧ್ಯವರ್ತಿಗಳು ಲಾಭ ಮಾಡಿಕೊಳ್ಳುತ್ತಾರೆ. ಇನ್ನು ಸ್ಟ್ರೈಕ್ ಬಗ್ಗೆ ತಾವು ತಂದಿರತಕ್ಕ ತಿದ್ದುಪಡಿ ಸಾಧುವಾಗಿದೆ. ನಾನು ಒಂದು ಸಾರಿ ಭತ್ತ ತೆಗೆದುಕೊಂಡು ಹೋಗಿದ್ದಾಗ ಅಮಾಲಿಗಳು ಇರಲಿಲ್ಲ. ಇವರ ಮೇಲೆ ಬಿಗಿ ಇರಬೇಕಾಗುತ್ತದೆ. ಇಲ್ಲದಿದ್ದರೆ ರೈತರಿಗೆ ಬಹಳ ತೊಂದರೆ ಕೊಡುತ್ತಾರೆ. ಲೈಸೆನ್ಸ್ ಕಡ್ಡಾಯ ಮಾಡಿರತಕ್ಕಂಥಾದ್ದು ೧೫ ದಿವಸ ಟೈಂ ಕೊಟ್ಟಿರುವಂಥಾದ್ದು ಸಾಧುವಾಗಿದೆ. ತಾವು ಬಹಳ ಧೈರ್ಯ ಮಾಡಿ ಇದನ್ನು ತಂದಿದ್ದೀರಿ ತಾವು ಕೂಡ ಬಹಳ ಕಷ್ಟದಿಂದ ಬದುಕಿದ್ದೀರಿ.

ಅಧ್ಯಕ್ಷರು.—ಒಂದು ಸಾರಿ ಸ್ಟ್ರೈಕ್ ಮಾಡಿ ಎದುರಿಸಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಮ್ಮಲ್ಲಿ ಮೆಮೋರಂಡಂ ಕೊಟ್ಟು ಎದುರಿಸಿದರು.

ಶ್ರೀ ಜಿ. ಎಸ್. ಶಿವನಂಜಪ್ಪ.—ಮಾರುಕಟ್ಟೆ ಸಮಿತಿಯಲ್ಲಿ ಅಧಿಕಾರಿಗಳು ಇದ್ದಾರೆ. ತಾವು ಮಂತ್ರಿಗಳಾದ ಮೇಲೆ ತುಮಕೂರಿನಲ್ಲಿ ನಡೆಯುವ ಸಂತೆ ದಿವಸ ಹೋಗಿದ್ದೀರಾ? ಅಲ್ಲಿ ಏನು ನಡೆಯುತ್ತಿದೆ ಎನ್ನುವುದನ್ನು ತಾವು ನೋಡಿದ್ದೀರಾ?

ಶ್ರೀ ಆರ್. ಎಲ್. ಜಾಲಪ್ಪ.—ಹೋಗಿದ್ದೆ. ಚೀಫ್ ಮಾರ್ಕೆಟಿಂಗ್ ಆಫೀಸಿಗೆ ೪ ಗಂಟೆಗೆ ಹೋದೆ. ತುಪ್ಪದ ವಾಸನೆ ಹೊಡೆಯುತ್ತಿತ್ತು. ಮಸಾಲೆ ದೋಸೆ ತರಿಸಿಕೊಂಡು ಅಧಿಕಾರಿಗಳು ತಿನ್ನುತ್ತಿದ್ದರು. ೨೪ ಗಂಟೆಯೊಳಗೆ ಇಡೀ ಸಿಬ್ಬಂದಿಯನ್ನು ಬದಲಾಯಿಸಿ ಬಂದಿದ್ದೇನೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ಸ್ವಾಮಿ, ತುಮಕೂರು ಮಂಡಿ ಪೇಟೆಯಲ್ಲಿ ಆಗತಕ್ಕ ಕಳ್ಳತನ ರಾಜ್ಯದಲ್ಲಿ ಇನ್ನೆಲ್ಲೂ ಕೂಡ ಆಗುವುದಿಲ್ಲ. ನಿಮಗೆ ಹಣ ಹೇಗೆ ಬರುತ್ತದೆ? ನಿಮ್ಮ ಇಲಾಖೆ ಪ್ರಾಮಾಣಿಕರೀತಿಯಲ್ಲಿ ಕೆಲಸ ಮಾಡಿದರೆ ೧೦೦ರಿಂದ ೧೫೦ ಕೋಟಿ ರೂಪಾಯಿಗಳ ಹೆಚ್ಚು ವರಮಾನ ಬೊಕ್ಕಸಕ್ಕೆ ಬರುತ್ತದೆ. ನಿನ್ನೆ ಸೂಪರ್‌ವೈಸರ್ ಆದವನು ಮೂರು ವರ್ಷದಲ್ಲಿ ೫೦ ಸಾವಿರದಿಂದ ೫ ಲಕ್ಷ ರೂಪಾಯಿ ವರೆಗೆ ಮನೆ ಕಟ್ಟಿರುತ್ತಾನೆ. ಈ ರೀತಿ ಮಾಡುತ್ತಿದ್ದಾರೆ ಎಂದರೆ ಲೋಕಾಯುಕ್ತಕ್ಕೆ ಅರ್ಜಿ ಕೊಡಿ ಎಂದು ಹೇಳುತ್ತೀರಿ? ಹಿಂದೆ ಅಲ್ಲಿ ರಾಮಯ್ಯ ಎನ್ನುವ ಒಳ್ಳೆಯ ಅಧಿಕಾರಿ ಇದ್ದರು. ಅವರು ೫೦ ಲಕ್ಷ ರೂಪಾಯಿಗಳ ಜಾಸ್ತಿ ವರಮಾನವನ್ನು ತೋರಿಸಿದರು. ರಾಜಕಾರಣಿ ಒಬ್ಬರಿಗೆ ಎಲ್ಲಾ ವರ್ತಕರು ಸೇರಿಕೊಂಡು ಒಂದು ಅಂಬಾಸಿಡರ್ ಕಾರು ಕೊಟ್ಟು, ಒಂದು ತಿಂಗಳಲ್ಲಿ ಅವರನ್ನು ವರ್ಗ ಮಾಡಿಸಿದರು.

ಶ್ರೀ ಆರ್. ಎಲ್. ಜಾಲಪ್ಪ.—ಯಾವ ರಾಮಯ್ಯನನ್ನು ಒತ್ತಾಯಕ್ಕೆ ಮಣಿದು ವರ್ಗ ಮಾಡಿದ್ದರೋ ಅದೇ ರಾಮಯ್ಯನನ್ನು ಅಲ್ಲಿಗೆ ತಂದು ಹಾಕಿದ್ದೇನೆ.

ಅಧ್ಯಕ್ಷರು.—ಅಧಿಕಾರಿಗಳು ೩೫ ವರ್ಷ ಇದ್ದೇ ಇರುತ್ತಾರೆ. ರಾಜಕಾರಣಿಗಳನ್ನು ೫ ವರ್ಷ ಆದನಂತರ ಹೋಗುವವರು ಎಂದು ಹೇಳುತ್ತಾರೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ಅಧಿಕಾರಿಗಳು ಫ್ರೀಯಾಗಿ ಆಕ್ಷನ್ ತೆಗೆದುಕೊಳ್ಳುವುದಕ್ಕೆ ಅಧಿಕಾರ ಕೊಡಿ. ಇವರು ಕಾಂಗ್ರೆಸ್‌ನವರಿಗೆ ಸಪೋರ್ಟ್ ಮಾಡಿದ್ದು, ಇದನ್ನು ರೈಡ್ ಮಾಡುವ ಇವರು ಜನತಾಕ್ಕೆ ಸಪೋರ್ಟ್ ಮಾಡಿದ್ದು, ಇದನ್ನು ರೈಡ್ ಮಾಡಬೇಡ ಎಂದು ಹೇಳಿದರೆ ಒಳ್ಳೆಯ ಕೆಲಸ ಮಾಡುವುದಕ್ಕಾಗುವುದಿಲ್ಲ. ಸೆಸ್ ಕಲೆಕ್ಟ್ ಮಾಡುವುದನ್ನು ಸರಿಯಾಗಿ ಕಟ್ಟುತ್ತಿಲ್ಲ. ಗುಬ್ಬಿಯಲ್ಲಿ ಕಲೆಕ್ಟ್ ಮಾಡಿರುವ ಸೆಸ್ಸು ಒಂದು ಪೈಸೆ ಕಟ್ಟಿಲ್ಲ. ಇವತ್ತು ಕೂಡ ಈ ಎಲ್ಲ ರೀತಿಯ

ವ್ಯವಸ್ಥೆ ಬಂದಿದ್ದರೂ ಕೂಡ ರೈತರು ಅವರು ಬೆಳೆದಂತಹ ಮಾಲನ್ನು ಮಾರುಕಟ್ಟೆಗೆ ತರಬೇಕಾದರೆ ಎತ್ತಿನ ಗಾಡಿಯಿಂದ ತರತಕ್ಕಂತಹವರೇ ೯೦ರಷ್ಟು ಇರುವುದನ್ನು ಇಡೀ ರಾಷ್ಟ್ರದಲ್ಲಿ ನಾವು ಕಾಣುತ್ತಿದ್ದೇವೆ. ಸರ್ಕಾರದಲ್ಲಿ ರೈಲಿನ ವ್ಯವಸ್ಥೆ ಬಂತು, ವ್ಯಾನಿನ ವ್ಯವಸ್ಥೆ ಬಂತು, ಈ ಎಲ್ಲಾ ವ್ಯವಸ್ಥೆ ಜಾರಿಗೆ ಬಂದಿದ್ದರೂ ರೈತ ತನ್ನ ಮಾಲನ್ನು ಮಾರುಕಟ್ಟೆಗೆ ತರಬೇಕಾದರೆ, ಎತ್ತಿನ ಗಾಡಿಯ ಮೂಲಕವೇ ತರಬೇಕಾಗುತ್ತದೆ. ಆ ಗಾಡಿಯಲ್ಲಿ ಮಾಲನ್ನು ತರಬೇಕಾದರೆ, ಮುಂದೆ ಒಬ್ಬ ಎತ್ತುಗಳನ್ನು ಹಿಡಿದುಕೊಳ್ಳಬೇಕು, ಹಿಂದೊಬ್ಬ ಪಾರಿಯನ್ನು ಹಿಡಿದುಕೊಳ್ಳಬೇಕು. ಮೂಕಿಯ ಮೇಲೊಬ್ಬ ಕುಳಿತುಕೊಳ್ಳಬೇಕು. ಏಕೆಂದರೆ ಸಾಮಾನ್ಯವಾಗಿ ಪ್ರತಿಯೊಂದು ರಸ್ತೆಗಳಲ್ಲೂ ಹಳ್ಳಗಳು ಇದ್ದೇ ಇರುತ್ತವೆ. ನಮ್ಮ ಕ್ಷೇತ್ರದಲ್ಲಂತೂ ಪ್ರತಿಯೊಂದು ರಸ್ತೆಗಳಲ್ಲಿ ೩–೩ ಅಡಿ ಆಳದ ಗುಂಡಿಗಳು ಬಿದ್ದಿವೆ. ಇದರ ಬಗ್ಗೆ ನಾನು ಹೇಳುವುದಾದರೆ, ರೈತರಿಂದ ಏನು ಒಂದು ರೂಪಾಯಿಯನ್ನು ವಸೂಲಿ ಮಾಡುತ್ತೀರಿ? ಅದನ್ನು ರೈತರು ಹೆಚ್ಚು ಉಪಯೋಗಿಸತಕ್ಕ ರಸ್ತೆಯನ್ನು ಸರಿಪಡಿಸುವ ಸಲುವಾಗಿ ಏಕೆ ವಿನಿಯೋಗಿಸಬಾರದು ಎಂಬುದಾಗಿ ಜನರು ಪ್ರಶ್ನೆ ಮಾಡುತ್ತಿದ್ದಾರೆ. ಹಿಂದೆ ಶ್ರೀಮಾನ್ ಹುಚ್ಚಮಾಸ್ತಿ ಗೌಡರು ಎರಡು ರೂಪಾಯಿಗೆ ಈ ಸೆಸ್ಸನ್ನು ಹೆಚ್ಚು ಮಾಡಿದಾಗ, ಒಂದು ರೂಪಾಯಿಯನ್ನು ರಸ್ತೆಯ ರಿಪೇರಿಗಾಗಿ ವಿನಿಯೋಗ ಮಾಡುತ್ತೇವೆಂದು ಹೇಳಿದ್ದರು. ಅದರ ಬಗ್ಗೆ ತಾವು ಗಮನ ಹರಿಸಬೇಕು. ಇವೊತ್ತು ಏನೊಂದು ತಿದ್ದುಪಡಿಯನ್ನು ತಂದಿದ್ದೀರಿ. ಇದು ನಿಜವಾಗಿಯೂ ಕ್ರಾಂತಿಕಾರಕವಾದ ಬದಲಾವಣೆ ಇದನ್ನು ಬಹಳ ಧೈರ್ಯವಾಗಿ ಮಾಡಿದ್ದೀರಿ. ಆದ್ದರಿಂದ ಅವರಿಗೆ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪಂಪಾಪತಿ (ದಾವಣಗೆರೆ).—ಸನ್ಮಾನ್ಯ ಅಧ್ಯಕ್ಷರೆ, ಈ ದಿವಸ ನಮ್ಮ ಸಹಕಾರ ಮಂತ್ರಿಗಳು ಏನೊಂದು ತಿದ್ದುಪಡಿ ಮಸೂದೆಯನ್ನು ತಂದಿದ್ದಾರೆ ಅದರ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದರ ಜೊತೆಗೆ ಒಂದೆರಡು ಸಲಹೆಗಳನ್ನೂ ಕೂಡ ಕೊಡುವುದಕ್ಕೆ ನಿಂತಿದ್ದೇನೆ. ನಮ್ಮ ದಾವಣಗೆರೆ ಮಾರುಕಟ್ಟೆ ಸಮಿತಿ ಬಹಳ ದೊಡ್ಡದಾದ ವ್ಯವಹಾರವನ್ನು ನಡೆಸುತ್ತಿದೆ. ಅಲ್ಲಿ ಮಳಿಗೆಗಳನ್ನು ಕಟ್ಟಿದ್ದಾರೆ. ಅದು ಮಾನ್ಯ ಸಚಿವರಿಗೂ ಗೊತ್ತಿದೆ. ಸುಮಾರು ೨೫–೩೦ ಮಳಿಗೆಗಳನ್ನು ಕಟ್ಟಿದ್ದಾರೆ. ಕಟ್ಟಿ ೨ ವರ್ಷವಾಯಿತು. ಅವುಗಳನ್ನು ಬಾಡಿಗೆಗೆ ಕೊಟ್ಟಿದ್ದರೆ, ೨–೩ ಲಕ್ಷಕ್ಕಿಂತ ಮೇಲ್ಪಟ್ಟು ವರಮಾನ ಬರುತ್ತಿತ್ತು. ೧೦ ಲಕ್ಷ ರೂಪಾಯಿಗಳ ಬಾಡಿಗೆ ಬರುತ್ತಿತ್ತು ಎಂದು ಕಾಣುತ್ತದೆ. ಅದನ್ನು ಏಕೆ ಇದುವರೆವಿಗೂ ಬಾಡಿಗೆಗೆ ಕೊಟ್ಟಿಲ್ಲ ? ಆದಷ್ಟು ಜಾಗ್ರತೆ ಅದನ್ನು ಬಾಡಿಗೆಗೆ ಕೊಟ್ಟರೆ ಒಳ್ಳೆಯದು. ಆದರಿಂದ ಮಾರುಕಟ್ಟೆ ಸಮಿತಿಗೆ ಆದಾಯ ಕೂಡ ಬರುತ್ತದೆ. ದಾವಣಗೆರೆಯಲ್ಲಿ ಹಳ್ಳಿಯ ಮಾರುಕಟ್ಟೆ ಒಂದು ಇದೆ. ಆದರಲ್ಲಿ ಜಾಗ ಬಹಳ ಚಿಕ್ಕದು ಇರುವುದರಿಂದ ಬೇರೆ ಕಡೆಗೆ ಬದಲಾವಣೆ ಮಾಡಿ. ನಮ್ಮಲ್ಲಿ ಸ್ಥಳದ ಅಭಾವ ಏನೂ ಬರುವುದಿಲ್ಲ. ಮಾರುಕಟ್ಟೆಯಲ್ಲಿ ತೆಂಗಿನಕಾಯಿ ಇನ್ನಿತರೆ ವಸ್ತುಗಳನ್ನು ಕೂಡ ಮಾರಾಟ ಮಾಡತಕ್ಕಂತಹ ವ್ಯವಸ್ಥೆಯನ್ನು ಮಾಡಿದರೆ ತುಂಬಾ ಒಳ್ಳೆಯದು. ತೆಂಗಿನಕಾಯಿಯನ್ನೂ ಕೂಡ ನಿಮ್ಮ ಮಾರುಕಟ್ಟೆಗೇ ತಂದು ಮಾರಾಟ ಮಾಡುವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ಅದರ ಜೊತೆಯಲ್ಲಿ ದನಗಳ ಮಾರುಕಟ್ಟೆ ಕೂಡ ಇದೆ. ದನಗಳ ಮಾರುಕಟ್ಟೆ ಹಿಂದೆ ಬೇರೆ ಕಡೆ ಇತ್ತು. ಅಲ್ಲಿ ಬಹಳ ಮೋಸವಾಗುತ್ತದೆಂದು, ರೈತರಿಂದ ಇದರಿಂದ ತೊಂದರೆಯಾಗುತ್ತದೆಂಬುದನ್ನು ತಿಳಿದು, ನಮ್ಮ ಮಾರುಕಟ್ಟೆ ಸಮಿತಿಯ ಯಾರ್ಡಿನಲ್ಲೇ ದನಗಳನ್ನು ಮಾರಾಟ ಮಾಡುವ ವ್ಯವಸ್ಥೆ ಮಾಡಿದರೆ, ರೈತರಿಗೆ ಎಲ್ಲಾ ರೀತಿಯ ರಕ್ಷಣೆ ಸಿಕ್ಕುತ್ತದೆ ಎನ್ನತಕ್ಕಂತಹ ಭಾವನೆ ನಮ್ಮದಾಗಿತ್ತು. ಆದರೆ ಆ ಭಾವನೆ ಈಗ ತಪ್ಪಾಗಿ ಪರಿಣಮಿಸಿದೆ. ಆ ಕಡೆ ಯಾರೂ ನೋಡುವುದಿಲ್ಲ. ಅಧಿಕಾರಿಗಳೂ ಕೂಡ ಆ ಕಡೆ ಹೋಗುವುದಿಲ್ಲ. ಇಲ್ಲಿ ರೈತರಿಗೆ ಎಷ್ಟು ಮೋಸವಾಗುತ್ತಿದೆ ಎಂದು ಹೇಳಿದರೆ ಅದನ್ನು ಹೇಳುವುದಕ್ಕೆ ಸಾಧ್ಯವೇ ಇಲ್ಲ. ಒಂದು ಜೊತೆ ಎತ್ತುಗಳನ್ನು ಹೊಡೆದುಕೊಂಡು ಒಬ್ಬ ರೈತರ ಮಾರುಕಟ್ಟೆಗೆ ಬಂದರೆ, ಏನು ಬೆಲೆ ಎಂಬುದಾಗಿ ದಳ್ಳಾಳಿ ಆ ರೈತನನ್ನು ಕೇಳುತ್ತಾನೆ. ಅದರಲ್ಲೂ ಚೌಕಾಶಿ ಮಾಡಿ ೧,೦೦೦ ರೂಪಾಯಿ ಎಂದು ಹೇಳಿದರೆ, ಆ ರೈತನಿಗೆ ೫ ರೂಪಾಯಿ ಕೊಟ್ಟು ಹೋಗಿ ಬಿಡುತ್ತಾನೆ. ಆ ರೈತ ೫ ರೂಪಾಯಿಗಳನ್ನು ಹಿಡಿದುಕೊಂಡು ಆತನು ಬರುವವರೆಗೂ ಕಾಯಬೇಕು. ಕೊನೆಗೆ ಆ ದಳ್ಳಾಳಿ ಬಂದು ೧,೦೦೦ ರೂಪಾಯಿಗಳನ್ನು ರೈತನಿಗೆ ಕೊಟ್ಟು ಆ ಎತ್ತುಗಳನ್ನು ಆತ ಬೇರೆಯವರಿಗೆ ೧,೨೦೦ ರೂಪಾಯಿಗಳಿಗೆ ಮಾರಿಕೊಂಡು ೨೦೦ ರೂಪಾಯಿಗಳ ಲಾಭವನ್ನು ಸಂಪಾದನೆ ಮಾಡುತ್ತಾನೆ. ನಿಮ್ಮ ಅಧಿಕಾರಿಗಳು ಈ ಕಡೆ ಗಮನ ಹರಿಸುತ್ತಿಲ್ಲ. ಇದನ್ನು ನಾನು ಅಲ್ಲಿಯ.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಅಧಿಕಾರಿಗಳ ಸಭೆಯಲ್ಲೂ ತಿಳಿಸಿದ್ದೇನೆ. ಒಂದೊಂದು ಸಲ ಅಲ್ಲಿ ದಳ್ಳಾಳಿಗಳು ಹಾಗೂ ರೈತರು ಹೊಡೆದಾಡುತ್ತಾರೆ. ಯಾರೂ ಕೇಳುವವರೇ ಇಲ್ಲದಂತಾಗಿದೆ. ಇದು ನಿಜವಾದ ಸಂಗತಿ. ಇದನ್ನು ತಪ್ಪಿಸಿ ರೈತರಿಗೆ ಆಗತಕ್ಕ ಅನ್ಯಾಯವನ್ನು ತಪ್ಪಿಸುವ ದಿಸೆಯಲ್ಲಿ ತಾವು ಕೂಡಲೇ ಕ್ರಮ ಕೈಗೊಳ್ಳಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ. ತಮ್ಮ ಸಮಿತಿಗೆ ಸದಸ್ಯರು ಇರುತ್ತಾರೆ. ಆ ರೀತಿಯ ಸದಸ್ಯರಲ್ಲಿ ರೈತರು ಇದ್ದಾರೆ, ವ್ಯಾಪಾರಸ್ಥರು ಇದ್ದಾರೆ. ಆದರೆ ದಳ್ಳಾಳಿಗಳು ಇರುತ್ತಾರೆ. ಅಮಾಲರು ಯಾರು ಇದ್ದಾರೆ, ಅವರೇ ಅಲ್ಲಿ ಕೆಲಸ ಮಾಡತಕ್ಕಂತಹವರು. ಅವರದ್ದೇ ಆದ ಸಂಘಟನೆ ಇದೆ. ಲೈಸನ್ಸ್ ಇಲ್ಲ ಅಷ್ಟೆ. ವ್ಯಾಪಾರಸ್ಥರು, ರೈತರು ಹಾಗೂ ಅಮಾಲರು ಇವರೆಲ್ಲರೂ ಕೂಡಿಯೇ ಮಾಡತಕ್ಕಂತಹ ಕೆಲಸ ಇದು. ಆದ್ದರಿಂದ ಅಮಾಲರನ್ನು ಕೂಡ ಅವರ ಸಂಘಟನೆಯಲ್ಲಿ ಯಾರನ್ನಾದರೂ ಅವರು ಕಳುಹಿಸಲಿ, ಅವರ ಪ್ರತಿನಿಧಿಗೂ ಕೂಡ ಸಮಿತಿಯ ಸದಸ್ಯ ಎಂಬುದಾಗಿ ಮಾಡಬೇಕು. ಆಗ ಅಮಾಲರ ಬಗ್ಗೆ ಏನಾದರೂ ವಿಚಾರಗಳು ಬಂದರೆ, ಅದನ್ನು ಸಮಿತಿಯ ಸಭೆಯಲ್ಲಿ ಚರ್ಚೆ ಮಾಡಿ, ಇತ್ಯರ್ಥ ಮಾಡುವುದಕ್ಕೆ ಸಾಧ್ಯತೆ ಇದೆ. ಇಲ್ಲದಿದ್ದರೆ ಹಲವಾರು ಸಮಸ್ಯೆಗಳು ಉದ್ಭವವಾಗುತ್ತವೆ. ರೈತನಿಗೆ ತೊಂದರೆಯಾಗುತ್ತದೆ. ಅನೇಕ ರೀತಿಯ ಎಡರುತೊಡರುಗಳಾಗುವ ಸಂಭವ ಬರುತ್ತದೆ. ಆದ್ದರಿಂದ ಅಮಾಲರ ಪ್ರತಿನಿಧಿ ಒಬ್ಬನನ್ನು ಸಮಿತಿಯ ಸದಸ್ಯ ಎಂಬುದಾಗಿ ಮಾಡುವುದಕ್ಕೆ ಈ ಒಂದು ತಿದ್ದುಪಡಿಯಲ್ಲೇ ಆ ಬಗ್ಗೆ ಮತ್ತೊಂದು ತಿದ್ದುಪಡಿಯನ್ನು ತರಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ. ಮತ್ತೊಂದು ವಿಚಾರವೇನೆಂದರೆ, ಹಿಂದೆ ನಗರ ಸಭೆಯ ಸದಸ್ಯರೊಬ್ಬರು ಅಲ್ಲಿಯ ಸದಸ್ಯರಾಗಿರುತ್ತಿದ್ದರು. ಆದರೆ ಈಗ ನಗರಸಭೆ ವತಿಯಿಂದ ಸದಸ್ಯರನ್ನು ಅಲ್ಲಿಗೆ ಕಳುಹಿಸುವ ವ್ಯವಸ್ಥೆ ಇಲ್ಲ. ಇದು ಯಾವ ಕಾರಣದಿಂದ ಬಿಟ್ಟು ಹೋಗಿದೆಯೋ ಗೊತ್ತಿಲ್ಲ. ನಗರ ಸಭೆಯಲ್ಲಿರತಕ್ಕಂತಹ ಸದಸ್ಯರಿಗೆ ಮಾರುಕಟ್ಟೆ ಸಮಸ್ಯೆ ಗೊತ್ತಿರುತ್ತದೆ. ಆದ್ದರಿಂದ ಹಿಂದೆ ಇದ್ದಂತಹ ರೀತಿಯಲ್ಲಿ ನಗರ ಸಭೆಯ ವತಿಯಿಂದ ಸದಸ್ಯರನ್ನು ಮಾರುಕಟ್ಟೆ ಸಮಿತಿಗೆ ಸದಸ್ಯರಾಗುವುದಕ್ಕೆ ಅವಕಾಶ ಮಾಡಿಕೊಡಬೇಕು. ಆಗ ಅಲ್ಲಿ ಬರತಕ್ಕಂತಹ ಸಮಸ್ಯೆಗಳನ್ನು ಇತ್ಯರ್ಥಮಾಡಿಕೊಳ್ಳುವುದಕ್ಕೆ, ತೊಂದರೆಗಳನ್ನು ನಿವಾರಣೆ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ. ಆದ್ದರಿಂದ ಇದನ್ನೂ ಕೂಡ ಮಾನ್ಯ ಮಂತ್ರಿಗಳು ಯೋಚನೆ ಮಾಡಬೇಕು. ಈ ಬಗ್ಗೆಯೂ ಕ್ರಮವನ್ನು ಕೈಗೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಮತ್ತೆ ಕೆಲವು ಕಡೆ ರೈತ ಭವನವನ್ನು ಕಟ್ಟಿದ್ದೀರಿ. ಇನ್ನೂ ಕೆಲವು ಕಡೆ ಕಟ್ಟುತ್ತಿದ್ದೀರಿ. ಎಲ್ಲಾ ಕಡೆ ಕಟ್ಟಿಲ್ಲ. ಎಲ್ಲಾ ಕಡೆ ರೈತ ಭವನವನ್ನು ಕಟ್ಟಬೇಕು. ರೈತ ಮಾಲನ್ನು ತೆಗೆದುಕೊಂಡು ಮಾರುಕಟ್ಟೆಗೆ ಬಂದಾಗ, ಮಾರಾಟ ಮಾಡಿದ ಮೇಲೆ ಮನೆಗೆ ಹೋಗುವುದಕ್ಕೆ ತಡವಾದರೆ ಆತ ಆ ರೈತ ಭವನದಲ್ಲಿ ಉಳಿದುಕೊಳ್ಳುವಂತಹ ವ್ಯವಸ್ಥೆಯಾಗಬೇಕು. ಇಲ್ಲ ಅಂದರೆ, ಆತ ಹೋಟೆಲ್‌ಗೆ ಹೋಗಿ ತಂಗಬೇಕಾಗುತ್ತದೆ. ಅವನಲ್ಲಿ ಮಾರಾಟ ಮಾಡಿದ ಹಣ ಇರುವುದರಿಂದ ಬೇರೆಯವರಿಂದ ಆತನಿಗೆ ತೊಂದರೆಯಾಗಬಹುದು. ಆದ್ದರಿಂದ ಕಡ್ಡಾಯವಾಗಿ ಎಲ್ಲಾ ಕಡೆ ರೈತ ಭವನವನ್ನು ಕಟ್ಟುವುದರ ಮೂಲಕ ಅವರಿಗೆ ಅನುಕೂಲವನ್ನು ಒದಗಿಸಿಕೊಡುವುದಕ್ಕೆ ಪ್ರಯತ್ನ ಮಾಡಬೇಕು.

ಇನ್ನೊಂದು ವಿಷಯ ಈಗಾಗಲೇ ಎಲ್ಲಾ ಹಿರಿಯ ಸದಸ್ಯರು ಮಾತನಾಡಿದ್ದಾರೆ. ರಸ್ತೆಗಳನ್ನು ರಿಪೇರಿ ಮಾಡುವ ಬಗ್ಗೆ. ನಮ್ಮ ದಾವಣಗೆರೆ ಮಾರುಕಟ್ಟೆ ಸಮಿತಿಯಲ್ಲಿ ಬೇಕಾದಷ್ಟು ಹಣ ಇದೆ. ದಾವಣಗೆರೆ ಪ್ರದೇಶ ಹೆಚ್ಚು ನೀರಾವರಿ ಪ್ರದೇಶವಾಗಿರುವುದರಿಂದ ರಸ್ತೆಗಳು ಬಹಳ ಹಾಳಾಗಿವೆ. ಆ ರಸ್ತೆಗಳಲ್ಲಿ ಮಾಲನ್ನು ತರುವುದಕ್ಕೆ ಬಹಳ ಕಷ್ಟವಾಗಿರುವುದರಿಂದ ರೈತರು ಅಲ್ಲಲ್ಲೇ ಅವರು ಬೆಳೆದಂತಹ ಮಾಲನ್ನು ಬೇರೆಯವರಿಗೆ ಮಾರಾಟ ಮಾಡುವುದಕ್ಕೆ ಯೋಚನೆ ಮಾಡುತ್ತಾರೆ. ಆದ್ದರಿಂದ ಕಡ್ಡಾಯವಾಗಿ ಹಳ್ಳಿಗಳ ರಸ್ತೆಗಳನ್ನು ರಿಪೇರಿ ಮಾಡುವುದಕ್ಕೂ ಕೂಡ ಅಧಿಕಾರಿಗಳಿಗೆ ಆದೇಶವನ್ನು ನೀಡಬೇಕು. ನಾನು ಹೇಳಿರತಕ್ಕ ಈ ಎಲ್ಲಾ ವಿಚಾರಗಳ ಬಗ್ಗೆ ಮಾನ್ಯ ಮಂತ್ರಿಗಳು ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತಾ, ಮಾನ್ಯ ಮಂತ್ರಿಗಳು ತಂದಿರತಕ್ಕ ತಿದ್ದುಪಡಿ ಮಸೂದೆಯನ್ನು ಬೆಂಬಲಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

೨-೦೦ ಪಿ. ಎಂ.

†ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಅಧ್ಯಕ್ಷರೆ, ಈ ದಿವಸ ಮಾನ್ಯ ಸಹಕಾರ ಮಂತ್ರಿಗಳಾದ ಚಾಲಪ್ಪನವರು ತಂದಿರತಕ್ಕ ಮಸೂದೆ ನಿಜವಾಗಿಯೂ ಪ್ರಗತಿದಾಯಕವಾದ ಮಸೂದೆ. ಈ ತಿದ್ದುಪಡಿ ಮಸೂದೆ ಬಹಳ ಪ್ರಾಮುಖ್ಯವಾದುದೆಂದು ಹೇಳುವುದಕ್ಕೆ ನಾನು ಅಪೇಕ್ಷೆಪಡುತ್ತೇನೆ.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ರೈತರು ಇಲ್ಲದಿದ್ದರೆ ಈ ದೇಶವಾಗಲೀ ಈ ರಾಜ್ಯವಾಗಲೀ ಉಳಿಯುಲಿಕ್ಕೆ ಸಾಧ್ಯವಿಲ್ಲವೆಂದು ಅನೇಕ ತಜ್ಞರು ಹೇಳಿದ್ದಾರೆ ಸಾಹಿತಿಗಳು ಕವಿಗಳು ಬರೆದಿದ್ದಾರೆ. ಅಂದರೆ ದಿನದಲ್ಲಿ ೨೪ ಗಂಟೆ ಹೊಲದಲ್ಲಿ ಗದ್ದೆಯಲ್ಲಿ ತೋಟದಲ್ಲಿ ಮಳೆ ಬಿಸಿಲು ಇದಾವುದನ್ನು ಲೆಕ್ಕಿಸದೆ ಯಾವರೀತಿಯಲ್ಲಿ ಉತ್ಪತ್ತಿಯನ್ನು ಮಾಡುತ್ತಾನೆ ಆ ರೈತನಿಗೆ ಯಾವುದೂ ಶಾಶ್ವತವಲ್ಲ. ರೈತ ಯಾವತ್ತೂ ಸ್ವತಂತ್ರನಲ್ಲ, ಅತಿವೃಷ್ಟಿಯಲ್ಲಿ ಅನಾವೃಷ್ಟಿಯಲ್ಲಿ ಸತ್ತು ಹೋಗುತ್ತಾನೆ. ಬರಗಾಲಕ್ಕೆ ತುತ್ತಾಗುತ್ತಾನೆ, ಎಂತಹ ಕಷ್ಟಗಳಿಗೆ ಎದುರಾದರೂ ತನ್ನ ಸಂಪತ್ತಿನ ಬೆಳೆಗಳನ್ನು ಬೆಳೆಸುತ್ತಾನೆ. ಇಷ್ಟೆಲ್ಲಾ ಕಷ್ಟಪಟ್ಟು ಬೆಳೆದಂತಹ ಬೆಳೆಗೆ ಸರಿಯಾದ ಕ್ರಯ ಸಿಗಬೇಕು, ತನಗೆ ಸರಿಯಾದ ಕ್ರಯ ಸಿಗಬೇಕೆನ್ನುವ ಭಾವನೆ ಇರತಕ್ಕದು ಬಹಳ ಮುಖ್ಯ. ಮಾನ್ಯ ಸಚಿವರು ತಿಳಿಸುವಂತಹ ಈ ರೀತಿಯಾದ ಮಾರ್ಕೆಟ್‌ಯಾರ್ಡ್‌ಗಳು ಇದ್ದರೆ ಬೆಳೆದಂತಹ ಮಾಲನ್ನು ಕೊಂಡುಹೋಗಿ ಅಲ್ಲಿ ಕೊಟ್ಟು ಅಲ್ಲಿ ಯಾವ ದಳ್ಳಾಳಿಗಳ ಕೈಗೆ ಸಿಗದಂತೆ ಮಾಡಿರುವ ಕಾರ್ಯ ನೋಡಿದರೆ ಬಹಳ ಸಂತೋಷವಾಗುತ್ತದೆ. ರೈತ ಎಷ್ಟು ಕಷ್ಟಪಟ್ಟು ಬೆಳೆಗಳನ್ನು ಬೆಳೆದಿದ್ದಾರೆ, ಆ ಶ್ರಮಕ್ಕೆ ತಕ್ಕಂಥ ಹಣ ಮಾರ್ಕೆಟ್‌ನಲ್ಲಿ ಅವನ ಕೈಗೆ ಬಿದ್ದರೆ ಮಾತ್ರ ಅವನಿಗೆ ಸಂತೋಷವಾಗುತ್ತದೆ. ದೊಡ್ಡ ದೊಡ್ಡ ದಳ್ಳಾಳಿಗಳು ಬಂದು ರೈತನಿಗೆ ಒಂದು ರೀತಿಯ ತೊಂದರೆ ಇತ್ತು. ಇದು ಎಲ್ಲರಿಗೂ ಗೊತ್ತಾಗಿ ೧೧೩ ಮಾರ್ಕೆಟ್‌ಗಳನ್ನು ೧೨ ಕೋಟಿ ರೂಪಾಯಿಗಳನ್ನು ಸಾಲ ತೆಗೆದುಕೊಂಡು ಕೆಲಸ ಮಾಡಿದ್ದಾರೆ. ೨೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇಷ್ಟೆಲ್ಲ ಮಾಡಿದುದರ ಉದ್ದೇಶ ಏನು ? ರೈತನಿಗೆ ಒಳ್ಳೆಯದಾಗಬೇಕು ಅವನಿಗೆ ಉಪಕಾರ ಆಗಬೇಕೆಂದು ಮಾಡಿದ್ದಾರೆ. ನಾನು ಹೇಳುವುದಾದರೆ ಈ ಸರ್ಕಾರ ಬಂದಮೇಲೆ ಸಹಕಾರ ಮಂತ್ರಿಗಳು ತಂದಂತಹ ಕೆಲವು ಪ್ರಗತಿದಾಯಕವಾದ ತಿದ್ದುಪಡಿಗಳಲ್ಲಿ ಇದು ಪ್ರಾಮುಖ್ಯವಾದ ತಿದ್ದುಪಡಿ ಮಸೂದೆಯೆಂದು ಹೇಳುತ್ತೇನೆ. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಆಸೆ ಮಾಡಬೇಕಾಗುತ್ತದೆ ರೈತರಿಗೆ, ಬಡವರಿಗೆ ಹಿಂದುಳಿದ ವರ್ಗಗಳವರಿಗೆ, ಶೋಷಣೆಗೆ ಒಳಗಾದಂತಹವರಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳವರಿಗೆ ಅಲ್ಪಸಂಖ್ಯಾತರಿಗೆ ಉಪಕಾರ ಮಾಡಬೇಕೆಂದು ಪುಸ್ತಕಗಳಲ್ಲಿ ಬರೆಯುವಂತಹದ್ದು, ಘೋಷಣೆ ಮಾಡುವಂತಹದ್ದು, ಪತ್ರಿಕೆಗಳಲ್ಲಿ ಹೇಳಿಕೆ ಕೊಡುವಂತಹದು ಇವುಗಳೆಲ್ಲ ಕಾರ್ಯರೂಪಕ್ಕೆ ಬರಬೇಕು. ಅದನ್ನು ಮಾಡಲಿಕ್ಕೆ ಮಾನ್ಯ ಜಾಲಪ್ಪನವರು ಹೊರಟಿದ್ದಾರೆ ಬಹಳ ಸಂತೋಷ. ನಾನು ೩೫ ವರ್ಷಗಳ ಕಾಲ ಸಹಕಾರ ಕ್ಷೇತ್ರದಲ್ಲಿ ಕೆಲಸಮಾಡಿ ನಿವೃತ್ತಿ ಹೊಂದಿದ್ದೇನೆ. ಸಹಕಾರ ಕ್ಷೇತ್ರದ ಒಳಗೆ ಎಲ್ಲಾ ಕಡೆಗಳಲ್ಲಿ ನನಗೆ ಚೆನ್ನಾಗಿ ಗೊತ್ತಿದೆ. ಇವೊತ್ತು ದಕ್ಷಿಣ ಕನ್ನಡ ಜಿಲ್ಲೆ ಸಹಕಾರಿ ಕ್ಷೇತ್ರದಲ್ಲಿ ಬಹಳ ಮುಂದೆ ಬಂದಿದೆ. ಅಲ್ಲೂ ಕೂಡ ಅನಾಹುತಗಳು ಆಗುತ್ತದೆ. ಮಾರ್ಕೆಟ್‌ಗಳಲ್ಲಿ ಬೇರೆ ಬೇರೆ ಯಾರ್ಡ್‌ಗಳಲ್ಲಿರತಕ್ಕ ಅಧಿಕಾರಿಗಳು ಲಕ್ಷಾಂತರ ಜನ ರೈತರ ಬೆವರು, ಕಣ್ಣೀರು, ರಕ್ತ ಸುರಿಸಿ ಕಡೆಗೆ ಏನೂ ಸಾರ್ಥಕವಾಗದೇ ರೈತರು ಕಣ್ಣೀರು ಸುರಿಸುವಂತಹ ಸಂದರ್ಭದಲ್ಲಿ ಅಧಿಕಾರಿಗಳು ಮಾಡತಕ್ಕ ಅನ್ಯಾಯ ಬಹಳ ದೊಡ್ಡದು ಅದರ ಬಗ್ಗೆ ಈ ಅಧಿಕಾರಿಗಳು ಏನು ಮಾಡುತ್ತಿದ್ದಾರೆ ? ಅಧಿಕಾರಿಗಳಿಗೆ ರೈತರ ಬಗ್ಗೆ ಕೂಲಿಕಾರರ ಬಗ್ಗೆ ಮಜದೂರ್ ದಲಿವರ ಬಗ್ಗೆ ಅವರಿಗೆ ಏನೂ ವಿಚಾರವೇ ಗೊತ್ತಿಲ್ಲ ಪ್ರಜಾಪ್ರಭುತ್ವ ಬಂದಿದೆ, ಸರ್ಕಾರಗಳು ಬರುತ್ತವೆ ಹೋಗುತ್ತವೆ. ನಾವು ಕೂಡ ಬರತಕ್ಕ ಜನರನ್ನು ಸ್ವೀಕಾರ ಮಾಡುತ್ತೇವೆ. ಲಕ್ಷಾಂತರ ರೂಪಾಯಿಗಳನ್ನು ಅಧಿಕಾರಿಗಳು ಮೋಸ ಮಾಡುತ್ತಾರೆ. ಮಾನ್ಯ ಶಿವನಂಜಪ್ಪನವರು ಅನೇಕ ವಿಚಾರಗಳನ್ನು ಹೇಳುತ್ತಿದ್ದರು. ಎಲ್ಲಾ ಕಡೆ ಹೇಳುತ್ತಾರೆ. ನೀವು ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ. ಮೋಸ ಮಾಡುವಂತಹರಿಗೆ ಬಹಳ ಉಗ್ರವಾದ ಶಿಕ್ಷೆಯನ್ನು ಕೊಡಬೇಕು. ಅನ್ಯಾಯ ಮಾಡಿದವರಿಗೆ ಶಿಕ್ಷೆ ಕೊಡದಿದ್ದರೆ ರೈತರಿಗೆ ನ್ಯಾಯ ಸಿಗುವುದಕ್ಕೆ ಹೇಗೆ ಸಾಧ್ಯ ? ಲಕ್ಷಾಂತರ ಜನ ರೈತರು ಇದ್ದರೆ ೧೦-೨೦-೧೦೦ ಜನ ಅಧಿಕಾರಿಗಳು ಅವರನ್ನು ಆಳುತ್ತಿದ್ದಾರೆ. ಎಲ್ಲಾ ದುರುಪಯೋಗವೂ ಅವರಿಂದ ಆಗುತ್ತದೆ. ಸಂಪನ್ಮೂಲ ಸರ್ಕಾರಕ್ಕೆ ಬರಲಿಲ್ಲವೆಂದು ಹೇಳುತ್ತಿದ್ದೀರಿ. ಎಲ್ಲಾ ಅಲ್ಲೇ ಸೋರಿಹೋಗುತ್ತಿದೆ. ತೂತು ಮಡಕೆಯಲ್ಲಿ ನೀರನ್ನು ಹಾಕಿದರೆ ಹೇಗೆ ಎಲ್ಲಾ ಸೋರಿಹೋಗುತ್ತದೆಯೋ ಅದೇರೀತಿ ಎಲ್ಲಾ ಅಲ್ಲೇ ಹರಿದು ಹೋಗುತ್ತದೆ. ಮೂಲಭೂತವಾಗಿ ಯಾವ ರೂಪದಲ್ಲಿ ಸೋರಿಹೋಗುತ್ತಿದೆ, ಎಲ್ಲಿ ಸೋರಿಹೋಗುತ್ತಿದೆ ಎಂದರೆ ಎಲ್ಲೆಲ್ಲಿ ತಿಂದು ಹಾಕುತ್ತಿದ್ದಾರೆಂದರೆ ಎಲ್ಲಿ ಎರಡು ಕಾಲು ಹೆಗ್ಗಣಗಳು ಇವೆಯೋ ಅಲ್ಲೆಲ್ಲಾ ಇದೇರೀತಿ ಆಗುತ್ತಿದೆ. ಅವುಗಳನ್ನು ಮಟ್ಟಹಾಕಬೇಕಾಗುತ್ತದೆ, ನೀವು ಎಷ್ಟೇ ಕಾರ್ಯಕ್ರಮಗಳನ್ನು ಮಾಡಿದರೂ ಸಂಪನ್ಮೂಲಗಳನ್ನು ರೂಢಿಸಿಕೊಂಡು ಒಳ್ಳೆಯ ಕೆಲಸ ಮಾಡುವುದಕ್ಕೆ ಹಣ ಇರುವುದಿಲ್ಲ. ನಾವು ಒಂದು ರಸ್ತೆಯನ್ನು ಕೇಳಿದರೆ ಹಣವಿಲ್ಲವೆಂದು ಹೇಳುತ್ತೀರಿ. ಯಾವುದಾದರೂ ನೀರಾವರಿ ಯೋಜನೆ ಮಾಡಬೇಕೆಂದು ಕೇಳಿದರೆ ಹಣವಿಲ್ಲವೆಂದು ಹೇಳುತ್ತೀರಿ. ಮೊದಲು ಈ ಹೆಗ್ಗಣಗಳು ಹಣ ತಿನ್ನುವುದನ್ನು ತಪ್ಪಿಸಬೇಕು. ಮೂಲಭೂತವಾಗಿ ಅದರ ಕಡೆಗೆ ತಾವು ಗಮನಹರಿಸಲಿಲ್ಲ, ಇದು ಪ್ರಾಮುಖ್ಯವಾದ ವಿಚಾರ. ಯಾವುದಾದರೂ ಒಂದು ಕಾನೂನನ್ನು ತಂದು ಅಧಿಕಾರಿಗಳನ್ನು

ಹತೋಟಿಗೆ ತರದಿದ್ದರೆ ನೀವು ಎಷ್ಟೇ ಒಳ್ಳೆಯ ಕೆಲಸಗಳನ್ನು ಮಾಡಿದರೂ ಅದರಿಂದ ಪ್ರಯೋಜನ ವಾಗುವುದಿಲ್ಲ, ರೈತರಿಗೆ ಉಪಕಾರವಾಗುವಂತಹ ಕೆಲಸವನ್ನು ಮಾಡಿದ್ದೀರಿ. ನಿಜವಾಗಿಯೂ ಬಹುಶಃ ನಾನು ತಿಳಿದುಕೊಂಡಹಾಗೆ ಸಹಕಾರ ಇಲಾಖೆಯಲ್ಲಿ ನೀವು ಬಂದಮೇಲೆ ಅನೇಕ ರೋಗಗಳಿಗೆ ಒಳ್ಳೆಯ ಇಂಜೆಕ್ಷನ್‌ಗಳನ್ನು ಕೊಟ್ಟಿದ್ದೀರಿ, ಅನೇಕ ಕಡೆಗಳಲ್ಲಿ ಮಾರುವೇಷದಲ್ಲಿ ಹೋಗಿ ಕೆಲಸ ಮಾಡಿದ್ದೀರಿ ಎಂದು ಕೇಳಿದ್ದೇನೆ. ಇಂತಹ ಕಾರ್ಯಕ್ರಮಗಳನ್ನು ಮಾಡಿ ಇವತ್ತು ಸಹಕಾರ ರಂಗದಲ್ಲಿ ಸುಧಾರಣೆಯಾಗಿದೆ. ಸಹಕಾರ ರಂಗದಲ್ಲಿ ನ್ಯಾಯ ಸಿಗುತ್ತಿದೆ. ಸಹಕಾರ ರಂಗದಲ್ಲಿ ಏನೇ ಮಾಡಿ ದರೂ ನಡೆಯುತ್ತದೆ ಎನ್ನುವ ಭಾವನೆ ಮೊದಲಿತ್ತು. ಸಹಕಾರಿ ರಂಗ ಸೋರಿಹೋಗುತ್ತಿತ್ತು, ಎರಡು ಕಾಲಿನ ಹೆಗ್ಗಣಗಳು ಸೇರಿಕೊಂಡು ತಿಂದುಹಾಕುತ್ತಿದ್ದವು. ರೈತರಿಗೆ ಬಹಳ ಅನ್ಯಾಯವಾಗು ತ್ತಿತ್ತು. ಅದು ಯಾವರೀತಿ ಆಗುತ್ತಿತ್ತು ಎನ್ನುವುದನ್ನು ನಾನು ಸಂದರ್ಭ ಬಂದರೆ ಹೇಳುತ್ತೇನೆ. ನನ್ನ ಹತ್ತಿರ ಎಲ್ಲಾ ತಪಶೀಲುಗಳುಂಟು. ಸಹಕಾರೀ ಕ್ಷೇತ್ರದಲ್ಲಿ ನಾನು ೩೫ ವರ್ಷಗಳ ಕಾಲ ಕೆಲಸ ಮಾಡಿ ನಿವೃತ್ತಿ ಹೊಂದಿದ್ದೇನೆ. ವಿದೇಶದಲ್ಲಿ ಸಹಕಾರಿ ರಂಗ ಬಹಳ ಹೆಚ್ಚು ಬೆಳೆದು ಮೇಲೆ ಬರಲಿಕ್ಕೆ ಕಾರಣ ಅಲ್ಲಿಯ ಸರ್ಕಾರ ಮುಖ್ಯ. ಸಹಕಾರೀ ರಂಗ ಬಹಳ ಮುಖ್ಯ. ನಮ್ಮ ದೇಶದಲ್ಲಿ ರಾಜ್ಯದಲ್ಲಿ ಸಹಕಾರೀ ರಂಗಕ್ಕೆ ಸರಿಯಾದ ಚಿಕಿತ್ಸೆ ಮಾಡತಕ್ಕ ಸರ್ಕಾರ ಇಲ್ಲದೇ ಇರುವುದರಿಂದ ಅವರೇ ಸ್ವಾವಲಂಭಿಗಳಾಗಿ ಸಹಕಾರಿ ರಂಗದಲ್ಲಿ ಅಧಿಕಾರಿಗಳು ಆದೇರೀತಿ ಇನ್ನಿತರ ಅನೇಕರು ಪಟ್ಟಭದ್ರಹಿತಾ ಸಕ್ತಿಗಳು ಎಂದು ಹೇಳಬಹುದು. ಈ ಎಲ್ಲಾ ಪಟ್ಟಭದ್ರಹಿತಾಸಕ್ತಿಗಳು ಆ ಸಂಸ್ಥೆಯಲ್ಲಿರುವುದರಿಂದ ಎಂದರೆ ಅಪ್ಪ ಮಗ ಅಣ್ಣ–ತಮ್ಮ ಸೊಸೆ ಹೆಂಡತಿ ಹೀಗೆ ಸಂಬಂಧೀಕರನ್ನು ಸದಸ್ಯರನ್ನಾಗಿ ಮಾಡಿ ಕೊಂಡು ನಡೆಯುವಂತಹ ಎಷ್ಟೋ ಸಂಸ್ಥೆಗಳು ಉಂಟು. ಆದ್ದರಿಂದ ಇವತ್ತು ಮಾರ್ಕೆಟ್ ಕಾಯಿದೆಗೆ ತಿದ್ದುಪಡಿಯನ್ನು ಏನು ತಂದಿದ್ದೀರೆ ಅದನ್ನು ಯಾವ ರೈತರೂ ಮರೆಯತಕ್ಕದ್ದಲ್ಲ. ರೈತ ಅಂದರೆ ಏನು ಅದರ ಬಗ್ಗೆ ಒಂದು ಕವನ ಇದೆ. ಅದು ಈ ರೀತಿ ಇದೆ.

ರೈತನು ಬಿಟ್ಟರೆ ಉಳಿಯದು ದೇಶ
ರೈತನೆ ದೇಶದ ಹಿರಿಮೆಯ ಕೋಶ
ರೈತನ ಉಳಿಸಿರಿ, ಪೊರೆಯಲಿ ಈಶ
ರೈತನು ಸೋತರೆ ದೇಶಕ್ಕೆ ನಾಶ,

ಇಷ್ಟು ಹೇಳಿ ನಾನು ಮಾತನಾಡಲು ಅವಕಾಶಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ. ಟಿ. ಜಯಕುಮಾರ್ (ನಂಜನಗೂಡು).—ಮಾನ್ಯ ಅಧ್ಯಕ್ಷರೆ, ಮಾನ್ಯ ಸಹಕಾರ ಸಚಿವರು ತಂದಿರತಕ್ಕ ತಿದ್ದುಪಡಿ ಮಸೂದೆಯನ್ನು ನಾನು ಸ್ವಾಗತಿಸುತ್ತೇನೆ. ನಾನು ಈ ಮಸೂದೆಯ ಬಗ್ಗೆ ಕೆಲವು ವಿಚಾರಗಳನ್ನು ಹೇಳುತ್ತಾ ಇದು ಕ್ರಾಂತಿಕಾರಕವಾದ ತಿದ್ದುಪಡಿ ಮಸೂದೆಯೆಂದು ಹೇಳಿದರೆ ತಪ್ಪಾಗಲಾರದು. ಇದಕ್ಕೆ ನಿದರ್ಶನ ಈ ಮನೆಯ ಇತಿಹಾಸದಲ್ಲಿಯೇ ಮೊಟ್ಟಮೊದಲನೆಯದಾಗಿ ವಿರೋಧಪಕ್ಷದವರು ಬಹಳ ವಿಶ್ವಾಸದಿಂದ ಸ್ವಾಗತಿಸಿರುವುದನ್ನು ನೋಡಿದರೆ ಇದು ಕ್ರಾಂತಿಕಾರಕವಾದ ತಿದ್ದುಪಡಿ ಮಸೂದೆಯೆಂದು ಹೇಳುತ್ತೇನೆ. ವಿರೋಧಪಕ್ಷದ ವರು ಅಲ್ಲದೆ ರೈತ ಸಂಘದ ಪದಾಧಿಕಾರಿಗಳು ಮುಕ್ತಕಂಠದಿಂದ ಈ ಮಸೂದೆಯನ್ನು ಸ್ವಾಗತಿಸಿದ್ದಾರೆ ಎಲ್ಲರೂ ಕೂಡ ಸ್ವಾಗತಿಸತಕ್ಕ ಕ್ರಾಂತಿಕಾರವಾದ ತಿದ್ದುಪಡಿ ಮಸೂದೆ. ಇಲ್ಲಿರತಕ್ಕ ಶಾಸಕರು ಅಧಿಕಾರಿಗಳು ಪ್ರತಿಕಾರ್ಕರ್ತರು ಎಲ್ಲರೂ ಕೂಡ ಒಂದಲ್ಲ ಒಂದು ರೀತಿಯಲ್ಲಿ ರೈತರ ಮಕ್ಕಳೇ ಹೀಗಿದ್ದರೂ ಇಷ್ಟು ದಿವಸಗಳಿಂದ ರೈತರ ಬಗ್ಗೆ ಏತಕ್ಕೆ ಚಿಂತನೆ ಮಾಡಲಿಲ್ಲ ? ಈ ಮಸೂದೆಯನ್ನು ತಂದಿರತಕ್ಕ ಜಾಲಪ್ಪನವರು ಕೂಡ ರೈತ ಕುಟುಂಬದಿಂದ ಬಂದಿರತಕ್ಕವರು. ಶತ ಶತಮಾನಗಳಿಂದ ಶೋಷಣೆಗೆ ಒಳಗಾಗಿದ್ದ ರೈತನ ಪಾಲಿಗೆ ಈ ಮಸೂದೆ ವರವಾಗಿದೆ. ಇದರಿಂದ ರೈತನ ಉದ್ಧಾರ ವಾಗುತ್ತದೆ. ರೈತನಿಗೆ ಇದುವರೆಗೂ ಪ್ರತಿ ಹೆಜ್ಜೆ ಹೆಜ್ಜೆಗೂ ದಳ್ಳಾಳಿಗಳ ಶೋಷಣೆ ಇರುತ್ತಿತ್ತು. ಈಗ ದಳ್ಳಾಳಿಗಳನ್ನು ಕಿತ್ತುಹಾಕಲಾಗಿದೆ. ರೈತ ಹೇಗೆ ಕಷ್ಟಕ್ಕೆ ಸಿಕ್ಕಿಕೊಳ್ಳುತ್ತಾನೆಂದರೆ ಅವನು ವ್ಯವಸಾಯ ಮಾಡುವ ಪ್ರಾರಂಭದಲ್ಲಿ ಸಾಕಷ್ಟು ಹಣವಿಲ್ಲದೆ ಇರುತ್ತಾನೆ. ಅಂತಹ ಸಂದರ್ಭಗಳಲ್ಲಿ ಒಂದು ಕ್ವಿಂಟಾಲ್ ಭತ್ತಕ್ಕೆ ೧೨೦ ರೂಪಾಯಿಗಳಂತೆ ಮೊದಲೇ ಸಾಲ ಪಡೆದುಕೊಳ್ಳುತ್ತಾನೆ. ಅವನು ಮಾರಾಟ ಮಾಡುವಂತಹ ಸಂದರ್ಭದಲ್ಲಿ ಕ್ವಿಂಟಾಲ್ ಭತ್ತಕ್ಕೆ ೧೮೦ ರಿಂದ ೨೦೦ ರೂಪಾಯಿಗಳಿದ್ದರೂ ಕಷ್ಟಪಟ್ಟು ಬೆಳೆದಂತಹ ಭತ್ತವನ್ನು ೧೨೦ ರೂಪಾಯಿಗಳಿಗೆ ಕೊಡಬೇಕಾಗುತ್ತದೆ. ದಳ್ಳಾಳಿಗಳ ಮುಖಾಂತರ ರೈತ ಸಾಲಗಾರನಾಗುತ್ತಾನೆ. ಅನೇಕ ವಿಚಾರಗಳಲ್ಲಿ ರೈತ ಹೆಜ್ಜೆ ಹೆಜ್ಜೆಗೂ ಶೋಷಣೆಗೆ

ಒಳಗಾಗುತ್ತಾನೆ. ಇಂತಹ ಒಂದು ತಿದ್ದುಪಡಿ ಮಸೂದೆ ಬಂದದ್ದು ಸ್ವಾಗತಾರ್ಹ. ರೈತ ತಾನು ಬೆಳೆದಂತಹ ತರಕಾರಿಗಳನ್ನು ಮಾರ್ಕೆಟ್‌ಗೆ ತೆಗೆದುಕೊಂಡು ಬರುತ್ತಾನೆ. ಅಲ್ಲಿ ಅವನಿಗೆ ಸರಿಯಾದ ಬೆಲೆ ಸಿಗುವುದಿಲ್ಲ. ಹೋದಷ್ಟು ಬೆಲೆಗೆ ಹರಾಜು ಹಾಕಿದಾಗ ಕೊನೆಗೆ ಅವನಿಗೆ ಸರಿಯಾದ ಬೆಲೆ ಸಿಗುವುದಿಲ್ಲ. ಹೋದಷ್ಟು ಬೆಲೆಗೆ ಹರಾಜು ಹಾಕಿದಾಗ ಕೊನೆಗೆ ಅವನಿಗೆ ಗಾಡಿ ಬಾಡಿಗೆ ಸಹ ಹುಟ್ಟುವುದಿಲ್ಲ. ತಂದಂತಹ ತರಕಾರಿಯನ್ನು ಕೊಳೆತುಹೋಗುತ್ತದೆಂದು ಹೋದಷ್ಟಕ್ಕೆ ಹರಾಜು ಹಾಕುತ್ತಾನೆ ಕೊನೆಗೆ ದಾನ ಮಾಡಿದಂತಹ ಪ್ರಸಂಗಗಳು ರಾಜ್ಯದಲ್ಲಿ ನಡೆದಿವೆ. ಈ ದಳ್ಳಾಳಿಗಳಿಂದಾಗಿ ಈ ಕಡೆ ಗ್ರಾಹಕರಿಗೂ ಸುಲಭ ಬೆಲೆಯಲ್ಲಿ ಮಾಲು ದೊರೆಯುತ್ತಿಲ್ಲ, ಆ ಕಡೆ ಉತ್ಪಾದನೆ ಮಾಡತಕ್ಕ ರೈತರಿಗೂ ಲಾಭವಿಲ್ಲ. ಆದರೆ ದಳ್ಳಾಳಿ ಮಾತ್ರ ಸುಖಜೀವನ ಮಾಡುತ್ತಿದ್ದಾನೆ. ಬಹುಶಃ ಈ ರಾಜ್ಯದಲ್ಲಿರತಕ್ಕ ಕಮಿಷನ್ ಏಜೆಂಟ್ಸ್ ಏನಿದ್ದಾರೆ ಅವರಲ್ಲಿರತಕ್ಕ ವೈಭೋಗ, ಕಾರು, ಮನೆ ಶ್ರೀಮಂತಿಕೆ ನೋಡಿದರೆ ಎಲ್ಲರಿಗೂ ಆಶ್ಚರ್ಯವಾಗುತ್ತದೆ. ಅವರು ದಿಢೀರನೆ ಹೇಗೆ ಶ್ರೀಮಂತರಾಗಿರುತ್ತಾರೆ? ಅವರು ಬರೀ ಫೋನ್‌ನಲ್ಲೇ ಕೋಟ್ಯಾಂತರ ರೂಪಾಯಿಗಳ ವ್ಯವಹಾರ ಮಾಡುತ್ತಾರೆ. ಹಣ ಕೊಡಬೇಕಾಗಿಲ್ಲ, ಹಣ ತೆಗೆಯಬೇಕಾಗಿಲ್ಲ. ಯಾವ ರೈತ ಕಷ್ಟಪಟ್ಟು ಬೆಳೆದು ಮಾಲು ತರುತ್ತಾನೆ ಅದರ ಮೇಲೆ ಯಾವುದೇ ಬಂಡವಾಳವಿಲ್ಲದೇ ಹಣ ಮಾಡಿಕೊಳ್ಳುತ್ತಾನೆ. ಕಷ್ಟಪಡುತ್ತಿರುವುದು ರೈತ, ಸುಖಪಡುತ್ತಿರುವುದು ದಳ್ಳಾಳಿ. ಆದ್ದರಿಂದ ಈ ಮಸೂದೆ ತಂದಿರುವುದು ಪ್ರಶಂಸನೀಯ. ಜೊತೆಗೆ ಜಾಲಪ್ಪನವರು ಕಾನೂನು ತಂದರೆ ಮಾತ್ರ ಸಾಧ್ಯವಾಗುವುದಿಲ್ಲ. ಅಧಿಕಾರಿಗಳು ಹಾಗೂ ದಳ್ಳಾಳಿಗಳು ಜೊತೆ ಸೇರಿಕೊಂಡು, ಈ ಸರ್ಕಾರಕ್ಕೆ ಕೆಟ್ಟ ಹೆಸರನ್ನು ತರಬೇಕೆಂದು ಮಾಡಬಹುದು. ಸರ್ಕಾರ ಚಾಪೆ ಕೆಳಗೆ ನುಸುಳಿದರೆ, ಅಧಿಕಾರಿಗಳು ಹಾಗೂ ದಳ್ಳಾಳಿಗಳು ರಂಗೋಲಿ ಕೆಳಗೆ ನುಸುಳಬಹುದು. ಇಂತಹ ಅಧಿಕಾರಿಗಳ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳುವುದಕ್ಕೆ ಮಾನ್ಯ ಜಾಲಪ್ಪನವರು ಹಿಂಜರಿಯುವುದಿಲ್ಲ. ಇವೊತ್ತು ಏನು ಸೆಸ್ ಹಣ ಬರುತ್ತದೆ ಅದರಿಂದ ರೈತರು ಉಪಯೋಗಿಸುವ ರಸ್ತೆಗಳ ರಿಪೇರಿಗೆ ಉಪಯೋಗಿಸುವುದಕ್ಕೆ ಅವಕಾಶವಿಲ್ಲವೆಂದು ಹೇಳಿದರು. ಅವಕಾಶವಿಲ್ಲದಿದ್ದರೆ ಚಿಂತೆ ಇಲ್ಲ. ಆದರೆ ಬಡ ರೈತರ ಜಾನುವಾರುಗಳು ಏನಿವೆ ಅವುಗಳ ಆರೋಗ್ಯದ ಕಡೆ ಗಮನಕೊಟ್ಟು ಜಿಲ್ಲಾಪರಿಷತ್ ಕೇಂದ್ರ ಹಾಗೂ ಮಂಡಲ್ ಪಂಚಾಯತ್ ಸೆಂಟರ್‌ಗಳಲ್ಲಿ ಪಶುವೈದ್ಯಶಾಲೆಗಳನ್ನು ಕಟ್ಟಿಸುವುದಕ್ಕೆ ಹಣವನ್ನು ಉಪಯೋಗಿಸಬೇಕೆಂದು, ಈ ಬಗ್ಗೆ ಮಾನ್ಯ ಜಾಲಪ್ಪನವರು ಯೋಚನೆ ಮಾಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ರಾಮಯ್ಯ (ಹಿರಿಯೂರು).—ಸನ್ಮಾನ್ಯ ಅಧ್ಯಕ್ಷರೇ, ಇವೊತ್ತು ಆರ್.ಎಂ.ಸಿ. ಯನ್ನು ವರ್ತಕರು ಕಟ್ಟಬೇಕು ಎನ್ನತಕ್ಕ ಕಾನೂನನ್ನು ಏನು ತಂದಿದ್ದಾರೆ ಇದು ಬಹಳ ಸ್ವಾಗತಾರ್ಹವಾದುದು. ರಾಷ್ಟ್ರಕವಿ ಕುವೆಂಪುರವರು ಒಂದು ಮಾತನ್ನು ಹೇಳಿದರು. ''ರೈತರೆತ್ತರಕ್ಕೆ ಎಲ್ಲರೂ ಜಿಗಣೆಗಳು''. ಯಾರು ಶೋಷಣೆಗೆ ಒಳಪಟ್ಟಿಲ್ಲ ಎನ್ನುವುದು ಬಹಳ ಕಷ್ಟದ ಮಾತಾಗುತ್ತದೆ. ಎಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಶೋಷಣೆ ಮಾಡುತ್ತಿದ್ದಾರೆನ್ನುವುದಕ್ಕೆ ಒಂದು ಮಾತನ್ನು ಹೇಳುತ್ತೇನೆ. ಇವತ್ತು ರೈತ ಕಷ್ಟಪಟ್ಟು ಬೆವರು ಸುರಿಸಿ ಉತ್ಪಾದನೆ ಮಾಡಿದ ಮಾಲನ್ನು ಮಾರುಕಟ್ಟೆಗೆ ಕೊಂಡೊಯ್ದರೆ ಅಲ್ಲಿ ಆತನಿಗೆ ಕೊಡುವ ಬಿಲ್ ಬಿಳಿ ಹಾಳೆಯದು. ಅಲ್ಲಿ ಸುಂಕ ತಪ್ಪಿಸಲು ಏನೇನು ನಡೆಯುತ್ತದೆ ಅದೆಲ್ಲಾ ಕರಾಳವಾಯ. ಇದನ್ನು ವ್ಯಾಪಾರ ಮಾಡತಕ್ಕ ವರ್ತಕರೇ ಕೊಡಬೇಕೆನ್ನುವ ಶಾಸನವನ್ನು ತಂದಿದ್ದೀರಿ. ಶಾಸನವೇನೋ ಬಹಳ ಚೆನ್ನಾಗಿದೆ. ಆದರೆ ಇದು ಅನುಷ್ಠಾನವಾಗುವ ಬಗ್ಗೆ ಕಾದು ನೋಡಬೇಕು. ಇವೊತ್ತು ವರ್ತಕರ ಬಗ್ಗೆ ಸರಿಯಾದ ಹಿಡಿತವಿಲ್ಲದಿದ್ದರೆ ಕಡಿವಾಣವಿಲ್ಲದ ಹುಚ್ಚು ಕುದುರೆಯಂತಾಗುತ್ತಾರೆ. ಈ ವರ್ತಕರು ಮುಷ್ಕರ ಮಾಡಿದ್ದನ್ನು, ರೈತರು ಮಾರುಕಟ್ಟೆಗೆ ಪ್ರವೇಶಿಸಿದಂತೆ ದೊಡ್ಡ ದೊಡ್ಡ ಅಡಚಣೆಗಳನ್ನು ತಂದಿದ್ದನ್ನು ನಾವು ನೋಡಿದ್ದೇವೆ. ಇಂತಹ ಸಮಯದಲ್ಲಿ ಸರ್ಕಾರ ನಿಶ್ಚಲ ಮನಸ್ಸಿನಿಂದ ಮುಂದೆ ಬಂದು ರೈತರಿಗಾಗುತ್ತಿದ್ದ ಅನ್ಯಾಯವನ್ನು ನಿವಾರಣೆ ಮಾಡಬೇಕು. ರೈತರು ತಮ್ಮ ಉತ್ಪಾದನೆಯನ್ನು ಮಾರುಕಟ್ಟೆಗೆ ಕೊಂಡೊಯ್ದು ಅಲ್ಲಿ ಕೊಟ್ಟ ಮೇಲೆ ತಯಾರಾದ ಬಿಲ್ಲನ್ನು ಪಾವತಿ ಮಾಡುವುದಕ್ಕೆ ಹಲವಾರು ತಿಂಗಳು ವರ್ತಕರು ಓಡಾಡಿಸುತ್ತಿದ್ದಾರೆ. ಇವೊತ್ತು ನಾಳೆ ಎಂದು ರೈತ ಓಡಾಡತಕ್ಕ ಕಷ್ಟವನ್ನು ಅನುಭವಿಸಿದ್ದಾನೆ. ಆದರೆ ಈ ಕಾನೂನಿನಿಂದ ರೈತರು ಬೆಳೆದ ಬೆಳೆಗೆ ಹಣ ದೊರೆತು ಅವರ ಕಷ್ಟಗಳು ನಿವಾರಣೆಯಾಗುವುದಕ್ಕೆ ಸಹಾಯಕವಾಗುತ್ತದೆಂದು ನಾನು ಭಾವಿಸುತ್ತೇನೆ. ರೈತ ತನ್ನ ಮಾಲನ್ನು ತನ್ನ ಗಾಡಿಯಲ್ಲಿ ತರುತ್ತಾನೆ. ಆತ ಮಾರುಕಟ್ಟೆಗೆ ಬಂದಾಗ ಅಲ್ಲಿ ತನ್ನ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಗಾಡಿ ಹಾಗೂ ಎತ್ತನ್ನು ಒಂದು ಕಡೆ ಬಿಡಬೇಕಾಗುತ್ತದೆ. ಮಾರುಕಟ್ಟೆಯಲ್ಲಿನ ಅವ್ಯವಸ್ಥೆಯನ್ನು ತಾವೆಲ್ಲರೂ ನೋಡಿರಬಹುದು. ನಮ್ಮ ಹಿರಿಯೂರಿನ ರೈತಭವನ ಇನ್ನೂ ಪೂರ್ಣಗೊಳ್ಳಬೇಕಾಗಿದೆ. ಮಾಲನ್ನು ತಂದ ರೈತ ಮತ್ತು ಆತನ ಎತ್ತುಗಾಡಿಗಳಿಗೆ ಅಲ್ಲಿ ತಂಗುವ ವ್ಯವಸ್ಥೆ ಆಗಬೇಕಾಗಿದೆ. ನಮ್ಮಲ್ಲಿ ಕುಡಿಯುವ ನೀರಿನ ವ್ಯವಸ್ಥೆ, ಗಾಡಿ, ದನಗಳಿಗೆ ನೆರಳಿನ ವ್ಯವಸ್ಥೆಯಾಗಬೇಕಾಗಿದೆ. ನಮ್ಮಲ್ಲಿ ಬಹುತೇಕ ಸರಕು ತೆಗೆದುಕೊಳ್ಳುವ ಜಾಗದಲ್ಲಿ ಮೂಗು ಮುಚ್ಚಿಕೊಳ್ಳತಕ್ಕ ಪ್ರಸಂಗ ಇದೆ. ಇನ್ನೂ ಅಲ್ಲಿ ಮಳಿಗೆಗಳು ನಿರ್ಮಾಣವಾಗಿಲ್ಲ. ಓಪನ್ನಾಗಿ ಆಹಾರಧಾನ್ಯ ಮಾರಾಟವಾಗುತ್ತಿದೆ. ಸರ್ಕಾರ ಇದನ್ನು ತಪ್ಪಿಸಬೇಕು. ಸರ್ಕಾರ ಈ ಎಲ್ಲಾ ಅನಿಷ್ಟಪದ್ಧತಿಯನ್ನು ತಪ್ಪಿಸಬೇಕು. ಸರ್ಕಾರವನ್ನು ದುರ್ಬಲಗೊಳಿಸುವುದಕ್ಕೆ ದುಷ್ಟಶಕ್ತಿಗಳು ತಲೆ ಎತ್ತುತ್ತವೆ. ಸಂಪನ್ಮೂಲಗಳನ್ನು ದುರ್ಬಲಗೊಳಿಸಿ ತಮ್ಮ ಶಕ್ತಿ ಪ್ರದರ್ಶನ ಮಾಡುತ್ತವೆ. ಬರತಕ್ಕ ಉತ್ಪನ್ನ ಕೊರತೆಯಾದಾಗ ಯಾವ ಸರ್ಕಾರ ಕೂಡಾ ತನ್ನನ್ನು ಅವಲಂಬಿಸಿರತಕ್ಕ ಜನರಿಗೆ ಸಹಾಯ ಮಾಡಬೇಕೆಂದರೂ ನೇರವಾಗಿ ಸಹಾಯ ಮಾಡುವುದಕ್ಕಾಗುವುದಿಲ್ಲ. ಇದಕ್ಕೆ ಕೇವಲ ವರ್ತಕರು ಒಂದೇ ಕಾರಣರು ಅಲ್ಲ. ಇದರಲ್ಲಿ ಅಧಿಕಾರಿಗಳೂ ಶಾಮೀಲಾಗಿದ್ದಾರೆಂದು ನಾನು ಭಾವಿಸುತ್ತೇನೆ. ಬಹುಶಃ ಆರ್.ಎಂ.ಸಿ. ಯಲ್ಲಿ ಇರತಕ್ಕ ಇಂದಿನ ಅಧಿಕಾರಿಗಳು ಪ್ರಾರಂಭದಲ್ಲಿ ಸೇವೆಗೆ ಸೇರಿದಾಗ ಇದ್ದುದ್ದಕ್ಕಿಂತ ಇವತ್ತು ಸೇವೆಯಲ್ಲಿ ಮುಂದುವರಿದ ಮೇಲೆ ಗಳಿಸಿರತಕ್ಕ ಆಸ್ತಿಯನ್ನು ನೋಡಿದರೆ ಅವರಲ್ಲಿ ಎಂತಹ ಭ್ರಷ್ಟಾಚಾರ ನಡೆದಿದೆ, ಸರ್ಕಾರಕ್ಕೆ ಎಷ್ಟು ಇವರು ಮೋಸ ಮಾಡಿದ್ದಾರೆ ಎಂಬುದನ್ನು ಯಾವ ನಿಗೂಢತೆಯೂ ಇಲ್ಲದೇ ನೋಡಬಹುದು. ಆವತ್ತು ಸೈಕಲ್‌ನಲ್ಲಿ ಓಡಾಡುತ್ತಿದ್ದವರು ಇವತ್ತು ಬುಲೆಟ್‌ನಲ್ಲಿ ಓಡಾಡುತ್ತಿದ್ದಾರೆ. ಬಾಡಿಗೆ ಮನೆಯಲ್ಲಿದ್ದವರು ಮಹಲುಗಳನ್ನು ಕಟ್ಟಿದ್ದಾರೆ. ಸರ್ಕಾರಕ್ಕೆ ಬರುವ ಸುಂಕವನ್ನು ಮೋಸ ಮಾಡಿ ತಾವೇ ಬಳಸಿಕೊಂಡಿದ್ದಾರೆ. ಸರ್ಕಾರ ಇದಕ್ಕೆ ಕಡಿವಾಣ ಹಾಕಬೇಕು. ಇಲ್ಲದಿದ್ದರೆ ಯಾವ ಕೆಲಸವೂ ಆಗುವುದಿಲ್ಲ. ಜೊತೆಗೆ ಆವರು ದನಕರುಗಳನ್ನು ಏನು ಮಾರ್ಕೆಟ್ಟಿಗೆ ತೆಗೆದುಕೊಂಡು ಹೋಗಿದ್ದಾರೆ ಅವಕ್ಕೆ ದೊಡ್ಡ ರೋಗ ಕಾಣಿಸಿಕೊಂಡಿದೆ. ಬರುವ ಮಾರ್ಕೆಟ್ ಸೆಸ್‌ನಿಂದ ಪ್ರತ್ಯೇಕವಾಗಿ ದನಕರುಗಳ ಆಸ್ಪತ್ರೆಯನ್ನು ಮಾರ್ಕೆಟ್ ಯಾರ್ಡ್ ಸಮೀಪದಲ್ಲಿ ಪ್ರಾರಂಭ ಮಾಡಬೇಕು. ಜೊತೆಗೆ ಬಹುತೇಕ ಹಳ್ಳಿಗಳಿಗೆ ತಮ್ಮ ಮಾಲನ್ನು ಮಾರುಕಟ್ಟೆಗೆ ತರಲು ಸರಿಯಾದ ರಸ್ತೆಗಳು ಇಲ್ಲ. ಆದ್ದರಿಂದ ಅಲ್ಲಿ ಇರುವ ರಸ್ತೆಗಳನ್ನು ದುರಸ್ತಿ ಮಾಡಬೇಕಾಗುತ್ತದೆ. ಇದನ್ನೆಲ್ಲಾ ಗಮನದಲ್ಲಿ ಇಟ್ಟುಕೊಂಡು ಈ ಒಂದು ಕಾನೂನಿನ ಸ್ಪಿರಿಟನ್ನು ಪೂರ್ಣ ಫಲಪ್ರದ ಮಾಡುವುದಕ್ಕೆ ಸಂಬಂಧಪಟ್ಟ ಮಂತ್ರಿಯವರಿಗೆ ಆಸಕ್ತಿ ಇದೆ. ಸ್ವಯಂ ಅವರೂ ಒಬ್ಬ ರೈತರಾಗಿರುವುದರಿಂದ ನೊಂದು, ಬೆಂದು ಹೊರಗೆ ಬಂದು ಕಾನೂನು ರೂಪದಲ್ಲಿ ಇದನ್ನು ತಂದಿದ್ದಾರೆ. ಹಿಂದೆ ಕೇಂದ್ರದವರು ಇಂತಹದ್ದೇ ಒಂದು ಕಾನೂನು ತಂದಿದ್ದರು. ಹಿಂದೆ ಲೆವಿ ವಸೂಲಿಯನ್ನು ಮಾಡತಕ್ಕ ಸಂದರ್ಭದಲ್ಲಿ ರೈತರಿಂದ ವಸೂಲಿ ಮಾಡುತ್ತಿದ್ದುದು ಸರಿಕಾಣಲಿಲ್ಲ. ಅದನ್ನು ಮಿಲ್ ಪಾಯಿಂಟ್‌ನಲ್ಲಿ ಪಡೆಯಬೇಕೆಂದು ಗೊತ್ತುಮಾಡಿದರು. ಅಂತಹದ್ದೇ ಒಂದು ಕಾನೂನು ಇದು ಆಗಿರುವುದರಿಂದ ಇದನ್ನು ಸ್ವಾಗತ ಮಾಡುತ್ತಾ ಇದನ್ನು ಅನುಷ್ಠಾನದಲ್ಲಿ ತರುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನ ಮಾಡಬೇಕೆಂದು ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ.ಎ. ಉಪ್ಪಿನ್ (ಕುಂದಗೋಳ್).—ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಸಹಕಾರ ಸಚಿವರಾದ ಶ್ರೀ ಆರ್. ಎಲ್. ಜಾಲಪ್ಪನವರು ತಂದಿರತಕ್ಕ ಮಾರ್ಕೆಟ್ ವಿಧೇಯಕವನ್ನು ಸ್ವತಃ ವರ್ತಕನಾಗಿ ನಾನು ತುಂಬು ಹೃದಯದಿಂದ ಸ್ವಾಗತಿಸುತ್ತಾ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಈವರೆಗೆ ವಿಧೇಯಕದ ಮೇಲೆ ಮಾತನಾಡಿದಂಥ ಎಲ್ಲಾ ಸದಸ್ಯರು ಈ ವಿಧೇಯಕವನ್ನು ಸ್ವಾಗತಿಸುತ್ತಾ ಇದನ್ನು ರಾಜ್ಯದ ವ್ಯಾಪಾರಸ್ಥರು ಬಹಳ ವಿರೋಧ ಮಾಡುತ್ತಿದ್ದಾರೆ, ಸರ್ಕಾರದ ಮೇಲೆ ಬಹಳ ಒತ್ತಾಯ ತಂದಿದ್ದಾರೆಂದು ಒತ್ತಿ ಹೇಳಿದ್ದಾರೆ. ನಾನು ವರ್ತಕನಾಗಿ ಹೇಳುತ್ತೇನೆ, ಈ ಕಾಯಿದೆಯಿಂದ ವರ್ತಕರಾದವರಿಗೆ, ಕಮೀಷನ್ ಏಜೆಂಟರಿಗೆ ಏನೂ ನಷ್ಟ ಇಲ್ಲವೆಂದು. ರೈತರಿಂದ ವಳ್ಳಾಳಿ ಹಣ ತೆಗೆದುಕೊಳ್ಳುವುದಕ್ಕೆ ಸಚಿವರು ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಮಗುವಿಗೆ ಹಸಿವೆ ಆದಾಗ ಅಪ್ಪನ ಕೂಡ ಊಟ ಮಾಡಿದರೂ ಅಷ್ಟೆ, ಅವ್ವನ ಕೂಡ ಊಟ ಮಾಡಿದರೂ ಅಷ್ಟೆ. ಅದರಲ್ಲೇನು ವ್ಯತ್ಯಾಸ ಇಲ್ಲ. ಆದರೆ ವ್ಯಾಪಾರಸ್ಥರು ಏತಕ್ಕೆ ವಿರೋಧ ಮಾಡಿದರು ಎಂದರೆ ಇದರಲ್ಲಿ ಒಂದು ತತ್ವ ಇದೆ. ಕಮೀಷನ್ ಏಜೆಂಟರು ಎಂದು ಏನಿದ್ದಾರೆ ಅವರಂತೆಯೇ ಎಪಿಎಂಸಿ. ಟ್ರೇಡರ್ಸ್ ಇರುತ್ತಾರೆ. ಅವರಿಗೂ ಲೈಸೆನ್ಸ್ ಕೊಡುತ್ತಿದ್ದೇವೆ. ಅವರೂ ಸಹ ಒಂದು ರೀತಿಯಲ್ಲಿ ಕಮೀಷನ್

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಏಜೆಂಟರಾಗಿ ವರ್ತಿಸುತ್ತಿದ್ದಾರೆ. ಮಾರ್ಕೆಟ್ಟಿಗೆ ಬಂದಂತಹ ಮಾಲನ್ನು ಹೊರ ರಾಜ್ಯಗಳಲ್ಲಿರತಕ್ಕ ಓನರ್ ಸಲುವಾಗಿ ಟ್ರೇಡರ್ ಟೆಂಡರ್ ಹಾಕಿ ಆ ಮಾಲನ್ನು ಖರೀದಿ ಮಾಡುತ್ತಾನೆ. ಈ ಒಂದು ವ್ಯವಹಾರವನ್ನು ತಪ್ಪಿಸುವುದಕ್ಕೆ ಮೂಲ ಮಾಲಿಗೆ ೨ ರೂಪಾಯಿಗಳ ದಳ್ಳಾಳಿ ಹಾಕುತ್ತಾರೆ. ಈ ತಿದ್ದುಪಡಿ ತಂದಿರುವುದರಿಂದ ರೈತ ಕೊಡತಕ್ಕ ೨ ರೂಪಾಯಿಗಳ ದಳ್ಳಾಳಿಯನ್ನು ಅವನೇ ಕೊಡುವುದರಿಂದ ಹೊರರಾಜ್ಯದಿಂದ ಬಂದು ಖರೀದಿ ಮಾಡತಕ್ಕ ವ್ಯಾಪಾರಸ್ಥರು ೨ ರೂಪಾಯಿಗೆ ಬದಲಾಗಿ ೪ರೂಪಾಯಿಗಳ ದಳ್ಳಾಳಿ ಕೊಡಬೇಕಾಗಿದೆ. ನೆರೆ ರಾಜ್ಯಗಳಲ್ಲಿ ಸಹ ಬೇರೆ ರಾಜ್ಯಗಳಿಂದ ಬಂದು ಖರೀದಿ ಮಾಡತಕ್ಕವರಿಗೆ ೪ ರೂಪಾಯಿಗಳ ದಳ್ಳಾಳಿ ಕೊಡುವುದಾದರೆ ಮಾರ್ಕೆಟ್ ಮೇಲೆ ಕೆಟ್ಟ ಪರಿಣಾಮವಾಗುವುದಿಲ್ಲ. ಆದರೆ ನೆರೆ ರಾಜ್ಯಗಳಲ್ಲಿ ಅಂಥ ವ್ಯವಸ್ಥೆ ಇಲ್ಲ. ಬೇರೆ ರಾಜ್ಯದವರು ಕರ್ನಾಟಕದಲ್ಲಿ ಮೆಣಸಿನಕಾಯಿಯನ್ನು ಖರೀದಿ ಮಾಡಬೇಕಾದರೆ ೪ ರೂಪಾಯಿಗಳು ದಳ್ಳಾಳಿ ಹೆಚ್ಚಿಗೆ ಬೀಳುವುದರಿಂದ ಒಳರಾಜ್ಯದ ಮಾರ್ಕೆಟ್ ಮೇಲೆ ಪರಿಣಾಮವಾಗುತ್ತದೆಂಬ ಉದ್ದೇಶದಿಂದ ವ್ಯಾಪಾರಸ್ಥರು ಪ್ರತಿಭಟಿಸಿದ್ದಾರೆಯೇ ವಿನಹ ಇನ್ನು ಯಾವುದೇ ರೀತಿಯಿಂದ ಪ್ರತಿಭಟಿಸಿಲ್ಲವೆಂದು ಸ್ಪಷ್ಟಪಡಿಸುತ್ತೇನೆ. ಇವತ್ತು ಮಾತನಾಡಿದ ಅನೇಕ ಕಾಂಗ್ರೆಸ್ ಸದಸ್ಯರು ಹೇಳಿದರು, ಶ್ರೀ ಆರ್. ಎಲ್. ಜಾಲಪ್ಪನವರು ಪಕ್ಷದ ಸಭೆಯಲ್ಲಿ ಉಸಿರು ಕಟ್ಟುತಕ್ಕ ವಾತಾವಣದಲ್ಲಿದ್ದರು, ಅವರು ಉಳಿದು ಬಂದದ್ದು ಹೆಚ್ಚು ಎಂದರು. ನಮ್ಮ ಪಕ್ಷದ ಸಭೆಯಲ್ಲಿ ಈ ವಿಷಯವನ್ನು ಚರ್ಚಿಸಿದ್ದು ತಪ್ಪಲ್ಲ. ನಮ್ಮ ಪಕ್ಷದ ಸದಸ್ಯರಲ್ಲಿ ಈ ಕಾನೂನು ಬಗ್ಗೆ ಏನೂ ಭಿನ್ನಾಭಿಪ್ರಾಯ ಇಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಕಾಂಗ್ರೆಸ್‌ನವರು ತಮ್ಮ ತಟ್ಟೆಯಲ್ಲಿ ಬಿದ್ದ ಕತ್ತೆಯನ್ನು ನೋಡಿಕೊಳ್ಳದೆ ನಮ್ಮ ತಟ್ಟೆಯಲ್ಲಿ ಬಿದ್ದ ನೊಣವನ್ನು ವಿಚಾರಿಸುವುದಕ್ಕೆ ಹೋಗಬಾರದೆಂದು ಹೇಳುತ್ತೇನೆ. ಅನೇಕ ಸದಸ್ಯರು ಹೇಳಿದರು, ವ್ಯಾಪಾರಸ್ಥರು ಹಾಗಿದ್ದಾರೆ, ಹೀಗಿದ್ದಾರೆ ಎಂದು. ಅದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಜೀವನದ ಎಲ್ಲಾ ರಂಗಗಳಲ್ಲಿ ಒಳ್ಳೆಯವರು ಇದ್ದಾರೆ, ಕಳ್ಳರು ಇದ್ದಾರೆ. ಒಬ್ಬ ವ್ಯಾಪಾರಸ್ಥ ಹತ್ತು ವರ್ಷದಲ್ಲಿ ಕಾರು ಬಂಗಲೆ ಮಾಡಿದರೆ, ಬೀಡಿ ಸಿಗರೇಟು ಸೇದುವುದಕ್ಕೆ ಹಣವಿಲ್ಲದವರು ಎಪಿಎಂಸಿ. ಅಧ್ಯಕ್ಷರಾಗಿ ಲಕ್ಷಗಟ್ಟಲೆ ಹಣ ಮಾಡಿದ್ದಾರೆ. ಆದ್ದರಿಂದ ಕ್ರಾಂತಿಕಾರಕವಾದ ಬದಲಾವಣೆ ತಂದರೆ ರೈತರು ಉದ್ಧಾರವಾಗುತ್ತಾರೆಂಬುದು ಭ್ರಮೆ ಅನ್ನಿಸುತ್ತದೆ. ಕಾಯಿದೆಗಳನ್ನು ನಿಜವಾದ ರೂಪದಲ್ಲಿ ಅನುಷ್ಠಾನಕ್ಕೆ ತಂದರೆ ಮಾತ್ರ ರೈತರ ಪ್ರಗತಿ ಸಾಧ್ಯ. ಈ ದಿಸೆಯಲ್ಲಿ ಸಚಿವರು ದಿಟ್ಟ ಹೆಜ್ಜೆ ಇಟ್ಟಿದ್ದಾರ, ಅದನ್ನು ಮುಂದುವರಿಸಲು ಎಂದು ಹೇಳುವುದರ ಜೊತೆಗೆ.........

ಶ್ರೀ ಪಟವುಕ್ಕಿ ರತ್ನಾಕರ್.—ರೈಲು ಹಳಿ ತಪ್ಪಿದ ಹಾಗೆ ಕಾಣುತ್ತದೆ. ರೈಲು ಯಾವಾಗಲೂ ಹಳಿಯ ಮೇಲೇ ಇರಬೇಕು.

ಶ್ರೀ ಬಿ. ಎ. ಉಪ್ಪಿನ್.—ತಾವು ತಂದಂತಹ ಬದಲಾವಣೆಗಳನ್ನು ಕಾರ್ಯ ರೂಪದಲ್ಲಿ ತರಲಿಕ್ಕೆ ವ್ಯಾಪಾರಸ್ಥರ ಜೊತೆಗೆ ಅಧಿಕಾರಿಗಳ ಮೇಲೆ ಹಿಡಿತ ಇಟ್ಟುಕೊಂಡು ಕಾರ್ಯರೂಪದಲ್ಲಿ ತಂದಾಗ ಮಾತ್ರ ರೈತರ ಪ್ರಗತಿ ಸಾಧ್ಯ. ಏಕೆಂದರೆ ಈ ಕಾನೂನು ತಂದಿರುವುದರಿಂದ ವ್ಯಾಪಾರಸ್ಥರು ರೈತರಿಗೆ ಕೊಡತಕ್ಕ ಹಣವನ್ನು ಕಡಿಮೆ ಮಾಡಬಹುದು. ರೈತನಿಗೆ ಸಿಗಬೇಕಾದ ಹಣದ ಸಹಾಯ ಸಿಗಬೇಕಾಗುತ್ತದೆ. ರೈತನಿಗೆ ಹಣದ ಅವಶ್ಯಕತೆ ಬಹಳವಾಗಿರುತ್ತದೆ. ನನ್ನ ಕ್ಷೇತ್ರದ ಒಂದೇ ಒಂದು ಉದಾಹರಣೆ ಹೇಳುವುದಾದರೆ ನಮ್ಮಲ್ಲಿ ಕಮೀಷನ್ ಏಜೆಂಟರು ಇಲ್ಲ. ಹಳ್ಳಿಗೆ ಹೋಗಿ ವ್ಯಾಪಾರ ಮಾಡುವವರು ಇದ್ದಾರೆ. ಇರತಕ್ಕ ಸಹಕಾರ ಸಂಘ ಒಂದೇ ಈ ರೀತಿ ಖಾಸಗಿಯಾಗಿ ಮಾರಾಟವಾಗುತ್ತಿರುವ ಮಾಲು ಮಾರ್ಕೆಟ್ಟಿಗೆ ಬಂದು ಮಾರಾಟವಾಗುವ ವ್ಯವಸ್ಥೆಯನ್ನು ಶ್ರೀ ಆರ್. ಎಲ್. ಜಾಲಪ್ಪನವರು ಮಾಡಬೇಕಾಗುತ್ತದೆ. ಇವರು ಇನ್ನೂ ದಿಟ್ಟ ಹೆಜ್ಜೆ ಇಟ್ಟು ಇಂಥದ್ದನ್ನೆಲ್ಲ ಕಡಿಮೆ ಮಾಡಬೇಕೆಂದು ಕೇಳಿಕೊಂಡು ಕೊನೆಯಲ್ಲಾದರೂ ಎರಡು ನಿಮಿಷ ಮಾತನಾಡಲಿಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಸಚಿವರು).—ಮಾನ್ಯ ಅಧ್ಯಕ್ಷರೆ, ಈ ದಿವಸ ಈ ಒಂದು ತಿದ್ದುಪಡಿ ಮೇಲೆ ಎಲ್ಲಾ ಪಕ್ಷದವರು ಕೂಡ ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದಾರೆ. ಇದು ನಮ್ಮ ರಾಜ್ಯದ ಅದೃಷ್ಟವೆಂದು ಭಾವಿಸುತ್ತೇನೆ. ರಾಜ್ಯದ ರೈತರ ಜೊತೆಗೆ ನಮ್ಮ ಪಕ್ಷದ ಮತ್ತು ನನ್ನ ಅದೃಷ್ಟವೆಂದು ತಿಳಿದುಕೊಂಡಿದ್ದೇನೆ. ನಾನು ಉತ್ತರಿಸುವುದಕ್ಕೆ ಮೊದಲು ಒಂದು ವಿಷಯವನ್ನು ವಿಷದೀಕರಿಸಬೇಕಾಗಿದೆ. ಈ ದಿವಸ ಬೆಳ್ಳಿಗ್ಗೆ ಎರಡು ಪತ್ರಿಕೆಗಳಲ್ಲಿ ನಿನ್ನೆ ಶ್ರೀ ಆರ್. ಎಲ್. ಜಾಲಪ್ಪನವರು ರಾಜೀನಾಮೆ ಕೊಡುತ್ತೇವೆಂದು ಅಭಿಪ್ರಾಯಿಸಿದರು ಎಂದು ಬಂದಿದೆ. ಇದು ಸರಿಯಲ್ಲ. ನಮ್ಮ ಪಕ್ಷದವರು ಪೂರ್ಣ ಬೆಂಬಲ ಕೊಟ್ಟು ಈ ಮಸೂದೆ ಯಾವ ರೀತಿ ಇದೆ ಅದೇರೀತಿ ತರಬೇಕೆಂದು ಹೇಳಿದ್ದಾರೆ. ಪಕ್ಷದಲ್ಲಿ ಯಾವುದೇ ವಿಧವಾದ ಒಡಕೂ ಇಲ್ಲವೆಂದು ಸ್ಪಷ್ಟಪಡಿಸುವುದಕ್ಕೆ ನಾನು ಇಷ್ಟ

ಪಡುತ್ತೇನೆ. ಮಾನ್ಯ ಸದಸ್ಯರು ಈ ಮಸೂದೆಯ ಬಗ್ಗೆ ಬಹಳಷ್ಟು ಸಲಹೆಗಳನ್ನು ಕೊಟ್ಟಿದ್ದಾರೆ. ನಾನು ಅವರಿಗೆ ಬಹಳ ಆಭಾರಿಯಾಗಿದ್ದೇನೆ. ಬಹಳ ಮುಖ್ಯವಾಗಿ ಕೆ.ಹೆಚ್. ಪಾಟೀಲರು ಮತ್ತು ಇನ್ನು ಕೆಲವು ಸ್ನೇಹಿತರುಮಾರ್ಕೆಟ್ ಕಮಿಟಿಗಳಲ್ಲಿ ಹಣ ಜಾಸ್ತಿ ಇದೆ. ಇದಕ್ಕೆ ಬೇರೆ ವ್ಯವಸ್ಥೆ ಮಾಡಬೇಕು. ಇದನ್ನು ಬೇರೆಕಡೆ ಖರ್ಚು ಮಾಡಬೇಕೆಂದು ಸೂಚಿಸಿದ್ದಾರೆ. ಇವರೆಲ್ಲರ ಕಣ್ಣು ಅದರ ಮೇಲೆ ಬಿದ್ದಿದೆ. ಅಲ್ಲಿ ೨೫–೩೦ ಕೋಟಿ ರೂಪಾಯಿಗಳ ಹಣ ಇದೆ. ಆದರೆ ಅದು ಕೇವಲ ೨೦–೨೫ ಸಂಸ್ಥೆಗಳಲ್ಲಿ ಮಾತ್ರ ಇದೆಯೇ ಹೊರತು ಎಲ್ಲಾ ಸಂಸ್ಥೆಗಳಲ್ಲಿ ಇಲ್ಲ. ಹುಬ್ಬಳ್ಳಿಗೆ ಸುಮಾರು ೮ ಕೋಟಿ ರೂಪಾಯಿಯಾದರೂ ಬೇಕಾಗಬಹುದು. ಅಲ್ಲಿ ೭೦–೮೦ ಲಕ್ಷ ರೂಪಾಯಿಗಳು ಮಾತ್ರ ಇದೆ. ಈಗ ಏನು ನಾವು ತಿದ್ದುಪಡಿಗಳನ್ನು ತಂದಿದ್ದೇವೆ ಅದು ಸರಿಯಾಗಿ ಸದುಪಯೋಗವಾಗಬೇಕಾದರೆ ಕೆಲವು ವ್ಯವಸ್ಥೆಗಳನ್ನು ಮಾಡಿಕೊಡಬೇಕಾಗುತ್ತದೆ. ಮಾನ್ಯ ಖರ್ಗೆಯವರು ಮತ್ತಿತರ ಸ್ನೇಹಿತರು ಹೇಳಿದ ಹಾಗೆ ಟ್ರೇಡರ್‌ಗಳು ಯಾರೂ ಹಳ್ಳಿಗಳಿಗೆ ಹೋಗಿ ವ್ಯಾಪಾರ ಮಾಡಬಾರದು, ಮಾರ್ಕೆಟ್ ಆವರಣದಲ್ಲಿ ಮಾತ್ರ ಮಾಡಬೇಕೆಂದು ನಿಗದಿಪಡಿಸುತ್ತೇವೆ. ಆಗ ಪ್ರತಿಯೊಬ್ಬ ರೈತನು ೨೦–೩೦ ಮೈಲಿ ತನ್ನ ವಸ್ತುಗಳನ್ನು ತೆಗೆದುಕೊಂಡು ಬರಬೇಕಾದರೆ ಕಷ್ಟವಾಗುತ್ತದೆ. ಅದಕ್ಕಾಗಿ ಹತ್ತಿರದಲ್ಲಿ ಮಾರ್ಕೆಟ್ ವ್ಯವಸ್ಥೆಯನ್ನು ಮಾಡಿಕೊಡಬೇಕಾಗುತ್ತದೆ. ಅದಕ್ಕೋಸ್ಕರ ಬಹಳಷ್ಟು ನಾವು ಗೋಡೌನ್‌ಗಳಲ್ಲಿ ಆಕ್ಷನ್ ಪ್ಲಾಟ್‌ಫಾರಂಗಳನ್ನು ಕೊಡಿಸಿ ಕೊಡಬೇಕಾಗಿದೆ. ಅದಕ್ಕೆ ಕೋಟಿಗಟ್ಟಲೆ ಹಣ ಬೇಕಾಗುತ್ತದೆ ಇದರ ಬಗ್ಗೆ ಆಗಲೇ ಯೋಚನೆ ಮಾಡಿದ್ದೇವೆ. ಇದರ ಜೊತೆಗೆ ಸುಪ್ರೀಂ ಕೋರ್ಟಿನ ೫ ಜನ ಜಡ್ಜ್‌ಗಳ ತೀರ್ಮಾನ ಕೂಡ ಬಂದಿದೆ. ಅದನ್ನು ನಾನು ಸದನದ ಗಮನಕ್ಕೆ ತರುವುದಕ್ಕೆ ಇಷ್ಟ ಪಡುತ್ತೇನೆ. ಅದು ಈ ರೀತಿ ಇದೆ.

> "Imparting education in agriculture in general cannot be correlated with the market fee. Is it permissible to spend market fee realised from traders for any purpose calculated to promote the national or public interest? That is the question obviously not. No market Committee can be permitted to utilise the fund for a ultirior purpose however benevelent, laudable and charitable the object may be. The whole concept of the fee will collapse if the amounts realised by the market fee could be permitted to spend in this fashion."

ಆದ್ದರಿಂದ ಮಾರ್ಕೆಟ್ ಫೀ ಅನ್ನು ಬೇರೆಯದಕ್ಕೆ ಖರ್ಚು ಮಾಡುವುದಕ್ಕೆ ಬರುವುದಿಲ್ಲ. ಆದರೆ ಒಂದು ಅವಕಾಶ ಇದೆ. ಹಿಂದಿನ ವ್ಯವಸ್ಥೆಯಲ್ಲಿ ಕನ್‌ಸಾಲಿಡೇಟೆಡ್ ಫಂಡ್ ಮಾಡಿ ರಸ್ತೆಗಳಿಗೆ ಉಪಯೋಗಿಸಲಿಕ್ಕೆ ಸರ್ಕಾರಕ್ಕೆ ಹಣ ಕೊಟ್ಟಿದ್ದು ಉಂಟು. ಅದನ್ನು ಹೈಕೋರ್ಟಿನಲ್ಲಿ ಚಾಲೆಂಜ್ ಮಾಡಿದರು ೧೯೭೮ ರಲ್ಲಿ. ಅದನ್ನು ಕರ್ನಾಟಕ ಹೈಕೋರ್ಟಿನವರು ಸ್ಟ್ರಕ್‌ಡೌನ್ ಮಾಡಿದರು. ಇದು ಸರಿಯಲ್ಲ. ಆ ಹಣವನ್ನು ವಾಪಸ್ಸು ಕೊಡಬೇಕೆಂದರು.

೨–೩೦ ಪಿ. ಎಂ.

ಈ ಲೆಜಿಸ್ಲೇಷನನ್ನು ರೀ–ವ್ಯಾಲಿಡೇಟ್ ಮಾಡಿ ಮಾಡಿದರು. ಅದನ್ನೂ ಕೂಡಾ ಸ್ಟ್ರಕ್ ಡೌನ್ ಮಾಡಿದರು. ೧೯೭೯ರಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಒಂದು ತೀರ್ಮಾನ ಬಂತು. ಆರ್ಗ್ಯುಮೆಂಟ್ಸ್ ನಡೆಯುವಾಗ ಸುಪ್ರೀಂ ಕೋರ್ಟ್‌ಗೆ ಹೋಗಿ ಒಂದು ದಿವಸ ನಾನೂ ಕುಳಿತಿದ್ದೆ. ಆಗ There may be no markets without roads ಎಂದು ಹೇಳಿದರು. ಈ ರೀತಿಯ ಒಂದು ಅಭಿಪ್ರಾಯವನ್ನು ಕೊಟ್ಟರು. ಏನು ಇದಕ್ಕೆ ಖರ್ಚು ಮಾಡಿದ್ದಾರೆ, ಅದು ಸರಿಯಾಗಿದೆ ಎಂದು ಅಭಿಪ್ರಾಯ ಅವರು ಕೊಟ್ಟರು. ಎಲ್ಲಾದರೂ ಹಣ ಉಳಿದರೆ ಖರ್ಚು ಮಾಡಬಹುದೇ ಹೊರತು ಮಾರ್ಕೆಟ್ ಫೀಯನ್ನು ಬೇರೆ ಯಾವುದಕ್ಕೂ ಖರ್ಚು ಮಾಡುವುದಕ್ಕೆ ಬರುವುದಿಲ್ಲ ಎಂಬ ಅಂಶವನ್ನು ಸದನದ ಗಮನಕ್ಕೆ ನಾನು ತರುತ್ತಿದ್ದೇನೆ. ಇನ್ನು ವೆಂಕಟರಾಮಯ್ಯನವರು ಇದಕ್ಕೆ ಪ್ರಚಾರ ಆಗಲಿಲ್ಲ ಎಂದು ಹೇಳಿದರು. ಇದಕ್ಕೆ ಸಾಕಷ್ಟು ಪ್ರಚಾರವಾಗಬೇಕು ಎಂದು ಹೇಳಿದ್ದಾರೆ. ಸರ್ಕಾರ ಪ್ರಚಾರ ಮಾಡಬೇಕು, ಮಾನ್ಯ ಸದಸ್ಯರು ತಾವೂ ಮಾಡಬೇಕು. ತಾವು ರೈತರ ಪ್ರತಿನಿಧಿಗಳಾಗಿ ಬಂದಿದ್ದೀರಿ, ತಾವು ಪ್ರಚಾರ ಮಾಡಬೇಕು. ಇಲಾಖಾಧಿಕಾರಿಗಳಿಗೆ ಮಾರ್ಕೆಟ್ ಕಮಿಟಿಯವರಿಗೆ ಸೂಚನೆ ಕೊಟ್ಟಿದ್ದೇನೆ, ಪ್ರತಿಯೊಂದು ಮನೆಗೂ ಇದನ್ನು ಮುಟ್ಟಿಸಬೇಕು. ಇದನ್ನು ಪ್ರಿಂಟ್ ಮಾಡಿ,

ಏತಕ್ಕೋಸ್ಕರ ಮಾರ್ಕೆಟ್ ಕಮಿಟಿಗಳನ್ನು ಮಾಡಿದ್ದಾರೆ, ಅವರ ಹಕ್ಕು ಏನು? ಬಾಧ್ಯತೆ ಏನು? ಎಂಬ ಬಗ್ಗೆ ಗೊತ್ತಾಗುವಂತೆ ಮಾಡಬೇಕು. ಅಲ್ಲಿ ತೂಕ ಆಗಲಿ, ಧಾರಣೆ ಆಗಲೀ ಸೇಫ್‌ಗಾರ್ಡ್ ಮಾಡುವ ಬಗ್ಗೆ ಸೂಕ್ಷ್ಮವಾಗಿ ಪ್ರತಿಯೊಂದನ್ನು ವಿವರಿಸಿ ಮನೆ ಮನೆಗೆ ಇದನ್ನು ತಲುಪಿಸುವ ವ್ಯವಸ್ಥೆಯನ್ನು ನಾವು ಮಾಡುತ್ತೇವೆ. ಇನ್ನು ಸ್ಟೋರೇಜ್ ಫೆಸಿಲಿಟೀಸ್ ಬಗ್ಗೆ ಹೇಳಿದ್ದೀರಿ. ಸ್ಟೋರೇಜ್ ಫೆಸಿಲಿಟೀಸ್ ಬಗ್ಗೆ ಈಗ ಒಂದು ವ್ಯವಸ್ಥೆಯನ್ನು ಮಾಡಿದ್ದೇವೆ. ಎಲ್ಲೆಲ್ಲಿ ಗೋಡೌನುಗಳು ಖಾಲಿ ಇವೆ, ಆ ಗೋಡೌನುಗಳನ್ನು ಬೇರೆ ಯಾರಿಗೂ ಕೊಡಬಾರದು ಎಂದು ಒಂದೆರಡು ಗೋಡೌನುಗಳನ್ನು ಅಲ್ಲಿಯ ರೈತರಿಗೆ ಇಟ್ಟುಕೊಳ್ಳಬೇಕು. ರೈತರಿಗೆ ಮಾರುವುದಕ್ಕೆ ಸಾಧ್ಯವಾಗದ ವಸ್ತುಗಳನ್ನು ಗೋಡೌನುಗಳಲ್ಲಿ ಇಟ್ಟು ರಶೀದಿಯನ್ನು ಪಡೆಯಬಹುದು. ಅವನು ಇಡುವಾಗ ಆ ವಸ್ತುಗಳ ಸರಿಯಾದ ತೂಕವನ್ನು ನಮೂದಿಸಬೇಕು. ಮತ್ತೆ ಅವನು ಅದನ್ನು ವಾಪಸ್ಸು ಪಡೆಯುವಾಗ ಸರಿಯಾಗಿ ತೂಕ ಮಾಡಿ ರೈತನಿಗೆ ಒದಗಿಸಬೇಕು. ಇದಲ್ಲವೂ ಪುಕ್ಕಟೆಯಾಗಿ ಸಿಗಬೇಕು. ಇದರ ಮೇಲೆ ಯಾವುದಕ್ಕೂ ರೈತನ ಮೇಲೆ ಛಾರ್ಜ್ ಹಾಕಬಾರದು ಎಂದು ಸೂಚನೆ ಯನ್ನು ಕೊಟ್ಟಿದ್ದೇವೆ. ಬಹಳ ಕಡೆ ಇದನ್ನು ಜಾರಿಗೆ ತಂದಿದ್ದೇವೆ. ಇದರ ಜೊತೆಗೆ ಅನುಕೂಲ ಗಳನ್ನು ಎರಡು ಮೂರು ವರ್ಷಗಳಿಂದ ಕೊಟ್ಟಿದ್ದೇವೆ. ಈಗ ವ್ಯವಸ್ಥೆಯನ್ನು ಕಂಪ್ಯೂಟರೈಸ್ ಮಾಡಿದ್ದೇವೆ. ರಾಯಚೂರು ಗದಗ್‌ನಲ್ಲೂ ಕಂಪ್ಯೂಟರೈಸ್ ಮಾಡಿದ್ದೇವೆ. ಎಲೆಕ್ಟ್ರಾನಿಕ್ ವೇಯಿಂಗ್ ಮೆಷಿನನ್ನು ಬಹಳಷ್ಟು ಕಡೆ ಒದಗಿಸಿದ್ದೇವೆ. ಟ್ರಾನ್ಸ್‌ಪೋರ್ಟ್‌ಗಾಗಿ ಯಾವ ಯಾವ ಮಾರ್ಕೆಟ್ ಕಮಿಟಿಯವರು ೫೦ ಭಾಗ ಕೊಡುವುದಕ್ಕೆ ಮುಂದೆ ಬರುತ್ತಾರೋ ಅವರಿಗೆ ಮಾರ್ಕೆಟ್ ಫಂಡಿನಿಂದ ನಾವು ೫೦ ಭಾಗ ಕೊಟ್ಟು ಅಗ್ಗವಾದ ವಸ್ತುಗಳನ್ನು ಸಾಗಿಸುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ.

ಶ್ರೀ ಕೆ. ಹೆಚ್. ಪಾಟೀಲ್.—ತಾವು ಮಾಡಿದ್ದೀರಿ. ಅದು ಯೋಗ್ಯ ಇದೆ. ಅದರ ಜೊತೆಗೆ ನೂರಾರು ಹಳ್ಳಿಗಳಿಗೆ ಒಂದೆರಡು ಲಾರಿಗಳನ್ನು ಇಟ್ಟರೆ ಏನು ಉಪಯೋಗ ಬರುತ್ತದೆ? ಹಣ ಬೇಕಾದಷ್ಟು ಇದೆ. ನಾಲ್ಕಾರು ಲಾರಿಗಳನ್ನು ಇಡುವುದಕ್ಕೆ ಏನೇನು ಅವಕಾಶಗಳು ಬೇಕೋ ಅದನ್ನು ಮಾಡಿಕೊಡಿ ಎಂದು ಹೇಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ನಾವು ಅದನ್ನು ಎಕ್ಸಿಪಿರಿಮೆಂಟ್ ಆಗಿ ಮಾಡಿದ್ದೇವೆ. ಪಾಟೀಲರ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಅದಕ್ಕೆ ವ್ಯವಸ್ಥೆಯನ್ನು ಮಾಡಿಸಿಕೊಡುತ್ತೇನೆ. ವೇರ್ ಹೌಸಿಂಗ್ ಕಾರ್ಪೊರೇಷನ್‌ನಲ್ಲಿ ಯಾವ ಗೋಡೌನುಗಳು ಇವೆ, ಅಲ್ಲಿ ರೈತರ ಮಾಲನ್ನು ಇಡುವುದಾದರೆ ಅರ್ಧ ಛಾರ್ಜ್ ಮಾಡಬೇಕು ಎಂದು ಹೇಳಿದ್ದೇವೆ. ಬೇರೆಯವರಿಗೆ ಒಂದು ರೂಪಾಯಿ ಮಾಡಿದರೆ ರೈತರಿಗೆ ೫೦ ಪೈಸೆ ಮಾಡಬೇಕು ಎಂದು ಹೇಳಿದ್ದೇವೆ. ಇನ್ನು ನಾಲ್ಕು ವರ್ಷ ದೊಳಗೆ ೮೮ ರಿಂದ ೮೮೮ ಒಳಗೆ ೮೫೦ ಗೋಡೌನುಗಳನ್ನು ನಾವು ಸಹಕಾರ ಇಲಾಖೆಯಿಂದ ರೈತರಿಗೆ ಅನುಕೂಲವಾಗಬೇಕು ಎನ್ನುವ ದೃಷ್ಟಿಯಿಂದ ಕಟ್ಟಿಸಿ ಕೊಡುತ್ತಿದ್ದೇವೆ. ಮಂಡಲ್ ಪಂಚಾಯಿತಿ ಆಗುತ್ತಿದೆ. ಸಂತೆಗಳನ್ನು ಮಾಡುವುದಕ್ಕೆ ಸಾಧ್ಯವೇ? ಪರ್ಚೇಸ್ ಪಾಯಿಂಟ್ಸ್ ಓಪನ್ ಮಾಡುವುದಕ್ಕೆ ಸಾಧ್ಯವೇ? ಎಂಬ ಬಗ್ಗೆ ಯೋಚನೆಯನ್ನು ಮಾಡುತ್ತಿದ್ದೇವೆ. ಇನ್ನು ಎಂ. ಎಸ್. ಕೃಷ್ಣನ್‌ರವರು ಹಮಾಲಿಗಳಿಗೆ ಎಕ್ಸೆಂಪ್ಷನ್ ಕೊಡಬೇಕು ಎಂದು ಹೇಳಿದ್ದಾರೆ. ನಾನು ರಾಜಕೀಯ ಪ್ರಾರಂಭ ಮಾಡಿದ್ದೇ ಕಮ್ಯೂನಿಸ್ಟ್ ಆಗಿ. ಮುಗೋಳಪ್ಪನವರ ಶಿಷ್ಯ ನಾನು. ನಾನು ಮೊದಲು ತಾಲ್ಲೂಕು ಬೋರ್ಡ್‌ಗೆ ಕಮ್ಯೂನಿಸ್ಟ್ ಆಗಿ ನಿಂತಿದ್ದುದು. ಕೆಲವು ಕಡೆ ಈ ವಿಷಯದಲ್ಲಿ ದುರುಪಯೋಗ ಆಗುತ್ತಿದೆ. ಸ್ಟ್ರೈಕ್ ಮಾಡುವ ಏಳು ದಿವಸ ಮುನ್ನ ನೋಟೀಸ್ ಕೊಡಬೇಕು ಎಂದು ಹೇಳಿದ್ದೇವೆ. ಮೊದಲು ಒಂದು ತಿಂಗಳು ಮುಂಚಿತವಾಗಿ ನೋಟೀಸ್ ಕೊಡಬೇಕಾಗಿತ್ತು. ಈಗ ಒಂದು ತಿಂಗಳು ಇದ್ದುದನ್ನು ಏಳು ದಿವಸಕ್ಕೆ ರೆಡ್ಯೂಸ್ ಮಾಡಿದ್ದೇವೆ. I think this is reasonable.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕಮ್ಯುನಿಸ್ಟ್ ಎಂದು ಪಾರ್ಟಿಯಿಂದ ಹೊರಗಡೆ ಹಾಕುವುದಕ್ಕೆ ಪ್ರಯತ್ನ ನಡೆದಿದೆ. ಆದ್ದರಿಂದ ಇದನ್ನು ಹೇಳುವುದಕ್ಕೆ ಇನ್ನೊಮ್ಮೆ ಯೋಚನೆ ಮಾಡಿ.

ಶ್ರೀ ಎ. ಲಕ್ಷ್ಮೀಸಾಗರ್.—ಈಗ ಅವರು ಸೊಸೈಟಿಕ್ ಆಗಿದ್ದಾರೆ.

ಶ್ರೀ ಆರ್. ಎಲ್. ಜಾಲಪ್ಪ.—ಡೆಮಾನ್‌ಸ್ಟ್ರೇಷನ್ ಬೇಡ ಎಂದು ಹೇಳುತ್ತಾರೆ. ರೈತರು ಎಂಥವರು ಎಂದು ನಿಮಗೆ ಗೊತ್ತು. ಅವರು ಹುಂಬರು. ಡೆಮಾನ್‌ಸ್ಟ್ರೇಷನ್ ಮಾಡಿ ಕೂಗಾಡಿ ಬಿಟ್ಟರೆ ಮಾರ್ಕೆಟ್‌ಗೆ ಹೋಗುವುದು ಬೇಡ ಎಂದು ಹೇಳಿದರೆ ಅವರು ಓಡಿ ಹೋಗಿಬಿಡುತ್ತಾರೆ.

ಆದ್ದರಿಂದ ಡೆಮಾನ್‌ಸ್ಟ್ರೇಷನ್‌ಗೆ ನೋಟೀಸ್ ಕೊಡಲಿ ಎಂದು ಇದನ್ನು ಮಾಡಿದ್ದೇವೆ. ಮಾರ್ಕೆಟ್ ಕಮಿಟಿಯಲ್ಲಿ ಏನಾದರೂ ಆದರೆ ಅಧ್ಯಕ್ಷರು ಮತ್ತು ಮಾರ್ಕೆಟ್ ಕಮಿಟಿಯವರು ಕರೆದು ಮಾತನಾಡಿ ಬೇಡಪ್ಪ ಹೀಗೆ ಮಾಡು ಎಂದು ಹೇಳುತ್ತಾರೆ. ಮಿತಿಮೀರಿ ಹೋದಾಗ ಇಂಥ ಸಂದರ್ಭಗಳು ಬರುತ್ತವೆಯೇ ಹೊರತು ಇದರಿಂದ ಏನೂ ತೊಂದರೆಯಾಗುವುದಿಲ್ಲ. ಇಲ್ಲಿ ಬೇರೆ ರೈತರು ಬರುವುದರಿಂದ ದಿಗಿಲು ಬೀಳಬಾರದು ಎಂದು ಇದನ್ನು ಹಾಕಿದ್ದೇವೆ ಅಷ್ಟೆ. ಇನ್ನೇನೂ ಇಲ್ಲ. ಆಮೇಲೆ ನಮ್ಮ ಖರ್ಗೆಯವರು ಹೇಳಿದ್ದಾರೆ. ನಾನು ಅದನ್ನು ಒಪ್ಪಿದ್ದೇನೆ. ಗುರುಮಠಕಲ್ ವಿಚಾರ ಹೇಳಿದರು. ಅವರು ಹೇಳಿದ ಮೇಲೆ ಹಿಂದಿನ ಕಂಟ್ರಾಕ್ಟರನ್ನು ಬದಲಾಯಿಸಿ ಬೇರೆ ಕಂಟ್ರಾಕ್ಟರಿಗೆ ಈ ಕೆಲಸ ಕೊಟ್ಟಿದ್ದೇವೆ. ಕೆಲಸ ಸರಿಯಾಗಿ ಆಗುವುದಕ್ಕೆ ಇವತ್ತು ಸೂಚನೆ ಕೊಡುತ್ತಿದ್ದೇನೆ. ಇನ್ನೊಂದು ಸಾರಿ ಖಾಸಗಿಯವರ ಮಾತು ಕೇಳುವುದಾದರೆ ನಮ್ಮ ಅಧಿಕಾರಿಗಳನ್ನು, ಸೀನಿಯರ್ ಅಧಿಕಾರಿಗಳನ್ನು ಸಸ್ಪೆಂಡ್ ಮಾಡುತ್ತೇನೆ. ಇನ್ನೊಂದು ಸಾರಿ ಅವರು ನನ್ನನ್ನು ಕೇಳುವುದರೊಳಗಾಗಿ ಕೆಲಸ ಕಂಪ್ಲೀಟ್ ಮಾಡುತ್ತೇವೆಂದು ಭರವಸೆ ಕೊಡುತ್ತೇನೆ. ಆಮೇಲೆ ರೆಕ್ರೂಟ್‌ಮೆಂಟ್ ಬಗ್ಗೆ ಅವರು ಹೇಳಿದರು. ಈಗ ಸರ್ಕಾರಿ ಅಧಿಕಾರಿಗಳೆಂದು ಅವರೆಲ್ಲರನ್ನೂ ಮಾಡಿದ್ದೇವೆ. ಆದ್ದರಿಂದ ರೆಕ್ರೂಟ್‌ಮೆಂಟ್ ಮಾಡುವ ಪ್ರಶ್ನೆ ಈಗ ಇಲ್ಲವೇ ಇಲ್ಲ. ಯಾವುದೇ ಸಮಿತಿಯವರು ಯಾರನ್ನು ರೆಕ್ರೂಟ್‌ಮೆಂಟ್ ಮಾಡುವುದಕ್ಕಾಗುವುದಿಲ್ಲ. ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಫೈನಲೈಸ್ ಆದಮೇಲೆ ಇಲ್ಲಿಯ ಚೀಫ್ ಮಾರ್ಕೆಟಿಂಗ್ ಆಫೀಸ್‌ನಲ್ಲಿ ಒಂದು ಕಮಿಟಿ ಇದೆ. ಅವರು ಅಭ್ಯರ್ಥಿಗಳನ್ನು ಕರೆದು ರೆಕ್ರೂಟ್ ಮಾಡಬೇಕು. ರೋಸ್ಟರ್ ಸಿಸ್ಟಂನಲ್ಲಿ ಅನ್ಯಾಯವಾಗದಂತೆ ನೋಡಿಕೊಳ್ಳುತ್ತೇನೆ. ಕಟ್ಟುನಿಟ್ಟಾಗಿ ಅದನ್ನು ಪಾಲಿಸುತ್ತೇನೆ. ಈಗ ಮೂರು ಮೂರು ತಿಂಗಳಿಗೋಸ್ಕರ ಡೈಲಿ ವೇಜ್‌ನಲ್ಲಿ ನೇಮಕ ಮಾಡಿಕೊಳ್ಳುತ್ತಿದ್ದೇವೆ. ಅವರಿಗೆ ಕೊಡುತ್ತಿರುವ ಮೂರು ನೂರು ರೂಪಾಯಿ ಸಾಲುವುದಿಲ್ಲ. ೪೦೦ ರೂಪಾಯಿಗಳನ್ನು ಆದರೂ ಕೊಡಬೇಕೆಂದು ತಾವು ಒಪ್ಪಿಗೆಯನ್ನು ಕೊಡುವುದಾದರೆ ಮಾಡಬೇಕೆಂಬ ಅಭಿಪ್ರಾಯ ಇದೆ. ನಾನು ಮಂತ್ರಿ ಮಂಡಲದಲ್ಲಿ ಈ ವಿಚಾರ ತಂದಿದ್ದೆ. ೪೦೦ ರೂಪಾಯಿಗೆ ಅವರು ಒಪ್ಪಿಕೊಂಡಿದ್ದರು. ಕಾರಣಾಂತರದಿಂದ ಅದನ್ನು ಅದನ್ನು ರೆಕಾರ್ಡ್ ಮಾಡುವುದು ತಪ್ಪಾಗಿದೆ. ತಾವು ಒಪ್ಪಿಗೆ ಕೊಟ್ಟರೆ ೪೦೦ ರೂಪಾಯಿಗಳನ್ನು ಮಾಡಬಹುದು ಎಂದು ಹೇಳುತ್ತೇನೆ. ಮಾನ್ಯ ಸದಸ್ಯರುಗಳು, ವರ್ತಕರು ತೊಂದರೆ ಕೊಡುವುದಕ್ಕೆ ಪ್ರಯತ್ನ ಮಾಡಬಹುದು ಎಂದು ಹೇಳಿದ್ದಾರೆ. ವರ್ತಕ ಮಂಡಲಿಯವರು ಫೈನ್ ವಿಚಾರವಾಗಿ ಕೆಲವು ಸಲಹೆಗಳನ್ನು ಕೊಟ್ಟಿದ್ದರು. ಇದು ಜಾಸ್ತಿಯಾಗಿದೆ, ಕಡಿಮೆ ಮಾಡಿ ಎಂದು ಹೇಳಿದ್ದರು. ಅದನ್ನು ಕಡಿಮೆ ಮಾಡಿದ್ದೇವೆ.

ಶ್ರೀ ಕೆ. ಹೆಚ್. ಪಾಟೀಲ್.—ನೀವು ಅವರಿಗೆ ಯೀಲ್ಡ್ ಆಗಿದ್ದೀರಿ. ಅದು ತಪ್ಪು.

ಶ್ರೀ ಆರ್. ಎಲ್. ಜಾಲಪ್ಪ.—ಸೆಕೆಂಡ್ ಮತ್ತು ಸಬ್ಸಿಕ್ವೆಂಟ್ ಅಫೆನ್ಸ್‌ಗೆ ಇಂಪ್ರಿಸನ್‌ಮೆಂಟ್ ಮಾಡಿ ಎಂದು ಹೇಳಿದರು. ಅವರೂ ಒಪ್ಪಿಕೊಂಡರು. ಆದ್ದರಿಂದ ಅದನ್ನು ಕಡಿಮೆ ಮಾಡಿದ್ದೇವೆ. ಅಷ್ಟೆ. ಬೇರೆ ಯಾವುದೂ ಕಡಿಮೆ ಮಾಡಲಿಲ್ಲ. ಡಿಪಾಜಿಟ್ ೫ ಸಾವಿರ ರೂಪಾಯಿಯಿಂದ ೨೦ ಸಾವಿರ ರೂಪಾಯಿ ಎಂದು ಮಾಡಿದ್ದೆವು. ಅದು ಸರಿಯಲ್ಲ, ೧ ಸಾವಿರ ರೂಪಾಯಿಯಿಂದ ೫ ಸಾವಿರ ರೂಪಾಯಿ ಮಾಡಿ ಎಂದು ಹೇಳಿದ್ದಾರೆ ಅದನ್ನು ಒಪ್ಪಿದ್ದೇವೆ. ಅದು ಅಂಥ ತೊಂದರೆ ಏನೂ ಅಲ್ಲ. ಅವರೂ ರೀಸನಬಲ್ ಆಗಿದ್ದರು. ಇನ್ನು ಏನು ವಿರೋಧ ಮಾಡಲಿಲ್ಲ. ಟ್ರೇಡರ್ಸ್ ಹೊರಗಡೆ ವ್ಯಾಪಾರ ಮಾಡಬಾರದು. ಅದನ್ನು ರೆಸ್ಟ್ರಿಕ್ಟ್ ಮಾಡುತ್ತೇವೆ. ಮಾರ್ಕೆಟ್ ಯಾರ್ಡ್‌ನಲ್ಲಿ ವ್ಯಾಪಾರ ಮಾಡಬೇಕೇ ಹೊರತು ಮಾರ್ಕೆಟ್ ಏರಿಯಾಗೆ ಹೋಗಬಾರದು ಎಂದು ಹೇಳಿದಾಗ ಬೆಂಗಳೂರಿನ ಛೇಂಬರ್ ಆಫ್ ಕಾಮರ್ಸ್ ಅಧ್ಯಕ್ಷರು ಅದನ್ನು ಸ್ವಾಗತಿಸಿ ಸ್ಟೇಟ್‌ಮೆಂಟ್ ಕೂಡಾ ಕೊಟ್ಟಿದ್ದಾರೆ. ಆದ್ದರಿಂದ ಅವರನ್ನು ನಾನು ವಂದಿಸುತ್ತೇನೆ. ಅವರು ಸ್ಟ್ರೈಕ್ ಮಾಡಲಾರರು ಎಂದು ಪೂರ್ಣವಾಗಿ ನಂಬಿದ್ದೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಮಾಡಿದರೂ ಹೆದರಬೇಡಿ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಶಿವನಂಜಪ್ಪನವರು ಮಾತನಾಡುವಾಗ ಇದು ಪರ್ಟಿನೆಂಟ್ ಕ್ವಶ್ಚನ್ ಎಂದು ಹೇಳಿದರು. ಹಾಗೂ ಅಧಿಕಾರಿಗಳು ಏನು ಮಾಡುತ್ತಿದ್ದಾರೆ ಎಂದು ಕೇಳಿದರು. ನೀವು ಯಾರು ಇದನ್ನು ಕೇಳುವುದಿಲ್ಲ ಎಂದು ನಾನು ಅಂದುಕೊಂಡಿದ್ದೆ. ನಿಮಗೆ ಅನುಭವ ಜಾಸ್ತಿ ಇದೆ. ಸೀನಿಯರ್ ಮಾರ್ಕೆಟಿಂಗ್ ಆಫೀಸರ್ ಅವರ ಜೊತೆ ಮಾತನಾಡಿ ಅಲ್ಲಿನ ಸೂಪರ್‌ವೈಸರ್‌ಗಳು ಏನು ಮಾಡುತ್ತಿದ್ದಾರೆ, ಅಲ್ಲಿನ ಸೆಕ್ರೆಟರಿಯವರು ಏನು ಮಾಡುತ್ತಿದ್ದಾರೆ, ವಿಚಾರಿಸಿ ಎಂದು ನಿನ್ನೆಯೇ ಹೇಳಿದ್ದೇನೆ. ಇದನ್ನು ನಮ್ಮ

ಪಕ್ಷದ ಸಭೆಯಲ್ಲೂ ಕೂಡ ಹೇಳಿದರು. ಹೀಗೆಲ್ಲಾ ಆಗುತ್ತಿದೆ ಏನು ಮಾಡುತ್ತೀರಿ ಎಂದು ಕೇಳಿದರು. ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿದ್ದೇನೆ. ಈ ಸಾರಿ ಚೆಕ್‌ಪೋಸ್ಟ್‌ಗಳನ್ನು ಮಾಡಬೇಕೆಂದು ಅಮೆಂಡ್‌ಮೆಂಟ್‌ನಲ್ಲಿ ಅವಕಾಶ ತಂದಿದ್ದೆವು. ಇದಕ್ಕೆ ಅಧ್ಯಕ್ಷರ ಕನ್‌ಸೆಂಟ್ ಬೇಕಾಗುತ್ತದೆ ಎಂದು ಲಾ ಡಿಪಾರ್ಟ್‌ಮೆಂಟ್‌ನಲ್ಲಿ ಒಪೀನಿಯನ್ ಕೊಟ್ಟರು. ಇದಕ್ಕೆ ಅಧ್ಯಕ್ಷರ ಕನ್‌ಸೆಂಟ್ ಬೇಕಾಗುತ್ತದೆ. ಅದನ್ನು ಅವರಿಗೆ ಕಳುಹಿಸಿಕೊಡುತ್ತಿದ್ದೇವೆ. ಈ ಅಮೆಂಡ್‌ಮೆಂಟ್‌ನಲ್ಲಿ ಇದಾಗಿಲ್ಲ ಎಲ್ಲಿ ತೆಗೆದುಕೊಂಡು ಹೋದರೂ ರೆಗ್ಯುಲೇಟೆಡ್ ಮಾರ್ಕೆಟ್ ಫೀಸ್ ಕೊಟ್ಟಿದ್ದಕ್ಕೆ ರಶೀತಿ ಇದ್ದರೆ ಮಾತ್ರ ಬಿಡಬೇಕು ಇಲ್ಲದೇ ಇದ್ದರೆ ಫ್ಲೋರ್‌ಫೀಟ್ ಮಾಡಬೇಕು ಎಂದು ಸೂಚಿಸಿದ್ದೇವೆ. ಇದನ್ನು ಅಧ್ಯಕ್ಷರಿಗೆ ಕಳುಹಿಸಿ ಪರವಾನಗಿ ಬಂದಮೇಲೆ ತಮ್ಮ ಮುಂದೆ ಅದನ್ನು ತರುತ್ತೇನೆ. ತರಕಾರಿ ಬಗ್ಗೆ ಪ್ರೊಟೆಕ್ಷನ್ ಬೇಕು ಎಂದು ಹೇಳಿದ್ದೀರಿ. ಮೈಸೂರು ಮಾರ್ಕೆಟ್, ಬೆಂಗಳೂರು ಮಾರ್ಕೆಟ್‌ನಲ್ಲಿ ರೆಗ್ಯುಲೇಟ್ ಮಾಡಿದ್ದೆವು. ಆದರೂ ಇನ್ನೂ ಸರಿಯಾಗಿ ನಡೆಯುತ್ತಿಲ್ಲ. ಬೆಂಗಳೂರು ಮತ್ತು ಮೈಸೂರು ಮಾರ್ಕೆಟ್‌ನಲ್ಲಿ ಕಮಿಷನ್ ಸಾಲದು, ೪ ಪರ್ಸೆಂಟ್ ಸಾಲದು ಎಂದು ಹೇಳಿದರು. ನಾವು ಬೇರೆ ರಾಜ್ಯದಿಂದ ವಿವರ ತರಿಸಿದ್ದೇವೆ. ಮಂತ್ರಿಮಂಡಲದಲ್ಲಿ ೫ ಪರ್ಸೆಂಟ್ ಕೊಡುವುದಕ್ಕೆ ಒಪ್ಪಿದ್ದಾರೆ. ಅದನ್ನು ತಮ್ಮ ಮುಂದೆ ತಿದ್ದುಪಡಿ ಮಾಡಿ ಇಟ್ಟಿದ್ದೇನೆ. ಮೊದಲು ಜಿಲ್ಲೆಗಳು ಎಲ್ಲೆಲ್ಲಿವೆ ಅಲ್ಲಿ ಮೊಟ್ಟಮೊದಲನೆಯದಾಗಿ ರೆಗ್ಯುಲೇಟ್ ಮಾಡುವುದಕ್ಕೆ ಯೋಜನೆ ತಂದಿದ್ದೇವೆ. ಇದು ಅಷ್ಟು ಸುಲಭ ಅಲ್ಲ. ಆದರೂ ಕಷ್ಟಪಟ್ಟು ಮಾಡಬೇಕೆಂದಿದ್ದೇವೆ. ಬೆಂಗಳೂರಿನಲ್ಲಿ ರೆಗ್ಯುಲೇಟ್ ಮಾಡುವುದು ಬಹಳ ಕಷ್ಟ. ಏಳೆಂಟು ವರ್ಷಗಳಿಂದ ಇದು ನೆನೆಗುದಿಗೆ ಬಿದ್ದಿತ್ತು. ಆಗಿರಲಿಲ್ಲ. ಬೇಕಾದಷ್ಟು ಪ್ರೆಷರ್ ಬರುತ್ತದೆ. ಹೀಗಾಗಿ ಮೈಸೂರು ಮತ್ತು ಬೆಂಗಳೂರಿನಲ್ಲಿ ಬಹಳ ಸಾರಿ ರೆಗ್ಯುಲೇಟ್ ಮಾಡಿ ಕಡೆಗೆ ಇದನ್ನು ಅಬೆಯನ್ಸ್‌ನಲ್ಲಿ ಇಡಬೇಕಾಗಿತ್ತು. ಈಗ ಎರಡು ಕಡೆ ಜಾರಿಗೆ ತಂದಿದ್ದೇವೆ. ಬೆಂಗಳೂರಿನಲ್ಲಿ ಜಾರಿಯಲ್ಲಿದೆ ಈಗಾಗಲೇ. ಬೇರೆ ಕಡೆಯೂ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ. ತುಮಕೂರು ಮಾರ್ಕೆಟ್ ಬಗ್ಗೆ ಶಿವನಂಜಪ್ಪನವರು ಹೇಳಿದರು. ಅದು ನೂರಕ್ಕೆ ನೂರು ಸತ್ಯ. ಇದನ್ನೇನಾದರೂ ಮಾಡಿ ತಪ್ಪಿಸಬೇಕೆಂದು ಮಾಡುತ್ತಿದ್ದೇವೆ. ತುಮಕೂರಿನಲ್ಲಿ ಹೊಸ ಮಾರ್ಕೆಟ್ ಯಾರ್ಡ್ ಆಗಿದೆ. ಕಳೆದ ಎರಡು ವರ್ಷದಿಂದ ಸತತವಾಗಿ ಇದನ್ನು ಮಾರ್ಕೆಟ್ ಯಾರ್ಡಿಗೆ ಷಿಫ್ಟ್ ಮಾಡುವುದಕ್ಕೆ ಪ್ರಯತ್ನಪಟ್ಟರೂ ಅದಕ್ಕೆ ಮಾರ್ಕೆಟ್ ಕಮಿಟಿಯವರ ಪೂರ್ಣ ಸಹಕಾರ ನಮಗೆ ಸಿಗಲಿಲ್ಲ. ನಾನು ೧೦ ಸಾರಿ ಮಾರ್ಕೆಟ್ ಯಾರ್ಡ್‌ಗೆ ಹೋಗಿದ್ದೇನೆ. ಕೊನೆಗೆ ಮಾಡಲೇಬೇಕು ಎಂದು ಸೆಪ್ಟೆಂಬರ್‌ನಲ್ಲಿ ಷಿಫ್ಟ್ ಮಾಡುವುದಕ್ಕೆ ಆಕ್ಷನ್ ತೆಗೆದುಕೊಂಡಿದ್ದೇವೆ. ಪ್ಲಾಟ್‌ಫಾರಂಗಳನ್ನು ಅಂಗಡಿಗಳನ್ನಾಗಿ ಮಾಡಿದ್ದೇವೆ. ಕಮಿಷನ್ ಏಜೆಂಟ್ಸ್ ಎರಡು ಸಾವಿರ ಮೂರು ಸಾವಿರ ವರ್ಷಕ್ಕೆ ಕೊಟ್ಟಿದ್ದಾರೆ. ಅಂಥವರಿಗೆ ಲೈಸೆನ್ಸ್ ಕೊಡಬೇಕಾಗಿಲ್ಲ, ಅಂಗಡಿಯೂ ಕೊಡಬೇಕಾಗಿಲ್ಲ. ಯಾರು ಆಕ್ಟೀವ್ ಆಗಿದ್ದಾರೆ ಅಂಥವರಿಗೆ ಅರ್ಜೆಂಟಾಗಿ ಕೊಡಬೇಕೆಂದು ಈ ವರ್ಷ ಮಾಡಿದ್ದೇವೆ. ಏನೇ ಆಗಲಿ ಅಕ್ಟೋಬರ್ ಮೊದಲನೆಯ ತಾರೀಖಿನ ದಿವಸ ಆ ಮಾರ್ಕೆಟ್ ಷಿಫ್ಟ್ ಮಾಡಿಸುತ್ತೇನೆ. ಆಗ ತಹಬಂದಿಗೆ ಬರುತ್ತದೆ. ಮಾನ್ಯ ಸದಸ್ಯರು ಹೇಳಿರುವುದನ್ನು ಪೂರ್ಣವಾಗಿ ನಾನು ಒಪ್ಪಿಕೊಳ್ಳುತ್ತೇನೆ. ಮಾನ್ಯ ಪಂಪಾಪತಿಯವರು ಬಹಳ ಮುಖ್ಯವಾದ ವಿಚಾರವನ್ನು ಹೇಳಿದ್ದಾರೆ. ನಾನು ಪ್ರಾರಂಭ ಮಾಡಿದ ಗೋಡೌನ್‌ನಲ್ಲಿ ಅವರೂ ಇದ್ದರು. ಸುಮಾರು ಒಂದೂವರೆವರ್ಷ ೨ ವರ್ಷ ಆಯಿತು. ಅಲ್ಲಿ ಅಂಗಡಿಗಳನ್ನು ತರಕಾರಿ ಮಾರ್ಕೆಟ್ ಆಗಿ ಕನ್‌ವರ್ಟ್ ಮಾಡಿ ಎಂದು ಹೇಳಿದೆ. ಅದು ಸಮಿತಿಯವರಿಗೆ ಹಿಡಿಸಲಿಲ್ಲ. ಅವರು ತಮಗೆ ಬೇಕಾದವರಿಗೆ ಅಂಗಡಿಗಳನ್ನು ಕೊಡುವುದಕ್ಕೆ ತೀರ್ಮಾನ ಮಾಡಿಕೊಂಡಿದ್ದರು. ಅದು ಆಗುವುದಿಲ್ಲ ಎಂದು ನಾನು ಹೇಳಿದೆ. ಟೆಂಡರ್ ಕರೆಯಿರಿ, ಎಷ್ಟು ಬಂದರೆ ಅಷ್ಟಕ್ಕೆ ಕೊಡಿ, ಸಾವಿರ ಬಂದರೆ ಸಾವಿರಕ್ಕೆ ಕೊಡಿ, ನೂರು ಬಂದರೆ ನೂರಕ್ಕೆ ಕೊಡಿ, ಆದರೆ ಇಷ್ಟಬಂದವರಿಗೆ ಕೊಡುವುದಕ್ಕೆನಾನು ಅಲೋ ಮಾಡುವುದಿಲ್ಲ ಎಂದು ಹೇಳಿದೆ. ಬಹಳಷ್ಟು ಒತ್ತಡಗಳನ್ನು ಅವರು ತಂದರು. ನಾನು ಅದಕ್ಕೆ ಈಲ್ಡ್ ಆಗಲಿಲ್ಲ. ತಾವು ಮುಖ್ಯಮಂತ್ರಿಗಳಿಗೆ ಬರೆದ ಪತ್ರದ ಪ್ರತಿ ನನಗೆ ಬಂದಿದೆ. ಅದಕ್ಕೆ ನಾನು ರಿಪ್ಲೈ ಮಾಡಿದ ಜ್ಞಾಪಕ ಇದೆ. ಸಮಿತಿಯವರ ತಪ್ಪಿನಿಂದಾಗಿ ಅಲ್ಲಿ ತಡವಾಗಿದೆ. ಅದರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದೇವೆ. ದನಗಳ ಮಾರಾಟದ ಬಗ್ಗೆ ಹೇಳಿದ್ದಾರೆ. ನಾನು ವಿಚಾರಿಸುತ್ತೇನೆ. ಮಾನ್ಯ ಸದಸ್ಯರಾದ ಇದಿನಬ್ಬ ಅವರು ಅಧಿಕಾರಿಗಳಿಂದ ಅನ್ಯಾಯ ಜಾಸ್ತಿಯಾಗಿದೆ, ಅವರ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಅದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಸುಮ್ಮನೆ ಆಶ್ವಾಸನೆ ಕೊಡಬೇಡಿ. ಅದಾಗುವುದಿಲ್ಲ. ಎಷ್ಟೋ ಜನ ಸೊಸೈಟಿಯಲ್ಲಿ ದರೋಡೆ ಮಾಡಿದ್ದಾರೆ. ಅಂಥವರ ಮೇಲೇ ನೀವು ಏನೂ ಮಾಡುವುದಕ್ಕಾಗಲಿಲ್ಲ. ಆದ್ದರಿಂದ ಸುಮ್ಮನೆ ಆಶ್ವಾಸನೆ ಕೊಡುವುದು ಬೇಡ. ಎಲ್ಲಿಯವರೆಗೆ ಇಲಾಖಾ ಮುಖ್ಯಸ್ಥರನ್ನು ರೆಸ್ಪಾನ್ಸಿಬಿಲಿಟಿ ಮಾಡುವುದಿಲ್ಲವೋ ಅಲ್ಲಿಯವರೆಗೆ ಈ ಕೆಲಸ ಆಗುವುದಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ಕೆ. ಹೆಚ್. ಪಾಟೀಲರಿಗೆ ಆಡಳಿತದಲ್ಲಿ ಬಹಳ ಅನುಭವ ಇದೆ. ಆ ಕಡೆ ಇರುವವರಲ್ಲಿ ಅರ್ಧ ಮುಕ್ಕಾಲು ಭಾಗ ಮಂತ್ರಿಯಾಗಿದ್ದವರು. ಮಾನ್ಯ ಖರ್ಗೆಯವರು, ಬಂಗಾರಪ್ಪನವರು, ಕೆ. ಹೆಚ್. ಪಾಟೀಲರು ಎಲ್ಲರೂ ಮಂತ್ರಿಗಳಾಗಿ ಕೆಲಸ ಮಾಡಿದವರು. ಸಿ.ಸಿ.ಎ. ರೂಲ್ಸ್ ಸುಟ್ಟುಹಾಕಿ ಹೊಸ ರೂಲ್ಸ್ ಎಲ್ಲಿಯವರೆಗೆ ಮಾಡುವುದಿಲ್ಲವೋ ಅಲ್ಲಿಯವರೆಗೆ ಅಧಿಕಾರಿಗಳನ್ನು ಕಂಟ್ರೋಲ್ ಮಾಡುವುದಕ್ಕಾಗುವುದಿಲ್ಲ. ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದರೆ ಎನ್‌ಕ್ವೈರಿ ಬೇಗ ಆಗುವುದಿಲ್ಲ. ಸಸ್ಪೆಂಡ್ ಮಾಡಿದರೆ ೭೫–೮೦ ಪರ್ಸೆಂಟ್ ಸಬ್ಸಿಸ್ಟೆನ್ಸ್ ಅಲೋಯೆನ್ಸ್ ಕೊಡಬೇಕು. ಬಹಳ ಜನ ಸಸ್ಪೆಂಡ್ ಮಾಡುವುದೇ ಮೇಲು ಎಂದು ಹೇಳುತ್ತಾರೆ. ಸಸ್ಪೆಂಡೇ ಮಾಡಿ ಎಂದು ಹೇಳುತ್ತಾರೆ. ಏನು ಮಾಡೋಣ ? ಈ ಇಕ್ಕಟ್ಟುಗಳಿವೆ. ಇದರ ಬಗ್ಗೆ ಸರ್ಕಾರ ಈಗಾಗಲೇ ಯೋಚನೆ ಮಾಡಿ ನೆರೆರಾಜ್ಯಗಳಲ್ಲಿ ಯಾವರೀತಿ ರೂಲ್ಸ್ ಇದೆ ಎಂಬುದನ್ನು ತರಿಸಿಕೊಂಡು ನಾವು ಹೊಸದಾಗಿ ಸಿ.ಸಿ.ಎ. ರೂಲ್ಸ್ ಮಾಡಬೇಕೆಂದು ಮಾಡಿದ್ದೇವೆ. ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕಾದದ್ದು ಯಾವುದೇ ಸರ್ಕಾರದ ಕರ್ತವ್ಯ. ಅದನ್ನು ಮಾಡಲೇಬೇಕಾಗುತ್ತದೆ. ಇಲ್ಲದಿದ್ದರೆ ಅಡ್ಮಿನಿಸ್ಟ್ರೇಷನ್‌ನಲ್ಲಿ ಬಿಗಿ ಇರುವುದಿಲ್ಲ. ಅದರ ಬಗ್ಗೆ ಈಗಾಗಲೇ ಗಮನ ಕೊಟ್ಟಿದ್ದೇವೆ. ಆಮೇಲೆ ರಾಮಯ್ಯನವರು ಹಿರಿಯೂರು ಎ.ಪಿ.ಎಂ.ಸಿ. ಬಗ್ಗೆ ಹೇಳಿದ್ದಾರೆ. ಹಿಂದೆ ಒಂದು ಪಿ.ಎಲ್.ಡಿ.ಬಿ. ಬಗ್ಗೆ ಹೇಳಿದ್ದರು. ನಾನು ಅದರ ಮೇಲೆ ಕ್ರಮ ತೆಗೆದುಕೊಂಡಿದ್ದೇನೆ, ಅವರು ನನ್ನ ಮೇಲೆ ಹೈಕೋರ್ಟಿಗೆ ಹಾಕಿ ಬಾಯಿಗೆ ಬಂದಹಾಗೆ ಬೈದು ಅಫಿಡವಿಟ್ ಫೈಲ್ ಮಾಡಿದರು. ಇರಲಿ. ಏನೇ ಆಗಲಿ ಇದನ್ನು ಗಮನಕ್ಕೆ ತೆಗೆದುಕೊಂಡು ಕೈಲಾದುದನ್ನು ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಎರಡೂ ಪಕ್ಷದ ಸದಸ್ಯರು ಇದನ್ನು ಸ್ವಾಗತಿಸಿದ್ದಾರೆ. ಬಹುಶಃ ನನ್ನ ಅದೃಷ್ಟ, ರಾಜ್ಯದ ಜನತೆಯ ಅದೃಷ್ಟ ಎಂದು ಮೊದಲೇ ಹೇಳಿದ್ದೇನೆ. ಇಷ್ಟು ಒಮ್ಮತದ ಅಭಿಪ್ರಾಯ ಯಾವುದೇ ಬಿಲ್‌ಗೆ ಬಂದಿಲ್ಲ. ಅದಕ್ಕಾಗಿ ನಾನು ಋಣಿಯಾಗಿದ್ದೇನೆ. ನನ್ನ ಮೇಲೆ ಮಾನ್ಯ ಸದಸ್ಯರು ಏನು ವಿಶ್ವಾಸ ಇಟ್ಟಿದ್ದಾರೆ ಅದಕ್ಕೆ ಚ್ಯುತಿ ಬರದಂತೆ ನೋಡಿಕೊಳ್ಳುತ್ತೇನೆಂದು ಆಶ್ವಾಸನೆ ಕೊಟ್ಟು ಈ ಬಿಲ್ಲನ್ನು ಪಾಸ್ ಮಾಡಬೇಕೆಂದು ಸಭೆಯನ್ನು ಪ್ರಾರ್ಥಿಸಿಕೊಳ್ಳುತ್ತೇನೆ.

ಅಧ್ಯಕ್ಷರು.—ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಹೀಗಿದೆ :

''೧೯೮೬ನೇ ಇಸವಿಯ ಕರ್ನಾಟಕ ವ್ಯವಸಾಯೋತ್ಪನ್ನ ಮಾರಾಟಗಳ ನಿಯಂತ್ರಣ ತಿದ್ದುಪಡಿ ವಿಧೇಯಕವನ್ನು ಸಭೆ ಪರ್ಯಾಲೋಚಿಸುವುದು.''

ಪ್ರಸ್ತಾವಕ್ಕೆ ಅನುಮೋದನೆ ದೊರಕಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರಿಶೀಲಿಸುವುದು

ಖಂಡ ೨ ರಿಂದ ೧೧ರ ವರೆಗೆ

ಅಧ್ಯಕ್ಷರು.—ಖಂಡ ಖಂಡವಾಗಿ ವಿಧೇಯಕವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ :

''ಖಂಡ ೨ ರಿಂದ ೧೧ರ ವರೆಗೆ ಖಂಡಗಳು ವಿಧೇಯಕದ ಅಂಗವಾಗಿರಬೇಕು''

ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿತು. ೨ ರಿಂದ ೧೧ನೇ ಖಂಡಗಳು ವಿಧೇಯಕದ ಅಂಗವಾದವು.

ಖಂಡ — ೧೨

ಅಧ್ಯಕ್ಷರು.—ಮಾನ್ಯ ಸದಸ್ಯರಾದ ವೆಂಕಟರಾಮಯ್ಯನವರು ಈ ಬಗ್ಗೆ ತಿದ್ದುಪಡಿ ಸೂಚನೆಯನ್ನು ಕೊಟ್ಟಿದ್ದಾರೆ. ಮಾನ್ಯ ಸದಸ್ಯರು ಅವರ ತಿದ್ದುಪಡಿಯನ್ನು ಮಂಡಿಸಬೇಕು.

ಶ್ರೀ ಆರ್. ವೆಂಕಟರಾಮಯ್ಯ.—ನನ್ನ ತಿದ್ದುಪಡಿ ಹೀಗಿದೆ :

In item 9 of Sub-clause (2) of Clause 12, after the word "famine" the words "drought or drought affected area" shall be added.

ಅಧ್ಯಕ್ಷರು.—ತಿದ್ದುಪಡಿಯನ್ನು ಮಂಡಿಸಲಾಗಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಇದರಲ್ಲಿ ಫ್ಯಾಮಿನ್ ಎಂದು ಹೇಳಿದ್ದಾರೆ. ಈ ಫ್ಯಾಮಿನ್ ಕೋಡ್‌ನಿಂದ ರೈತರಿಗೆ ಏನೂ ಅನುಕೂಲ ಆಗಿಲ್ಲ. ಆದ್ದರಿಂದ ಡ್ರಾಟ್ ಅಫೆಕ್ಟೆಡ್ ಏರಿಯಾ ಎಂದು ಹೇಳಿದ್ದೇನೆ. ದಯವಿಟ್ಟು ನನ್ನ ತಿದ್ದುಪಡಿಯನ್ನು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಈಗಾಗಲೇ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟನ್ನು ತಮ್ಮ ಮುಂದೆ ಓದಿದ್ದೇನೆ. ನಾವು ಇದನ್ನು ಯೋಚನೆ ಮಾಡಿಯೇ ಫ್ಯಾಮಿನ್ ಎಂದು ಹಾಕಿದ್ದೇವೆ. ಡ್ರೌಟ್ ಎಂದರೆ ಬೆಳೆ ಕಡಿಮೆಯಾದರೂ ಡ್ರೌಟ್ ಎಂದು ಡಿಕ್ಲೇರ್ ಮಾಡಬಹುದು. ಆದ್ದರಿಂದ ಫ್ಯಾಮಿನ್ ಎಂದು ಹಾಕಿದ್ದೇವೆ. ವೆಲಿಡಿಟಿ ಪ್ರಶ್ನೆ ಬಂದರೆ ಕಷ್ಟವಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಫ್ಯಾಮಿನ್ ಕೋಡ್ ಏನಿದೆ ಅದರಿಂದ ಏನೂ ಸಹಾಯ ಮಾಡುವುದಕ್ಕಾಗುವುದಿಲ್ಲ. ಆ ಕಂಡೀಷನ್ ಪ್ರಕಾರ ಒಂದು ವರ್ಷವೂ ನಮ್ಮಲ್ಲಿ ಫ್ಯಾಮಿನ್ ಇಲ್ಲ ಎಂದು ಹೇಳಿದ ಹಾಗಾಗುತ್ತದೆ. ಎಷ್ಟೋ ಬಾರಿ ಬರಗಾಲ ಬಂದುಹೋಯಿತು, ೧೯೭೬ರಲ್ಲಿ, ೧೯೭೯-೮೦ರಲ್ಲಿ, ೧೯೮೪-೮೫ರಲ್ಲಿ ಎಲ್ಲಾ ಬಂದಿದೆ. ಆ ಕೋಡ್ ಪ್ರಕಾರ ಫ್ಯಾಮಿನ್ ಇಲ್ಲವೇ ಇಲ್ಲ. ಆದ್ದರಿಂದ ತೊಂದರೆಯಾಗುತ್ತದೆ, ಬೇಕಾದರೆ ಅದಕ್ಕೆ ಡ್ರಾಟ್ ಅಥವಾ ಸ್ಕೇರ್ಸಿಟಿ ಎಂದು ಸೇರಿಸಿ ಕೊಳ್ಳಿ.

ಶ್ರೀ ಆರ್. ಎಲ್. ಜಾಲಪ್ಪ.—ಲಾ ಡಿಪಾರ್ಟ್‌ಮೆಂಟ್‌ನವರ ಜೊತೆಯಲ್ಲಿ ಚರ್ಚೆ ಮಾಡಿ ವೆಲಿಡಿಟಿ ಕ್ವೆಶ್ಚನ್ ಬಂದಾಗ ಅದು ಬಿದ್ದುಹೋಗಬಾರದು ಎಂದು ಇದನ್ನು ಸೇರಿಸಿದ್ದೇವೆ. ಇದರಿಂದ ತೊಂದರೆಯಾಗುವುದಿಲ್ಲ. ದಯಮಾಡಿ ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ವೆಂಕಟರಾಮಯ್ಯನವರು ತಂದಿರುವ ತಿದ್ದುಪಡಿಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.

''In item 9 of Sub-Clause (2) of clause 12, after the word ''famine'' the words drought or drought affected area ''shall be added''

(Motion was negatived and the amendment was rejected)

ಅಧ್ಯಕ್ಷರು.—ಪ್ರಶ್ನೆ ಏನೆಂದರೆ, ''ಖಂಡ ೧೨ ವಿಧೇಯಕದ ಅಂಗವಾಗಿರಬೇಕು''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೧೨ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧೩ ರಿಂದ ೧೯

ಅಧ್ಯಕ್ಷರು.—ಪ್ರಶ್ನೆ ಏನೆಂದರೆ ''ಖಂಡ ೧೩ ರಿಂದ ೧೯ ಎರಡೂ ಒಳಗೊಂಡಂತೆ ವಿಧೇಯಕದ ಅಂಗವಾಗಿರಬೇಕು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೧೩ ರಿಂದ ೧೯ ರವರೆಗೆ ಎರಡೂ ಒಳಗೊಂಡಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೨೦

ಅಧ್ಯಕ್ಷರು,—ಖಂಡ ೨೦ನ್ನು ವಿಧೇಯಕದಿಂದ ತೆಗೆದುಹಾಕಬೇಕೆಂದು ಸೂಚನೆ ಬಂದಿದೆ. ಈ ಸೂಚನೆಯನ್ನು ತಿದ್ದುಪಡಿ ಎಂದು ಪರಿಗಣಿಸಲಾಗುವುದಿಲ್ಲ. ಪ್ರಸ್ತಾಪಕ್ಕೆ ಹಾಕಿದಾಗ ಅದನ್ನು ಒಪ್ಪಬೇಕಾಗಿಲ್ಲ. ಈಗ ಪ್ರಶ್ನೆ ಏನೆಂದರೆ,

''ಖಂಡ ೨೦ ವಿಧೇಯಕದ ಅಂಗವಾಗಿರಬೇಕು''

ಪ್ರಸ್ತಾವ ತಿರಸ್ಕರಿಸಲ್ಪಟ್ಟಿತು

(ಖಂಡ ೨೧ನ್ನು ವಿಧೇಯಕದಿಂದ ತೆಗೆದುಹಾಕಲ್ಪಟ್ಟಿತು)

ಖಂಡ ೨೧

ಅಧ್ಯಕ್ಷರು.—ಪ್ರಶ್ನೆ ಏನೆಂದರೆ,

"ಖಂಡ ೨೧ ವಿಧೇಯಕದ ಅಂಗವಾಗಿರಬೇಕು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨೧ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೨೨

ಅಧ್ಯಕ್ಷರು.—ಈಗ ಸಹಕಾರ ಸಚಿವರು ಹಾಗೂ ಶ್ರೀ ವೆಂಕಟರಾಮಯ್ಯನವರು ತಿದ್ದುಪಡಿ ಸೂಚನೆಯನ್ನು ಕೊಟ್ಟಿದ್ದಾರೆ. ಅವರುಗಳು ಈಗ ತಿದ್ದುಪಡಿ ಸೂಚನೆಯನ್ನು ಮಂಡಿಸಬೇಕು.

SRI R.L. JALAPPA (Minister for Co-operation).—Sir, I beg to move:

> "That in Clause 22, in the proviso to sub-section (1) of Section 78, for the word "four" the word "five" shall be substituted."

The question was proposed

ಶ್ರೀ ಆರ್. ವೆಂಕಟರಾಮಯ್ಯ.—Sir, I beg to move:

> "That in Clause 22, in item (c) of Sub Clause (2) to Clause 22, for the words "as soon as such goods are sold" the words "on the very day itself" shall be substituted"

The question was proposed

ಶ್ರೀ ಆರ್. ವೆಂಕಟರಾಮಯ್ಯ.—ಇದರಲ್ಲಿ ಕಮೀಷನ್ ಏಜೆಂಟ್ಸ್ ಅವತ್ತೇ ರೈತರಿಗೆ ದುಡ್ಡು ಕೊಡಬೇಕೆಂದು ಸಜೆಸ್ಟ್ ಮಾಡಿದ್ದೇನೆ. ಇದನ್ನು ಮಾನ್ಯ ಸಚಿವರು ಒಪ್ಪಿಕೊಳ್ಳಬಹುದು.

SRI R.L. JALAPPA.—Sir, in this clause "as soon as the goods are sold" ಎಂದು ಮಾಡಿದ್ದೇವೆ. ಅವತ್ತೇ ಕೊಡಬೇಕು ಎಂದರೆ ರಾತ್ರಿ ೧೦ ಗಂಟೆ ಕೂಡ ಆಗಬಹುದು. As soon as goods are sold ಎಂದು ಮಾಡಿರುವುದರಿಂದ ೩ ಗಂಟೆಗೆ ಬಿಕರಿಯಾದರೆ ಮೂರೂವರೆಗೇ ಹಣ ಸಿಗುತ್ತದೆ. ಆದ್ದರಿಂದ ತಿದ್ದುಪಡಿಯನ್ನು ಸದಸ್ಯರು ಪ್ರೆಸ್ ಮಾಡಬಾರದೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಹಾಗಾದರೆ ನಾನು ಈ ತಿದ್ದುಪಡಿಯನ್ನು ಪ್ರೆಸ್ ಮಾಡುವುದಿಲ್ಲ.

(The Amend of Sri R. Venkataramaiah was by leave of the House withdrawn)

ಅಧ್ಯಕ್ಷರು.—ಮಾನ್ಯ ಸಚಿವರ ತಿದ್ದುಪಡಿಗಳನ್ನು ಮತಕ್ಕೆ ಹಾಕುತ್ತೇನೆ.

That in clause 22 in the proviso to sub-section (1) of Sec. 78 for the word "four" the word "five" shall be substituted.

The motion was accepted

ಅಧ್ಯಕ್ಷರು.—ಈಗ ಪ್ರಶ್ನೆ ಏನೆಂದರೆ "ಖಂಡ ೨೨ ತಿದ್ದುಪಡಿಯಾದಂತೆ ವಿಧೇಯಕದ ಅಂಗವಾಗಿರಬೇಕು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨೨ ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೨೩

ಅಧ್ಯಕ್ಷರು.—ಪ್ರಶ್ನೆ ಏನೆಂದರೆ, "ಖಂಡ ೨೩ ವಿಧೇಯಕದ ಅಂಗವಾಗಿರಬೇಕು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨೩ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೨೪

ಅಧ್ಯಕ್ಷರು.—ಮಾನ್ಯ ಸಹಕಾರ ಸಚಿವರು ಹಾಗೂ ವೆಂಕಟರಾಮಯ್ಯನವರು ತಿದ್ದುಪಡಿ ಸೂಚನೆ ಕೊಟ್ಟಿದ್ದಾರೆ.

ಶ್ರೀ ಆರ್. ವೆಂಕಟರಾಮಯ್ಯ.—ನಾನು ನನ್ನ ತಿದ್ದುಪಡಿಯನ್ನು ಪ್ರೆಸ್ ಮಾಡುವುದಿಲ್ಲ.

SRI R.L. JALAPPA.—Sir, I beg to move:

"That in Clause 24, in Section 82A, for the word "thirty" the word "seven" shall be substituted.

The question was proposed

ಅಧ್ಯಕ್ಷರು.—ಪ್ರಶ್ನೆ ಏನೆಂದರೆ,

"That in Clause 24, in Section 82A, for the word "thirty" the word "seven" shall be substituted."

The Motion was adopted

ಅಧ್ಯಕ್ಷರು.—ಪ್ರಶ್ನೆ ಏನೆಂದರೆ, "ಖಂಡ ೨೪ ತಿದ್ದುಪಡಿಯಾದಂತೆ ವಿಧೇಯಕದ ಅಂಗವಾಗಿರಬೇಕು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨೪ ತಿದ್ದುಪಡಿಯಾದಂತಹ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೨೫ ಮತ್ತು ೨೬

ಅಧ್ಯಕ್ಷರು.—ಪ್ರಶ್ನೆ ಏನೆಂದರೆ, "ಖಂಡ ೨೫ ಮತ್ತು ೨೬ ವಿಧೇಯಕದ ಅಂಗವಾಗಿರಬೇಕು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨೫ ಮತ್ತು ೨೬ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೨೭

ಅಧ್ಯಕ್ಷರು.—ಮಾನ್ಯ ಸಹಕಾರ ಸಚಿವರು ತಿದ್ದುಪಡಿ ಸೂಚನೆ ಕೊಟ್ಟಿದ್ದಾರೆ.

SRI R.L. JALAPPA.—Sir, I beg to move:

"That in Clause 27, in sub-clause (1) for the words "five hundred" and "twenty thousand" the words "one thousand" and "five thousand" shall respectively be substituted."

The question was proposed

ಅಧ್ಯಕ್ಷರು.—ಪ್ರಶ್ನೆ ಏನೆಂದರೆ,

"That in Clause 27, in sub-clause (i) for the words "five hundred" and "twenty thousand" the words "one thousand" and "five thousand" shall respectively be substituted."

The Motion was adopted

ಅಧ್ಯಕ್ಷರು.—ಪ್ರಶ್ನೆ ಏನೆಂದರೆ, "ಖಂಡ ೨೭ ತಿದ್ದುಪಡಿಯಾದಂತೆ ವಿಧೇಯಕದ ಅಂಗವಾಗಿರಬೇಕು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨೭ ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೨೮ ರಿಂದ ೪೨

ಅಧ್ಯಕ್ಷರು.—ಪ್ರಶ್ನೆ ಏನೆಂದರೆ, "ಖಂಡ ೨೮ ರಿಂದ ೪೨ ಎರಡನ್ನೂ ಒಳಗೊಂಡಂತೆ ವಿಧೇಯಕದ ಅಂಗವಾಗಿರಬೇಕು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨೮ ರಿಂದ ೪೨ ಎರಡನ್ನೂ ಒಳಗೊಂಡಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೪೩

SRI R.L. JALAPPA.—I beg to move:

"That in Clause 43, in Section 118 for the words "one thousand" the words "five hundred" shall be substituted and the proviso there shall be omitted."

The question was proposed.

೩-೦೦ ಪಿ.ಎಂ.

ಶ್ರೀ ಕೆ.ಹೆಚ್. ಪಾಟೀಲ್.—ನಾವು ಸಾಮಾನ್ಯವಾಗಿ ಎಲ್ಲಾ ತಿದ್ದುಪಡಿಗಳನ್ನೂ ಒಪ್ಪಿದ್ದೇವೆ. ಇಡೀ ಈ ಮಸೂದೆಯನ್ನೇ ನಾವು ಸ್ವಾಗತ ಮಾಡಿದ್ದೇವೆ. ಆದರೆ ಈ ಒಂದು ತಿದ್ದುಪಡಿಯನ್ನು ಮಾತ್ರ ವಿರೋಧ ಮಾಡುತ್ತಿದ್ದೇವೆ. ಇಲ್ಲಿ ೩ ತಿಂಗಳಿಗೆ ಬದಲಾಗಿ ೧ ವರ್ಷ ಟೈಮ್ ಎಂದು ಇರಬೇಕಾಗಿತ್ತು. ಆದರೆ ಮಾನ್ಯ ಜಾಲಪ್ಪನವರು ೬ ತಿಂಗಳು ಎಂದು ತಿದ್ದುಪಡಿಯನ್ನು ತಂದಿದ್ದಾರೆ. ಇದು ಇನ್ನೂ ಹೆಚ್ಚಿಗೆ ಇರಬೇಕಾಗಿತ್ತು ಎಂದು ನಾನು ಹೇಳಬಯಸುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ.—೬ ತಿಂಗಳು ಎಂಬುದು ಹಾಗೆಯೇ ಇದೆ. ವರ್ತಕರ ಮಂಡಲಿಯವರು ಮಾನ್ಯ ಮುಖ್ಯ ಮಂತ್ರಿಗಳ ಜೊತೆ ಚರ್ಚೆ ಮಾಡಿದಾಗ ಅದನ್ನು ನಾವು ಒಪ್ಪಿಕೊಂಡಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಅಂದರೆ ನೀವು ವರ್ತಕರ ಪರವಾಗಿದ್ದೀರೆಂದು ನಾವು ತಿಳಿದು ಕೊಳ್ಳಬಹುದೆ ?

MR. SPEAKER.—The question is: That in clause 43, in Section 118 for the words "one thousand" the words "five hundred" shall be substituted and the proviso there to shall be omited."

The Motion was accedpted

ಅಧ್ಯಕ್ಷರು.—" ಖಂಡ ೪೩ ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸ್ಪಟ್ಟಿತು

(ಖಂಡ ೪೩ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೪೪ ರಿಂದ ೫೩ ರವರೆಗೆ

ಅಧ್ಯಕ್ಷರು.—ಖಂಡ ೪೪ ರಿಂದ ೫೩ ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೪೪ ರಿಂದ ೫೩ ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ ೧ ಇತ್ಯಾದಿ.—

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ: "ಮೊದಲನೇ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲಾಯಿತು

(ಮೊದಲನೇ ಖಂಡ. ದೀರ್ಘ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಆರ್.ಎಲ್. ಜಾಲಪ್ಪ.—೧೯೮೬ನೇ ಕರ್ನಾಟಕ ವ್ಯವಸಾಯೋತ್ಪನ್ನಗಳ ಮಾರುಕಟ್ಟೆ (ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾಗಿರುವಂತೆ ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ: "೧೯೮೬ರ ಕರ್ನಾಟಕ ವ್ಯವಸಾಯೋತ್ಪನ್ನಗಳ ಮಾರುಕಟ್ಟೆ (ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಅಧ್ಯಕ್ಷರು.—ಸಭೆಯನ್ನು ಇಲ್ಲಿಗೆ ಮುಕ್ತಾಯ ಮಾಡಿ ತಾ: ೨೫-೮-೮೬ನೇ ಸೋಮವಾರ ಬೆಳಿಗ್ಗೆ ೧೧ ಗಂಟೆಯವರೆಗೂ ಸಭೆಯನ್ನು ಮುಂದೂಡಿದ್ದೇನೆ.

(ಸದನವು ಮಧ್ಯಾಹ್ನ ೩ ಗಂಟೆ ೪ ನಿಮಿಷಕ್ಕೆ ಮುಕ್ತಾಯವಾಗಿ ಮತ್ತೆ ತಾ. ೨೫-೮-೮೬ರ ಸೋಮವಾರ ಬೆಳಿಗ್ಗೆ ೧೧ ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು.)